ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


18 ಜನವರಿ 2017 ಪುಟ 20 ರೂ. 15/-


ಆಧುನಿಕ ಶಿಕ್ಷಣದ ಹರಿಕಾರ ಸಯ್ಯದ್ ಅಹಮದ್ ಖಾನ್



ಚೆಡ್ಡಿ ಸಂಸದರ ನಖರಾ







ಉಳಿಸಿಹೋದ ಕೊರಗು


ಉಗ್ರಪ್ಪ ವಿರುದ್ಧ ರಾಘು ಪಟಾಲಂ

ಮಳವಳ್ಳಿ: ಕೇಬಲ್ ಕುಮಾರನ ಹಂತಕರು ಅಂದರ್

ಕುಷ್ಟಗಿ: ಸೂಡಿ ವಕೀಲರ 'ಜೆಡಿಎಸ್' ಕೊಸರಾಟ

ನೋಟು ರದ್ದತಿ ಏಕಾಗಿ?-I

ಅಂಚಿನಿಂದ....



ಡಾ.ವಾಸು ಎಚ್.ವಿ.

'ಇದು ಕಪ್ಪುಹಣದ ವಿರುದ್ಧದ ಸಮರ' ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಡಿಸೆಂಬರ್ 8ರಂದು ಘೋಷಿಸಿದರು. 500 ಮತ್ತು 1000 ರೂ.ಗಳ ನೋಟು ರದ್ದತಿಯನ್ನು ಮಾಡುತ್ತಿರುವುದಕ್ಕೆ ಅವರು ಕೊಟ್ಟಂತಹ ಪ್ರಧಾನ ಕಾರಣ ಅದೇ ಆಗಿತ್ತು. ಅದರ ಜೊತೆಗೆ ಭ್ರಷ್ಟಾಚಾರ, ಖೋಟಾನೋಟು ತಡೆಗಟ್ಟುವುದು ಮತ್ತು ಭಯೋತ್ಪಾದನೆಯನ್ನು ಮಟ್ಟ ಹಾಕುವುದು. ಆದರೆ, ಇವ್ಯಾವುದೂ ಅದರಿಂದ ಆಗುವುದಿಲ್ಲ ಎಂದು ಹಲವರು ತಾರ್ಕಿಕ ಕಾರಣಗಳನ್ನು ಮುಂದಿಟ್ಟು ವಾದಿಸಿದರು. ಮೋದಿಯವರ ಅಭಿಮಾನಿವೃಂದವೂ ಸೇರಿದಂತೆ ದೇಶದ ಜನಸಾಮಾನ್ಯರು, ಇದರಿಂದ ಕಪ್ಪುಹಣದ ನಿರ್ಮೂಲನೆ ಮತ್ತು ಇನ್ನಿತರ ಸಾಧನೆಗಳು ಆಗಬಹುದು ಎಂದು ಭಾವಿಸಿದರು ಮತ್ತು ವಾದಿಸಿದರು. 5-10 ದಿನ ಕಳೆಯುತ್ತಿದ್ದಂತೆ, ಅವ್ಯಾವುದೂ ಆಗುವುದಿಲ್ಲ ಎಂದು ಇತರರಿಗೆ ಗೊತ್ತಾಯಿತೋ ಇಲ್ಲವೋ ಸ್ವತಃ ಮೋದಿಯವರಿಗೆ ಗೊತ್ತಾಯಿತು. ಆಗ ಅವರು ಬುಟ್ಟಿಯಿಂದ ಹೊಸ ಹಾವು ತೆಗೆದರು. ಅದೇ ಕ್ಯಾಷ್‌ಲೆಸ್ ಆರ್ಥಿಕತೆ ಅಥವಾ ನಗದುರಹಿತ ಆರ್ಥಿಕತೆ. ಇದರಿಂದ ದೇಶದಲ್ಲಿ ಪ್ರತೀ ರೂಪಾಯಿ ಎಲ್ಲಿಗೆ ಹೋಗುತ್ತದೆ ಎಂಬುದು ಪತ್ತೆಯಾಗುವುದರಿಂದ ಭವಿಷ್ಯದಲ್ಲಿ ಕಪ್ಪುಹಣ ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟಬಹುದು ಎಂದ ಪ್ರತಿಪಾದಿಸಿದರು. ಈ ನಗದುರಹಿತ ಆರ್ಥಿಕತೆಯ ವಾಸ್ತವವೇನು ಎಂಬುದನ್ನು ಕೂಲಂಕಷವಾಗಿ ನೋಡೋಣ.

ಆದರೆ ಅದಕ್ಕೆ ಮುಂಚೆ ಒಂದು ಅಂಶವನ್ನು ಹೇಳದಿದ್ದರೆ ತಪ್ಪಾದೀತು. ನವೆಂಬರ್ 8ರ ತಮ್ಮ ಐತಿಹಾಸಿಕ ಭಾಷಣದಲ್ಲಿ ಪ್ರಧಾನಮಂತ್ರಿ ಒಂದೇ ಒಂದು ಸಾರಿಯೂ ನಗದುರಹಿತ ಆರ್ಥಿಕತೆ ಎನ್ನುವ ಪದವನ್ನು ಉಚ್ಚರಿಸಿರಲಿಲ್ಲ, ಅದೇ ದಿನ ಅವರ ಕಚೇರಿಯಿಂದ ನೀಡಿದ ಪತ್ರಿಕಾಹೇಳಿಕೆಯಲ್ಲೂ ಈ ನಗದುರಹಿತ ಆರ್ಥಿಕತೆ ಎಂಬ ಪದವನ್ನು ಒಂದು ಸಾರಿಯೂ ಬಳಸಿರಲಿಲ್ಲ, ಆ ದಿನ ಅವರು ಕಪ್ಪು ಹಣ ಎನ್ನುವ ಪದವನ್ನು 18 ಬಾರಿಯೂ, ಖೋಟಾ ನೋಟು ಎಂಬ ಪದವನ್ನು 5 ಸಾರಿಯೂ ಉಚ್ಚರಿಸಿದ್ದರು. ಅದೇ ಪ್ರಧಾನಮಂತ್ರಿ ನವೆಂಬರ್ 27ರಂದು ಇದೇ ವಿಚಾರದ ಕುರಿತು ಎರಡು ಭಾಷಣಗಳನ್ನು ಮಾಡಿದರು. ಅದರಲ್ಲಿ ಅವರು ನಗದುರಹಿತ ಆರ್ಥಿಕತೆ ಯನ್ನು 24 ಸಾರಿಯೂ, ಕಪ್ಪುಹಣ ಎಂಬ ಪದವನ್ನು ಕೇವಲ 9 ಸಾರಿಯೂ ಉಚ್ಚರಿಸಿದರು. ಎಷ್ಟು ಬಾರಿ ಯಾವ ಪದ ಬಳಸಿದರು ಎಂಬುದನ್ನು ಹೇಳುವುದು, ಪ್ರಧಾನ ಮಂತ್ರಿಯವರ ಫೋಕಸ್ ಏನಾಗಿತ್ತು ಎಂಬುದರ ಕುರಿತು ಗಮನ ಸೆಳೆಯಲಷ್ಟೇ. ಈ ರೀತಿ ಪದ ಬಳಕೆಯ ಹಿಂದೆ ಒಂದು ಪರಿಕಲ್ಪನೆ ಇತ್ತು ಎಂಬುದನ್ನು ಮರೆಯದೇ, ಈ ನಗದುರಹಿತ ಆರ್ಥಿಕತೆಯ ಅಸಲೀ ಸಂಗತಿಗಳನ್ನು ನೋಡೋಣ.

ನಮ್ಮ ಕೈನಲ್ಲಿ ನೇರವಾಗಿ ಹಣವನ್ನೇ ಚಲಾವಣೆ ಮಾಡದೇ ಡಿಜಿಟಲ್ ಉಪಕರಣಗಳ ಮೂಲಕ ವ್ಯಕ್ತಿಯು ನೇರವಾಗಿ ಹಣದ ವರ್ಗಾವಣೆ ಮಾಡುವುದೇ ನಗದುರಹಿತ ಆರ್ಥಿಕತೆ (cashless economy), ಡಿಜಿಟಲೀಕರಣ ಇತ್ಯಾದಿ ಪದಗಳಿಂದ ಕರೆಯಲ್ಪಡುತ್ತಿದೆ. ಇದಕ್ಕೆ ಲಭ್ಯವಿರುವ ದಾರಿಗಳು ಏನೇನು ಎಂಬುದನ್ನು ಇಂಗ್ಲಿಷಿನಲ್ಲೇ ಇಲ್ಲಿ ಕೊಡಲಾಗಿದೆ. ಇಂಗ್ಲಿಷ್ ಬಲ್ಲವರಷ್ಟೇ ಸುಲಭವಾಗಿ ಬಳಸುತ್ತಿರುವ, ಇತರರು ಅದನ್ನು ಬಳಸಲು ಹಿಂಜರಿಯುತ್ತಿರುವ ಸಂದರ್ಭದಲ್ಲೇ ನಾವಿದ್ದೇವೆ. Mobile wallets, IMPS: immediate payment system, POS: point of sale machines, PPI: prepaid payment instrument, Mobile banking/internet banking, UPI: unified payment interface, NACH: National automated clearing house ಇವುಗಳಲ್ಲಿ ಕೆಲವು ಹಣ ವರ್ಗಾವಣೆಯ ವಿಧಾನವನ್ನೂ, ಕೆಲವು ಬಳಕೆಯ ಮಾಧ್ಯಮವನ್ನೂ ಸೂಚಿಸುತ್ತವೆ. ಈ ಹಿಂದಿನಿಂದಲೂ ಬ್ಯಾಂಕುಗಳಲ್ಲಿ Cheque, NEFT: national electronic fund transfer, RTGS ಇವುಗಳಲ್ಲಿ Cheque ಬಿಟ್ಟರೆ ಬಳಕೆಯಲ್ಲಿರುವುದು ಬ್ಯಾಂಕ್ ಅಕೌಂಟ್ ಇರುವ ಎಲ್ಲರಿಗೂ ಗೊತ್ತಿತ್ತು ಎಂದೇನೂ ಹೇಳಲಾಗದು. ಇರಲಿ, ಈ ರೀತಿಯ ವಿಧಾನ ಗಳಲ್ಲದೇ ನೇರವಾಗಿ ನಗದು ವ್ಯವಹಾರವನ್ನು ಯಾವ್ಯಾವ ದೇಶದಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಮಾಡುತ್ತಿದ್ದಾರೆ ನೋಡೋಣ.

ಆಸ್ಟ್ರೇಲಿಯಾ 65%, ಆಸ್ಟ್ರಿಯಾ 80%, ಕೆನಡಾ 52%, ಫ್ರಾನ್ಸ್ 55%, ಜರ್ಮನಿ 80%, ನೆದರ್‌ಲ್ಯಾಂಡ್ 50% ಮತ್ತು ಅಮೆರಿಕದಲ್ಲಿ 46%ನಷ್ಟು ನಗದು ವ್ಯವಹಾರ ಇಂದಿಗೂ ನಡೆಯುತ್ತಿದೆ. ಈ ಪ್ರಮಾಣ ಈಚೆಗೆ ಇನ್ನೂ ಇನ್ನೂ ಕಡಿಮೆಯಾಗುತ್ತಿಲ್ಲ, ವಾಸ್ತವದಲ್ಲಿ 2005ರಿಂದ ಇಲ್ಲಿಯವರೆಗೆ ಅಮೆರಿಕ ಮತ್ತು ಯೂರೋಪ್‌ಗಳಲ್ಲಿ ಚಲಾವಣೆಯಲ್ಲಿದ್ದ ನಗದಿನ ಪ್ರಮಾಣ ಎರಡು ಪಟ್ಟಾಗಿದೆ. ಡಾಲರ್‌ನ ಪ್ರಮಾಣ 1.48 ಟ್ರಿಲಿಯನ್‌ಗಳಿಗೂ, ಯೂರೋ 1.1 ಟ್ರಿಲಿಯನ್ ಯೂರೋಗಳಿಗೂ ಹೆಚ್ಚಾಗಿದೆ. ಭಾರತದಲ್ಲಿ ಇದರ ಪ್ರಮಾಣವನ್ನು ಶೇ.2ರಿಂದ ಶೇ.5ರವರೆಗೆ ವಿವಿಧ ರೀತಿಯ ಅಂದಾಜು ಮಾಡಲಾಗುತ್ತಿದೆ. ಇರಲಿ, ಶೇ.4ರಷ್ಟಿತ್ತು ಎಂದಿಟ್ಟುಕೊಳ್ಳೋಣ. ಪ್ರಧಾನಮಂತ್ರಿಗಳ ಮೊನ್ನೆಯ ಮನ್‌ಕೀಬಾತ್ ಕಾರ್ಯಕ್ರಮದಲ್ಲಿ ಅವರೇ ಹೇಳಿದ್ದು ಇದು ಶೇ.200ರಿಂದ ಶೇ.300ವರೆಗೆ ಕಳೆದ 50 ದಿನಗಳಲ್ಲಿ ಹೆಚ್ಚಳವಾಗಿದೆಯಂತೆ. ಪ್ರಧಾನಮಂತ್ರಿಯಂಥವರೇ ಇಂಥದ್ದನ್ನು 200ರಿಂದ 300 ಎಂದು ಹೇಳುವುದು ತಮಾಷೆಯಾಗಿ ಕಾಣುತ್ತದೆ. ಅದನ್ನು ಶೇ.250 ರಷ್ಟು ಹೆಚ್ಚಳವೆಂದಿಟ್ಟುಕೊಂಡರೂ ಅದು ಶೇ.14ಕ್ಕೆ ಬಂದು ನಿಲ್ಲುತ್ತದೆ. ಈ ಶೇ.14ರ ಸಾಧನೆ ಮಾಡಲಿಕ್ಕಾಗಿ ಶೇ.100ರಷ್ಟು ಜನರ (ಯಾರು ಈ ಸದ್ಯ ಶೇ.14ರೊಳಗೆ ಬರಲು ಸಾಧ್ಯವಿಲ್ಲವೋ ಅಂತಹವರನ್ನೇ ಹೆಚ್ಚು) ಮೂಗು ಹಿಡಿಯುವ ಅಥವಾ ಕುತ್ತಿಗೆ ಹಿಡಿಯುವಂತಹ ಕ್ರಮಕ್ಕೆ ಪ್ರಧಾನಿ ಮುಂದಾದರೇ?

ಒಂದೋ ನಮ್ಮ ಗುರಿ ನಗದುರಹಿತ ಆರ್ಥಿಕತೆಯನ್ನು ತರುವುದೇ ಆಗಿತ್ತು ಎಂದು ಪ್ರಧಾನಿಗಳು ಹೇಳಬೇಕು; ಇಲ್ಲವೇ ಕಪ್ಪುಹಣಕ್ಕೆ ಪೆಟ್ಟು ಕೊಡುವುದಾಗಿತ್ತು, ಅದರಲ್ಲಿ ಎಡವಿದೆವು ಎಂದು ಒಪ್ಪಿಕೊಳ್ಳಬೇಕು. ಕಪ್ಪುಹಣಕ್ಕೆ ಪೆಟ್ಟು



ಕೊಡುವುದಾಗಿತ್ತು ಎಂದರೆ, ಅಂತಹ ಪೆಟ್ಟನ್ನೇನೂ ಕೊಡಲಾಗಲಿಲ್ಲ, ಏಕೆಂದರೆ ಚಲಾವಣೆಯಲ್ಲಿದ್ದ ಸುಮಾರು 15 ಲಕ್ಷ ಕೋಟಿ ರೂ. 500 ಮತ್ತು 1000 ರೂ.ಗಳ ನೋಟುಗಳಲ್ಲಿ ಬಹುತೇಕ ಹಣ ಈಗಾಗಲೇ ವಾಪಸ್ಸು ಬಂದಾಗಿದೆ. ನಗದುರಹಿತ ಆರ್ಥಿಕತೆ ತರುವುದು ಆಗಿತ್ತು ಎನ್ನುವುದಾದಲ್ಲಿ ಅಥವಾ ಕಡಿಮೆ ನಗದಿನ ಆರ್ಥಿಕತೆ(ಈ ಮಾತನ್ನು ಮೋದಿ ಮತ್ತು ಊರ್ಜಿತ್ ಪಟೇಲ್ ಇಬ್ಬರೂ ಎರಡು ದಿನಗಳಿಂದ ಹೇಳಲು ಶುರು ಮಾಡಿದ್ದಾರೆ)ಯನ್ನು ತರುವುದಾಗಿತ್ತು ಎನ್ನುವುದಾದಲ್ಲಿ ಅದು ಅಷ್ಟು ಸುಲಭವಾಗಿರಲಿಲ್ಲ, ಅಂತಹ ಕಡಿಮೆ ನಗದಿನ ಆರ್ಥಿಕತೆ ದೊಡ್ಡ ಅಭಿವೃದ್ಧಿ ಹೊಂದಿದ ದೇಶಗಳಲ್ಲೂ ಇಲ್ಲ, ಅದು ಬೇಕೇ ಆಗಿರಲಿಲ್ಲ ಎಂಬುದನ್ನಾದರೂ ಒಪ್ಪಿಕೊಳ್ಳಬೇಕು.

ಇನ್ನು ಭಾರತಕ್ಕೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ನೋಡೋಣ. ಆಗಸ್ಟ್ 2016ರವರೆಗೆ ಭಾರತದಲ್ಲಿ 71 ಕೋಟಿ ಡೆಬಿಟ್ (ಎಟಿಎಂ) ಕಾರ್ಡುಗಳನ್ನು ನೀಡಲಾಗಿತ್ತು, ಆ ತಿಂಗಳಲ್ಲಿ ಈ ಕಾರ್ಡುಗಳ ಮುಖಾಂತರ ಎಲ್ಲಾ ಬಳಕೆದಾರರು 2,19,657 ರೂ.ಗಳಷ್ಟೇ ಹಣವನ್ನೇ ಎಟಿಎಂನಿಂದ ತೆಗೆದು ಬಳಸಿದ್ದರೇ ಹೊರತು, ಕಾರ್ಡುಗಳ ಮುಖಾಂತರ ನೇರವಾಗಿ, ಅಂದರೆ ನಗದುರಹಿತವಾಗಿ ಮಾಡಿದ ಪಾವತಿ ಕೇವಲ 18,370 ಕೋಟಿಗಳಷ್ಟು ಮಾತ್ರ. ಇದು ಭಾರತೀಯರು ಯಾವ ರೀತಿಯ ನಗದಿನ ಮೇಲಿನ ಅವಲಂಬನೆ ಹೊಂದಿದ್ದಾರೆ ಎಂಬುದನ್ನು ತೋರಿಸುತ್ತದೆ. ಇದನ್ನು ಇದ್ದಕ್ಕಿದ್ದಂತೆ ಮೂಗು ಹಿಡಿದು ಬಾಯಿ ತೆರೆಸುವ ರೀತಿಯ ಕ್ರಮದಿಂದ ಮಾಡಲು ಸಾಧ್ಯವಿಲ್ಲ, ದೇಶದ ಜನಸಾಮಾನ್ಯರು, ಬಡವರು ಇಂತಹದೊಂದು ಆರ್ಥಿಕತೆಗೆ ಇದ್ದಕ್ಕಿದ್ದಂತೆ ಹೊರಳಿಕೊಳ್ಳುವುದು ಅಸಾಧ್ಯ ಎಂಬ ಕಾರಣಕ್ಕೆ ಮಾತ್ರ ಈ ಸಮಸ್ಯೆ ಇರುವ ಈಗಾಗಲೇ ದೇಶದಲ್ಲಿ ಡಿಜಿಟಲ್ ಹಣ ವರ್ಗಾವ ಹಲವು ಸಮಸ್ಯೆಗಳಿವೆ. ಅದನ್ನು ಬಗೆಹರಿಸಲು ಇನ್ನೂ ಪರಿಣಾಮಕಾರಿ ಕ್ರಮಗಳನ್ನೇ ತೆಗೆದುಕೊ ಉದಾಹರಣೆಗೆ, ಇಂಟರ್‌ನೆಟ್ ಮುಖಾಂತರ ಹಣ ವರ್ಗಾವಣೆಯಲ್ಲಿ ಮಾಹಿತಿ ಸೋರಿಕೆ ಅ ತಡೆಗಟ್ಟಲು ಈ ಸದ್ಯ ಭಾರತದಲ್ಲಿ ಬಳಸುತ್ತಿರುವ ಅ (ಕಂಪ್ಯೂಟರ್ ನಿಯಮಗಳು) ಬಹಳ ಕಳಪೆಯ ಈ ನಿಯಮಗಳನ್ನು ಅಮೆರಿಕದಲ್ಲಿ 2000ನೇ ಇಸ ಪ್ರಯೋಜನವಿಲ್ಲ ಎಂದು ರದ್ದು ಮಾಡಲಾಗಿ ಮಧ್ಯೆ 2015ರಲ್ಲಿ ಕೆಲವು ಹೊಸ ನಿಯಮಗಳನ್ನು ಸರ್ಕಾರವು ಹೊರಟಿತು. ಆದರೆ, ಅದರಲ್ಲಿ ಸಮಸ್ಯೆಗಳಿವೆ ಎಂದು ಪರಿಣಿತ ತಜ್ಞರು ಹೇಳಿ ಕೈ ಬಿಡಲಾಯಿತು. ಅದಾದನಂತರ ಯಾವ ನಿಯಮಗಳನ್ನೂ ರೂಪಿಸಿಲ್ಲ, ಇಂದು ಲಭ್ಯವಿರು 40 ಬಿಟ್ ಎನ್‌ಕ್ರಿಪ್ಶನ್ ಎಂದು ಕರೆಯಲಾಗುವ ಕ್ರಮ. ಇಷ್ಟು ಇರಲೇಬೇಕೆಂದು ಸರ್ಕಾರವೂ ಹೊರಡಿಸಿದೆ. ಆದರೆ, ಇವತ್ತಿನ ತಂತ್ರಜ್ಞಾನದಲ್ಲಿ 40 ಎನ್‌ಕ್ರಿಪ್ಶನ್‌ಅನ್ನು ಸುಲಭದಲ್ಲಿ ಬೇಧಿಸಿ ಒಳ ಹ್ಯಾಕರ್‌ಗಳು ಸಾಮರ್ಥ್ಯ ಬೆಳೆಸಿಕೊಂಡಿದ್ದಾರೆ. ಸರಿ ಮಾಡಲು ಬೇಕಾದ ತಾಂತ್ರಿಕ ಮತ್ತು ಕಾ ಸಿದ್ಧತೆಗಳನ್ನೂ ಸರ್ಕಾರ ಮಾಡಿಕೊಂಡಿಲ್ಲ.

ಅಂದರೆ ಏನರ್ಥ? ನೋಟು ರದ್ದತಿಯ ಕ್ರ ಕಪ್ಪು ಆರ್ಥಿಕತೆಯ ಮೇಲೆ ಪ್ರಹಾರ ಮ ಮಾಡಲಾಯಿತು ಎಂಬುದೂ ಸುಳ್ಳು; ಕಡಿಮೆ ಆರ್ಥಿಕತೆಯತ್ತ ಕೊಂಡೊಯ್ಯಲು ಮಾಡಲಾಯಿತು ಅದೂ ಸುಳ್ಳು. ಈಗ ನಗದುರಹಿತ ಆರ್ಥಿ ಅನುಕೂಲಗಳ ಕುರಿತು ದೊಡ್ಡ ದೊಡ್ಡ ಮಾತು ಹೇಳಲಾಗುತ್ತಿದೆ. ಇದರಿಂದ ಪ್ರತಿ ರೂಪಾಯಿ ಮ ಸಹ ಗೊತ್ತಾಗುತ್ತದೆ; ನೋಟುಗಳ ಮುದ್ರಣ, ಸಾ ಬ್ಯಾಂಕು, ಎಟಿಎಂಗಳ ಖರ್ಚು ಉಳಿಯುತ್ತದೆ; ರಿ ಎಸ್ಟೇಟ್ ಕೃತಕ ಉಬ್ಬರ ಕಡಿಮೆಯಾಗುತ್ತದೆ; ಎ ಮುಖ್ಯವಾಗಿ ತೆರಿಗೆ ಕಳ್ಳತನ ಇಲ್ಲವಾಗುತ್ತದೆ. ಇದೇ ಬೇಕಾಗಿರುವುದು? ಹಾಗಾಗಿ ಇದೂ ಸಹ ಕಪ್ಪ ಮೇಲಿನ ದಾಳಿಯೇ ಆಗಿದೆ ಎಂಬ ಸಮರ್ಥನೆಯ ಆರ್ಥಿಕತೆಗೆ ಭಾರೀ ದೊಡ್ಡ ಅನುಕೂಲ ಬಿಂಬಿಸಲು ಹೊರಟಿದ್ದಾರೆ.

ಅದು ಎಂತಹ ದೊಡ್ಡ ಸುಳ್ಳು ಎಂಬ ಎರಡನೆಯ ಭಾಗದಲ್ಲಿ ನೋಡೋಣ. ಅದಕ್ಕೆ 'ಭಾರತದ ಆರ್ಥಿಕತೆಯ ಉಸ್ತುವಾರಿ ಕೇಂದ್ರ'ವು ಮಾ ಒಂದು ಅಂದಾಜನ್ನು ಗಮನಿಸಬೇಕು. ನೋಟು ಎಂಬ ಈ ಕ್ರಮಕ್ಕೆ ತಗುಲುವ ಒಟ್ಟು ಖರ್ಚು 1,28,000 ಕೋಟಿ ರೂ.ಗಳು. ಇದರಲ್ಲಿ ಸ ಮಾಡುತ್ತಿರುವ ಖರ್ಚು, ಬ್ಯಾಂಕುಗಳು ಮಾಡುವ ಇತ್ಯಾದಿಗಳ ಜೊತೆಗೆ ವ್ಯಾಪಾರ ಮತ್ತು ವಹಿವಾಟ ತಗುಲುವ ಖರ್ಚು ಎಲ್ಲವನ್ನೂ ಸೇರಿಸಿ ಅ ಮಾಡಿದ್ದಾರೆ. ಈ ಅಂದಾಜು ಆಗಿ ಸುಮಾರು ದಿನಗಳಾಗಿವೆ. ಆದರೆ, ಅಲ್ಲಿಂದಾಚೆಗೆ ಆಗಿರುವ ಇನ್ನೂ ಹೆಚ್ಚು ಎಂಬುದು ಬಹುತೇಕ ಎಲ್ಲಾ ವ ತಜ್ಞರ ಅಭಿಪ್ರಾಯವಾಗಿದೆ. ಭಾರತದ ಒಟ್ಟು ಸೃಷ್ಟಿಯ ಮಾನದಂಡ ಹಿಡಿದು ನೋಡುವು ಸುಮಾರು 1.5 ಲಕ್ಷ ಕೋಟಿಗಳಷ್ಟು ನಷ್ಟ ಉಂಟಾಗಿದೆ.

ಹರಾಕಿರಿ ಕಾಂಗ್ರೆಸ್ ಪಕ್ಷದಿಂದಲೇ ಶುರುವಾಗಲಿ

ನಾವು ಚಿಕ್ಕವರಿದ್ದಾಗ ಶಾಲಾ ಕಾಲೇಜುಗಳಲ್ಲಿ ಸಹಪಾಠಿ ಗಳೊಂದಿಗಿನ ನಿರ್ದಿಷ್ಟ ವಿಷಯದ ವಾದ-ಪ್ರತಿವಾದದಲ್ಲಿ ಎದುರಾಳಿಗೆ ಉತ್ತರ ಕೊಡಲಾಗದ ಸ್ಥಿತಿಯಲ್ಲಿದ್ದಾಗ ವಿಷಯಾಂತರ ಮಾಡಲು ಎದುರಾಳಿಯ ದೈಹಿಕ ನ್ಯೂನತೆ, ಅವನ ಚರ್ಮದ ಬಣ್ಣ ಅವನ ಭಾಷೆ, ಉಚ್ಚಾರ, ಜಾತಿ, ಬಟ್ಟೆ ಇತ್ಯಾದಿ ಅಸಂಗತ ವಿಷಯಗಳ ಬಗ್ಗೆ ಅವನನ್ನು ಹೀಯಾಳಿಸಿ ಸೇಡು ತೀರಿಸಿಕೊಳ್ಳುತ್ತಿದ್ದೆವು. ಅದು ನಮ್ಮ ವಯಸ್ಸು ಮತ್ತು ವ್ಯಕ್ತಿತ್ವ ಇನ್ನೂ ಎಳಸು ಆಗಿದ್ದ ಕಾಲದಲ್ಲಿ, ಆದರೆ ನಾವು ಪ್ರಬುದ್ಧರಾದ ನಂತರ ಯಾವುದೇ ವಿಷಯದ ವಾದದಲ್ಲಿ ಸೋತಾಗ ಹೀಗೆ ಎದುರಾಳಿಯ ವ್ಯಕ್ತಿಗತ ವಿಷಯ ಎತ್ತಿ ಹೀಯಾಳಿಸಿ ನಮ್ಮ ಸಿಟ್ಟು ತೀರಿಸಿಕೊಳ್ಳುವ ಕೆಟ್ಟ ಅಭ್ಯಾಸ ಬಿಟ್ಟುಬಿಡುತ್ತೇವೆ. ಆದರೆ ನಮ್ಮ ಮೋದಿಯವರು ಪ್ರಧಾನಿಯಾದ ಮೇಲೂ ಈ ಚಿಕ್ಕಂದಿನ ಕೆಟ್ಟ ಅಭ್ಯಾಸ ಇನ್ನೂ ಬಿಟ್ಟಂತೆ ಕಾಣುತ್ತಿಲ್ಲ.

ಯಾಕೆಂದರೆ ಇತ್ತೀಚೆಗೆ ರಾಹುಲ್ ಗಾಂಧಿಯವರು 2013 ರಲ್ಲಿ ಆದಾಯಕರ ಇಲಾಖೆಯವರು ವಶಪಡಿಸಿ ಕೊಂಡಿರುವ ಸಹರಾ ಡೈರಿ ಮತ್ತು ಬಿರ್ಲಾ ಪೇಪರ್ಸ್‌ಗಳಲ್ಲಿ ಇರುವ ಮಾಹಿತಿಗಳ ಆಧಾರದಲ್ಲಿ ಮೋದಿಯವರು ಗುಜರಾತಿನ ಮುಖ್ಯಮಂತ್ರಿ ಆಗಿದ್ದ ಕಾಲದಲ್ಲಿ ಸಹರಾ ಮತ್ತು ಬಿರ್ಲಾ ಕಂಪನಿಗಳಿಂದ ನಲ್ವತ್ತು ಕೋಟಿ ರೂಪಾಯಿ ಲಂಚ ಪಡೆದಿರುವ ಬಗ್ಗೆ ಆರೋಪ ಮಾಡಿದ್ದಕ್ಕೆ ನಿರ್ದಿಷ್ಟ ಉತ್ತರ ಕೊಡುವ ಬದಲು ವಿಷಯಾಂತರ ಮಾಡಿ ವ್ಯಂಗ್ಯವಾಗಿ "ರಾಹುಲ್ ಗಾಂಧಿ ಅಪ್ರಬುದ್ಧರು ಹಾಗೂ ಈಗೀಗ ಅವರು ಭಾಷಣ ಮಾಡುವುದನ್ನು ಕಲಿಯುತ್ತಿದ್ದಾರೆ" ಎಂದು ಕುತ್ಸಿತ ಹಾಸ್ಯದಲ್ಲಿ ವಿಷಯವನ್ನು ತೇಲಿಸಲು ವ್ಯರ್ಥ ಪ್ರಯತ್ನ ಮಾಡಿ ಪ್ರಧಾನಿ ಆದಮೇಲೂ ತಮ್ಮ ಚಿಕ್ಕಂದಿನ ಎಳಸು ಬುದ್ಧಿ ಬದಲಾಗಿಲ್ಲ ಎಂಬುದನ್ನು ತೋರಿಸಿದರು. ತಾವೇನೋ ಮಹಾ ಪ್ರಬುದ್ಧ ಹಾಗೂ ಅದ್ಭುತ ಭಾಷಣ ಕಲೆ ಗೊತ್ತಿರುವ ಏಕೈಕ ವ್ಯಕ್ತಿ ಎಂಬಂತೆ ಪರೋಕ್ಷವಾಗಿ ಮೋದಿ ಜಂಬ ಕೊಚ್ಚಿದ್ದಾರೆ. ಇದಕ್ಕೆ ಕಾರಣ ತಾನೊಬ್ಬನೇ ಮಹಾಜಾಣ ಎಂಬ ತಪ್ಪು ಕಲ್ಪನೆ.

ಕಳೆದ ವಾರ ರಾಹುಲ್ ಗಾಂಧಿ ಸಹರಾ ಡೈರಿ ಮತ್ತು ಬಿರ್ಲಾ ಪೇಪರ್ಸ್‌ನಲ್ಲಿ ನಮೂದಿತವಾಗಿರುವ ಲಂಚಕೋರರ ಹೆಸರುಗಳನ್ನು ಪತ್ರಿಕಾಗೋಷ್ಠಿಯಲ್ಲಿ ಬಹಿರಂಗಪಡಿಸಿದರು. ಅದರಲ್ಲಿ ನರೇಂದ್ರ ಮೋದಿಯವರ ಸಹಿತ ಕಾಂಗ್ರೆಸ್ಸಿನ ಶೀಲಾ ದೀಕ್ಷಿತರ ಹೆಸರೂ ಇದೆ. ರಾಹುಲ್ ಗಾಂಧಿ ಶೀಲಾ ದೀಕ್ಷಿತರ ಹೆಸರನ್ನು ಸಹ ಬಹಿರಂಗಪಡಿಸಿ ತಮ್ಮ ಸ್ವಂತ ಕಾಂಗ್ರೆಸ್ಸಿಗೇ ಮುಜುಗರ ತಂದಿದ್ದರೂ ಅದನ್ನು ಅವರು ಬಂಡವಾಳ ಮಾಡಿಕೊಂಡು ನಾವು ಕಾಂಗ್ರೆಸ್ಸಿನವರು ಸಹರಾ ಡೈರಿಯಲ್ಲಿ ಬರೆದಿರುವ ಲಂಚ ಪಡೆದಿರುವವರ ಹೆಸರುಗಳೆಲ್ಲಾ ಅಸಲಿ ಲಂಚಕೋರರ ಹೆಸರು ಎಂದು ಒಪ್ಪಿಕೊಂಡಿದ್ದೇವೆ, ಹಾಗಾಗಿ ಮೋದಿಯವರ ಹೆಸರು ಸಹರಾ ಡೈರಿಯಲ್ಲಿರುವುದು ಸಹ ಅಸಲಿ ಲಂಚಕೋರನಾಗಿರುವುದಕ್ಕೆ ಸಾಕ್ಷಿ ಎಂದು ವಾದಿಸಬಹುದು. ಇದು ಶೀಲಾ ದೀಕ್ಷಿತರ ಪಾಲಿಗೆ ಹರಾಕಿರಿ ಆಗಿ ಅವರ ರಾಜಕೀಯ ಜೀವನ ಕೊನೆಗೊಂಡು ಉತ್ತರಪ್ರದೇಶದ ಮುಖ್ಯಮಂತ್ರಿ ಆಗುವ ಕನಸು ನುಚ್ಚುನೂರಾಗಬಹುದು, ಆದರೆ ಮೋದಿ ಎಂಬ ಹಿಟ್ಲರನ ಭ್ರಷ್ಟರೂಪ ಸಹ ಈ ದೀಕ್ಷಿತರ ಹರಾಕಿರಿ ಹೊರಬರುತ್ತದೆ. ವೀರಪ್ಪ, ಎಂ ಎಂಬ ಹೆಸರು ಸಹ ಸಹರಾ ಡೈ ಇದೆಯಂತೆ. ಯುಪಿಎ ಸರಕಾರದಲ್ಲಿ ಯಾವ ವೀರಪ್ಪ ಸಚಿವನಾಗಿದ್ದ ಎಲ್ಲರಿಗೂ ಗೊತ್ತಿದೆ. ಅವರ ಹಿನ್ನೆಲೆ ಗೊತ್ತಿರುವವರು ಯುಪಿಎ ಕಾ ಅವರು ಲಂಚ ಪಡೆದೇ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ಹಾಗಾ ದೇಶದ ಹಿತದ ದೃಷ್ಟಿಯಿಂದ ಈ ವೀರಪ್ಪನೂ ಆತ್ಮಹತ್ಯಾ ಬಾಂಬ "ಹೌದು ಸಹರಾ ಡೈರಿಯಲ್ಲಿರುವ ನನ್ನ ಹೆಸರು ಸರಿಯಿದೆ. ಆಗ ಲಂಚ ಪಡೆದು ತಪ್ಪು ಮಾಡಿದ್ದೇನೆ ನಿಜ, ಸಹರಾ ಡೈರಿಯಲ್ಲಿರುವ ಹೆಸರು ಸರಿಯಾಗಿವೆ, ಅದಕ್ಕಾಗಿ ನಾನು ಕಾನೂನುಪ್ರಕಾರ ಶಿಕ್ಷೆ ಅನುಭವಿಸಲು ತ ದ್ದೇನೆ" ಎಂದು ಅಫಿಡವಿಟ್ ಸಲ್ಲಿಸಲಿ. ಅಲ್ಲಿಗೆ ಈ ವೀರಪ್ಪನ ರಾ ಜೀವನ ಕೊನೆಗೊಳ್ಳುತ್ತದೆ ನಿಜ, ಆದರೆ ಇದು ಇನ್ನು ಮುಂದೆ ಬಿಜೆಪಿ ಸಹಿತ ಎಲ್ಲಾ ರಾಜಕೀಯ ಪಕ್ಷಗಳಲ್ಲಿ ನೇತಾರರು ಆತ್ಮಸಾ ನಡೆದುಕೊಳ್ಳಲು ಗಟ್ಟಿ ಉದಾಹರಣೆ ಆಗುತ್ತದೆ. ಜಪಾನಿನಲ್ಲಿ ಕೇವಲ ಆರೋಪ ಬಂದಾಗ ಅಲ್ಲಿಯ ಒಬ್ಬ ಪ್ರಧಾನಿ ಆತ್ಮಸಾಕ್ಷಿಯಂತೆ ನಡೆದು ತನ್ನ ಪದಕ್ಕೆ ರಾಜೀನಾಮೆ ಕೊಟ್ಟು, ಸರಿಯಾದ ಸಾಕ್ಷಿಯಿರದಿದ್ದರೂ ತಾನು ಪಡೆದಿದ್ದು ನಿಜ ಎಂದು ಒಪ್ಪಿಕೊಂಡಿದ್ದರು, ಹಾಗೂ ತನ್ನನ್ನು ತಾನು ಒಪ್ಪಿಸಿಕೊಂಡಿದ್ದರು. ಇಂತಹ ಉದಾಹರಣೆಯೊಂದು ಶೀಲಾ ದೀಕ್ಷಿತ್ ವೀರಪ್ಪಎಂ ಇವರ ಮೂಲಕ ಕಾಂಗ್ರೆಸ್ ಪಕ್ಷದಿಂದಲೇ ಶುರುವಾಗಲಿ ದೇಶಕ್ಕೆ ಈಗ ಬಂದಿರುವ ಅತ್ಯಂತ ದೊಡ್ಡ ಗಂಡಾಂತರದಿಂದ ದೇಶವನ್ನು ಒಂದಿಬ್ಬರು ಮುದಿ ಕಾಂಗ್ರೆಸ್ಸಿಗರು ಹರಾಕಿರಿ ಮಾಡಿಕೊಂಡರೆ ತಪ್ಪಿಲ್ಲ. ಅವರಿಬ್ಬರ ಹರಾಕಿರಿಯನ್ನು ಎಂದಿಗೂ ಮರೆಯಬಾರದು.

- ಪ್ರವೀಣ್ ಎಸ್ ಶೆಟ್ಟಿ, ಇ ಮೇಲ್ ಮೂಲಕ (ದುಬೈ

ನಾನು ಪ್ರೀತಿಸಿದ್ದ ಬೆಂಗಳೂರು ಈಗ ಮಾಯವಾಗಿದೆ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

...ಳೆದ ನಾಲ್ಕು ದಿನಗಳಿಂದ ಬೆಂಗಳೂರು ಇಡೀ ...ದ ಮುಂದೆ ತಲೆತಗ್ಗಿಸಿ ನಿಲ್ಲುವಂತಾಗಿದೆ. ಅದಕ್ಕೆ ... ಬೆಂಗಳೂರಿನಲ್ಲಿ ಹೊಸ ವರ್ಷವನ್ನು ಸ್ವಾಗತಿಸುವ ...ಲ್ಲಿ ಕಾಮುಕರು ಯುವತಿಯರ ಮೇಲೆ ಎಸಗಿದ ...ನವೀಯ ದಾಳಿಗಳು ಮತ್ತು ನಿನ್ನೆ ಇದೇ ನಗರದಲ್ಲಿ ...ು ಯುವಕರು ಓರ್ವ ಯುವತಿಯ ಮೇಲೆ ...ರುವ ಲೈಂಗಿಕ ದೌರ್ಜನ್ಯ.

...ನಾನು ಹುಟ್ಟಿದ್ದು ಶಿವಮೊಗ್ಗೆಯಲ್ಲಾದರೂ ನಾನು ...ದ್ದು ಬೆಂಗಳೂರಿನಲ್ಲಿ. ನನ್ನ ಐವತ್ತೈದು ವರ್ಷಗಳಲ್ಲಿ ...ಟು ವರ್ಷಗಳನ್ನು ಹೊರತುಪಡಿಸಿದರೆ, ...ರವುಗಳನ್ನು ಕಳೆದಿರುವುದು ಈ ನಗರದಲ್ಲೇ. ...ಂದರೆ ನಾನು ಎಲ್ಲೇ ಹೋಗಿ ವಾಸಿಸುತ್ತಿದ್ದರೂ ಈ ...ಪ್ರೀತಿಯ ಬೆಂಗಳೂರು ನನ್ನನ್ನು ಮತ್ತೆಮತ್ತೆ ತನ್ನ ...ಕರೆದಿದೆ; ಪ್ರೀತಿಯಿಂದ ನನ್ನನ್ನು ಪೋಷಿಸಿದೆ, ರಕ್ಷಿಸಿದೆ, ...ದೆ.

...ಂದೊಮ್ಮೆ ಒಂದು ಕಾಲವಿತ್ತು. ಆಗ ನಾವು




...ಳೂರಿಗರು ಎಂದು ಹೇಳಿಕೊಳ್ಳಲು ಹೆಮ್ಮೆಪಡುತ್ತಿದ್ದೆವು. ...ಂದರೆ ನಾವು ಮತ್ತು ನಮ್ಮ ಈ ಊರು, ಎರಡೂ ...ಮಾನ್ಯವಾಗಿದ್ದವು. ಮಿಕ್ಕವರಿಗಿಂತ ವಿಶಿಷ್ಟವಾಗಿದ್ದೆವು. ...ಗಿನವರು ನಮ್ಮ ಬೆಂಗಳೂರಿನ ಹವಾಮಾನ ಕಂಡು ...ಟ್ಟೆಕಿಚ್ಚು ಪಡುತ್ತಿದ್ದರು. ಇಲ್ಲಿನ ಗಿಡಮರಗಳನ್ನು ನೋಡಿ ...ಾಗುತ್ತಿದ್ದರು. ಬೆಂಗಳೂರಿಗರ ಕಾಸ್ಮೊಪಾಲಿಟನ್ ...ತ್ತಿಯನ್ನು ಮೆಚ್ಚುತ್ತಿದ್ದರು. ನಾವು ಬೇರೆ ರಾಜ್ಯಗಳಿಗೆ ... ಹೋದಾಗ ನಮ್ಮನ್ನು ಆತ್ಮೀಯತೆಯಿಂದ ...ಾಡಿಕೊಳ್ಳುತ್ತಿದ್ದರು. ಯಾಕೆಂದರೆ ನಾವು ತಮಿಳರಂತೆ ...ಾಂಧರಾಗಿರಲಿಲ್ಲ, ಮರಾಠಿಗರಂತೆ ...ಯತಾವಾದಿಗಳಾಗಿರಲಿಲ್ಲ. ಬದಲಾಗಿ ಬೆಂಗಳೂರಿನ ...ು ಸೌಮ್ಯ ಸ್ವಭಾವದವರು ಎಂದೇ ಖ್ಯಾತರಾಗಿದ್ದರು. ... ಅಡ್ಜೆಸ್ಟ್ ಮಾಡಿ'ಕೊಂಡು ಬದುಕುವ ನಮ್ಮ ...ರಣೆಯಂತೂ ಎಲ್ಲೆಲ್ಲೂ ಸಲ್ಲುವವರಾಗಿ ನಮ್ಮನ್ನು ...ಸಿತ್ತು.

...ಬೆಂಗಳೂರಿನ ಯುವತಿಯರಂತೂ ಮಿಕ್ಕ ನಗರಗಳ ...ವತಿಯರಿಗಿಂತ ಅದೃಷ್ಟಶಾಲಿಗಳಾಗಿದ್ದರು. ಇತರರಿಗೆ ...ಲಿದ್ದ ಸ್ವಾತಂತ್ರ್ಯ ನಮ್ಮ ಯುವತಿಯರಿಗಿತ್ತು. ...ಉದಾಹರಣೆಗೆ 70ರ ದಶಕದಲ್ಲಿ ಲೂನಾ ಎಂಬ ದ್ವಿಚಕ್ರ ...ಪೆಡ್ ದೇಶದ ಮಾರುಕಟ್ಟೆಗೆ ಪರಿಚಯಿಸಲ್ಪಟ್ಟಾಗ ...ರ ಬೇರೆಡೆಗಿಂತ ಬೆಂಗಳೂರಿನ ಯುವತಿಯರು ಅದಕ್ಕೆ ... ಬದ್ದಿದ್ದರು. ಅಷ್ಟೇ ಅಲ್ಲ, ಕೆಲವೇ ವರ್ಷಗಳಲ್ಲಿ ...ಳೂರಿನ ಹಿರಿಯ ಮಹಿಳೆಯರೂ ಮೊಪೆಡ್ ...ುವವರಾದರು. ಎಷ್ಟರ ಮಟ್ಟಿಗೆಂದರೆ ಆಗ ಒಂದು ...ಯ ವಾರಪತ್ರಿಕೆ ಬೆಂಗಳೂರಿನಲ್ಲಿ ದ್ವಿಚಕ್ರ ಓಡಿಸುವ ...ಳೆಯರ ಬಗ್ಗೆ ಒಂದು ಮುಖಪುಟ ವರದಿಯನ್ನೇ ...ಸಿತ್ತು. ಮೊಪೆಡ್‌ಗಳು ಬೆಂಗಳೂರಿನ ಯುವತಿಯರಿಗೆ ... ಮಹಿಳೆಯರಿಗೆ ತಂದು ಕೊಟ್ಟ ಬಿಡುಗಡೆ ಹಲವಾರು ...ರುದ್ದಾಗಿತ್ತು. ಕೆಲಸಕ್ಕೆ ಹೋಗಲು ಮಾತ್ರವಲ್ಲ, ಮಕ್ಕಳನ್ನು ...ಗೆ ಬಿಡಲು, ಮಾರುಕಟ್ಟೆಗೆ ಹೋಗಿ ವಸ್ತುಗಳನ್ನು ...ದಿಸಲು, ವೃದ್ಧ ತಂದೆತಾಯಂದಿರನ್ನು ಕರೆದುಕೊಂಡು ...ಗಲು...' ಇವೆಲ್ಲವೂ ಸಾಧ್ಯವಾಗಿತ್ತು.

...ಆಗ ನಾನು ಮತ್ತು ಬೇಬಿ (ಕವಿತಾ) ಕೂಡ ಲೂನಾ ...ುತ್ತಿದ್ದೆವು. ಆದರೆ ಕೆಲಕಾಲದ ನಂತರ ಇಬ್ಬರೂ ...ಮೋಟಾರ್‌ಸೈಕಲ್ ಖರಿದಿಸಿದೆವು. ಆಗ ನಾವಿಬ್ಬರೂ ...ಳೂರಿನ ರಸ್ತೆಗಳಲ್ಲಿ ಆರ್‌ಎಕ್ಸ್ 100 ಯಮಾಹಾ ...ಗಳನ್ನು ಓಡಿಸುತ್ತಿದ್ದುದ್ದನ್ನು ನೋಡಿದ್ದ ಜನ ಅದನ್ನು ...ಈಗ ನೆನಪಿಸಿಕೊಳ್ಳುತ್ತಿರುತ್ತಾರೆ. ಯಾಕೆಂದರೆ ಬೆಂಗಳೂರಿನಲ್ಲಿ ಬೈಕ್ ಓಡಿಸಿದ ಪ್ರಥಮ ಮಹಿಳೆಯರು ನಾವಾಗಿದ್ದೆವು.

ಇಲ್ಲಿ ನಾವು ಬೈಕ್ ಓಡಿಸುವುದನ್ನು ಇಲ್ಲಿನ ಜನ ಮೆಚ್ಚುತ್ತಿದ್ದರು. ಆದರೆ ಅದೇ ಬೈಕ್ ಅನ್ನು ನಾನು ದೆಹಲಿಗೆ ತೆಗೆದುಕೊಂಡು ಹೋಗಿ ಅಲ್ಲಿ ಅದನ್ನು ಓಡಿಸಿದಾಗ ದೆಹಲಿಯ ಮಹಿಳೆಯರು ಬೆಕ್ಕಸಬೆರಗಾಗಿ ನೋಡುತ್ತಿದ್ದರೆ ಗಂಡಸರು "ಇವಳದ್ದೇನು ಉದ್ಧಟತನ" ಎಂಬಂತೆ ನನ್ನನ್ನು ಕೆಕ್ಕರಿಸಿ ನೋಡುತ್ತಿದ್ದರು. ಅಂದರೆ ಯಾವುದನ್ನು ಬೆಂಗಳೂರಿಗರು ಸಹಜ ಎಂಬಂತೆ ಸ್ವೀಕರಿಸಿದ್ದರೋ ಅದು ದೆಹಲಿಯ ವಾಸಿಗಳಲ್ಲಿ ಅಸೂಯೆ ಮತ್ತು ಅಸಮಾಧಾನಗಳಿಗೆ ಕಾರಣವಾಗಿತ್ತು.

80ರ ದಶಕದಲ್ಲಿ ಬೆಂಗಳೂರಿನಲ್ಲಿ ಪಬ್‌ಗಳು ನಾಯಿಕೊಡೆಗಳಂತೆ ತಲೆ ಎತ್ತಲಾರಂಭಿಸಿದಾಗ ಯುವತಿಯರೂ ಅವುಗಳಿಗೆ ಹೋಗುತ್ತಿದ್ದರು. ಅಷ್ಟೇ ಏಕೆ, ಸಾಮಾನ್ಯವಾಗಿ ಪಬ್‌ಗಳಿಗೆ ಹೆಚ್ಚಾಗಿ ಜನ ಸಂಜೆ ಹೋಗುತ್ತಿದ್ದರಿಂದ ಕೆಲವು ಜನಪ್ರಿಯ ಪಬ್‌ಗಳು ಹಗಲು ಹೊತ್ತಿನಲ್ಲಿ ಮಧ್ಯವಯಸ್ಕ ಮಹಿಳೆಯರ ಕಿಟ್ಟಿ ಪಾರ್ಟಿ ಕೇಂದ್ರಗಳಾಗಿ ಪರಿವರ್ತನೆಗೊಳ್ಳುತ್ತಿದ್ದವು. ಆಗ ದೇಶದಲ್ಲಿ ಮಹಿಳೆಯರಿಗೆ ಅತಿ ಸುರಕ್ಷಿತ ನಗರ ಎಂದು ಕೊಲ್ಕತ್ತಾ ಹೆಸರು ಮಾಡಿತ್ತು. ಆ ದಿನಗಳಲ್ಲಿ ನಾನು ಕೆಲಸ ಮಾಡುತ್ತಿದ್ದ ಆನಂದ್ ಬಜಾರ್ ಪತ್ರಿಕಾಸಂಸ್ಥೆಯಿಂದ ಬೆಂಗಳೂರಿಗೆ ಬರುತ್ತಿದ್ದ ಕೊಲ್ಕತ್ತಾ ಸಹೋದ್ಯೋಗಿಗಳನ್ನು ಪಬ್‌ಗಳಿಗೆ ಕರೆದುಕೊಂಡು ಹೋಗುತ್ತಿದ್ದೆ. ನಮ್ಮ ಪಬ್‌ಗಳಲ್ಲಿ ಯುವತಿಯರು ಯಾರ ತಕರಾರೂ ಇಲ್ಲದೆ ತಮ್ಮ ಪಾಡಿಗೆ ಹರಟುತ್ತಾ ಬಿಯರ್ ಸೇವಿಸುತ್ತಿದ್ದುದ್ದನ್ನು ನೋಡಿ ಕೊಲ್ಕತ್ತಾ ವಾಸಿಗಳು ಅಚ್ಚರಿಗೊಳ್ಳುತ್ತಿದ್ದರು. "ಅಯ್ಯೋ, ಕೊಲ್ಕತ್ತಾ ಮಹಿಳೆಯರಿಗೆ ರಕ್ಷಣೆ ಕೊಡುತ್ತೆ ಎನ್ನುತ್ತಾರೆ. ಆದರೆ



ಅಲ್ಲಿ ನಾವು ಮಹಿಳೆಯರು ಹೀಗೆ ಬಾರ್‌ಗಳಿಗೆ ಹೋದರೆ ಅಲ್ಲಿನ ಜನರಿಗೆ ಶಾಕ್ ಆಗುತ್ತದೆ" ಎನ್ನುತ್ತಿದ್ದರು.

ಆಗಿನ ಕಾಲದಲ್ಲಿ ಹೊಸ ವರ್ಷವನ್ನು ಬರಮಾಡಿಕೊಳ್ಳಲು ಅಥವಾ ಯಾವುದೋ ಒಂದು ಸಂತೋಷದ ಬೆಳವಣಿಗೆಯನ್ನು ಸಂಭ್ರಮಿಸಲು ಆಗಿನ ಕಾಲದ ಯುವಕ-ಯುವತಿಯರು ಎಂ.ಜಿ ರಸ್ತೆ ಮತ್ತು ಬ್ರಿಗೇಡ್ ರಸ್ತೆಗಳಲ್ಲಿರುವ ಹೋಟೆಲ್‌ಗಳಿಗೆ ಅಥವಾ ಪಬ್‌ಗಳಿಗೆ ಹೋಗುತ್ತಿದ್ದರು. ನಾನೂ ಹಾಗೇ ಹಲವಾರು ಬಾರಿ ಹೋದದ್ದು ಉಂಟು. ಆಗ ನಾನಾಗಲಿ ಅಥವಾ ಇತರೆ ಮಹಿಳೆಯರಾಗಲಿ ಲಂಗದಾವಣಿಯನ್ನೇನು ಧರಿಸಿ ಹೋಗುತ್ತಿರಲಿಲ್ಲ, ಪಾಶ್ಚಿಮಾತ್ಯ ಉಡುಗೆಗಳನ್ನು ತೊಟ್ಟು ಹೋಗುತ್ತಿದ್ದೆವು. ಆದರೂ ಆಗ ಯಾರೂ ನಮ್ಮ ಮೇಲೆ ದಾಳಿ ಮಾಡುವುದಿರಲಿ, ಕಿಚಾಯಿಸಿದ್ದೂ ಇಲ್ಲ.

ಅಂದಮಾತ್ರಕ್ಕೆ ಮಹಿಳೆಯರೆಲ್ಲ ಪಬ್ಬು ಬಾರುಗಳಿಗೆ ಹೋಗಬೇಕು, ಮದ್ಯ ಕುಡಿಯಬೇಕೆಂದು ನಾನು ಹೇಳುತ್ತಿಲ್ಲ. ಆದರೆ ಅಲ್ಲಿಗೆ ಹೋಗಬೇಕು, ಕುಡಿಯಬೇಕು ಅನ್ನಿಸಿದವರಿಗೆ ಆ ಸ್ವಾತಂತ್ರ್ಯ ಇರಬೇಕು ಎಂದಷ್ಟೇ ಹೇಳುತ್ತಿದ್ದೇನೆ.

90ರ ದಶಕದಲ್ಲೂ ಬೆಂಗಳೂರು ಎಲ್ಲ ರೀತಿಯಲ್ಲೂ ಮುಕ್ತ ಮನಸ್ಸನ್ನು ಹೊಂದಿತ್ತು. ಆಗ ಮದುವೆಯಾಗಿರದಿದ್ದ ಆದರೆ ಜೊತೆಗೆ ಜೀವಿಸಬೇಕೆಂದು ಬಯಸುತ್ತಿದ್ದ ಗಂಡು-ಹೆಣ್ಣಿಗೆ ಅಷ್ಟು ಕಷ್ಟವಿಲ್ಲದೆ ಬಾಡಿಗೆ ಮನೆಗಳು ಸಿಗುತ್ತಿದ್ದವು. ಆದರೆ ಆ ಮಾತು ದೆಹಲಿಯಂತಹ ನಗರಕ್ಕೆ ಆಗಲೂ, ಈಗಲೂ ಅನ್ವಯಿಸುವುದಿಲ್ಲ. ಅದು ನನ್ನ ಸ್ವಂತ ಅನುಭವಕ್ಕೂ ಬಂದಿದೆ. ಆಗ ನಾನು ಮತ್ತು ನನ್ನ ಪತಿ ದೆಹಲಿಗೆ ವರ್ಗಾವಣೆಗೊಂಡಿದ್ದೆವು. ಬಾಡಿಗೆ ಮನೆ ಸಿಗುವವರೆಗೂ ಮಿತ್ರರೊಬ್ಬರ ಮನೆಯಲ್ಲಿ ಉಳಿದುಕೊಂಡಿದ್ದೆವು. ಒಂದು ದಿನ ದೆಹಲಿಯ ಬೇಸಿಗೆಯಲ್ಲಿ ಮನೆಗಾಗಿ ಹುಡುಕಿ ಸುಸ್ತಾಗಿ ಮಧ್ಯಾಹ್ನ ಮಿತ್ರರ ಮನೆಗೆ ಹಿಂದಿರುಗಿದೆವು. ಮಿತ್ರ ಕೆಲಸದ ಮೇಲೆ ಆಫೀಸಿಗೆ ಹೋಗಿದ್ದ. ಆಗ ಇದ್ದಕ್ಕಿದ್ದಂತೆ ಕೆಲ ಮಹಡಿಯಲ್ಲಿ ವಾಸಿಸುತ್ತಿದ್ದ ಮನೆಯ ಮಾಲೀಕ ಬಂದು ನಾವಿಬ್ಬರೂ ಯಾವುದೋ ಅನೈತಿಕ ಅನಾಚಾರದಲ್ಲಿ ತೊಡಗಿರುವವರಂತೆ ನಮ್ಮನ್ನು ಪ್ರಶ್ನಿಸಲಾರಂಭಿಸಿದ. ನಾವಿಬ್ಬರೂ ಗಂಡಹೆಂಡತಿ ಎಂದು ಆತನಿಗೆ ಮನದಟ್ಟಾದ ಮೇಲೆಯೇ ಆತ ಹಿಂದಿರುಗಿದ್ದು.

ಆಗಿನ ಕಾಲದಲ್ಲಿ ಮಹಿಳೆಯರ ನಿತಂಬ ಚಿವುಟುವವರು, ಎದೆಗೆ ಕೈಹಾಕುವವರು ಇರಲಿಲ್ಲ ಎಂದೇನಲ್ಲ. ಅಂತಹ ವಿಕೃತರು ಆಗಲೂ ಇದ್ದರು. ಆದರೆ ಆಗಿನ ಕಾಲದಲ್ಲಿ ಯುವತಿಯೊಬ್ಬಳು ಗಟ್ಟಿಯಾಗಿ ನಿಂತು "ಯಾಕಲೇ? ಚಪ್ಪಲಿ ಸೇವೆ ಬೇಕೇನು?" ಎಂದು ಕೇಳಿದಕೂಡಲೇ ಅವರು ಪೇರಿ ಕೀಳುತ್ತಿದ್ದರು. ನಾನಂತೂ ಒಂದು ತಂತ್ರವನ್ನು ಅಳವಡಿಸಿಕೊಂಡಿದ್ದೆ. ಪತ್ರಕರ್ತೆಯಾಗಿದ್ದರಿಂದ ಬಹಳಷ್ಟು ದಿನ ರಾತ್ರಿ ಹತ್ತು ಗಂಟೆಯ ನಂತರವೇ ನನ್ನ ಬೈಕ್ ಮೇಲೆ ಮನೆಗೆ ಹೋಗುತ್ತಿದ್ದದ್ದು. ಆಗ ಕೆಲವು ಬಾರಿ ಪುರುಷರು ತಮ್ಮ ಬೈಕ್ ಮೇಲೆ ನನ್ನನ್ನು ಹಿಂಬಾಲಿಸುತ್ತಿದ್ದರು. ಆಗ ನಾನು ನನ್ನ ಬೈಕ್ ನಿಲ್ಲಿಸಿ "ನನ್ನ ಜೊತೆ ಹತ್ತಿರದ ಪೊಲೀಸ್ ಸ್ಟೇಶನ್‌ಗೆ ಬರುತ್ತೀಯಾ?" ಎಂದು ಕೇಳುತ್ತಿದ್ದೆ. ಆಗ ನನ್ನನ್ನು ಹಿಂಬಾಲಿಸುತ್ತಿದ್ದ ವ್ಯಕ್ತಿ ಅಲ್ಲಿಂದ ಆದಷ್ಟು ವೇಗವಾಗಿ ಮಾಯವಾಗುತ್ತಿದ್ದ!

70, 80, 90ರ ದಶಕಗಳಲ್ಲಿ ಬೆಂಗಳೂರು ಮಹಿಳೆಯರ ಪಾಲಿಗೆ ಸುರಕ್ಷಿತ ಸ್ವರ್ಗವಾಗಿತ್ತು ಎಂದೇನು ನಾನು ಇಲ್ಲಿ ಹೇಳಲು ಹೊರಟಿಲ್ಲ. ಆಗಲೂ ಸಮಸ್ಯೆಗಳಿದ್ದವು. ಕೆಲ ವರ್ಷಗಳ ಕಾಲ ಇತರೆ ನಗರಗಳಿಗಿಂತ ಬೆಂಗಳೂರಿನಲ್ಲಿ ವರದಕ್ಷಿಣೆ ಕಿರುಕುಳಕ್ಕೆ ಬಲಿಯಾದ ಮಹಿಳೆಯರ ಸಂಖ್ಯೆ ಅಧಿಕವಾಗಿತ್ತು. ಹಾಗೆಯೇ ಈ ನಗರ ಅಮಾನುಷವಾದ ಆಸಿಡ್ ದಾಳಿಗಳಿಗೂ ದಾಖಲೆ ಬರೆದದ್ದೂ ಇದೆ. ಇವು ಮಹಿಳೆಯರನ್ನು ಬೆಂಗಳೂರಿನ ಕೆಲ ಪುರುಷರು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದಕ್ಕೆ ನಿದರ್ಶನಗಳು. ಊಳಿಗಮಾನ್ಯ ವ್ಯವಸ್ಥೆ ರೂಪಿಸಿದ ಪುರುಷನ ಇಂತಹ ರಾಕ್ಷಸತ್ವ ತೆರೆಮರೆಯಲ್ಲಿ ಹಿಂದಿನಿಂದಲೂ ಇದೆ. ಅದು ಹಲವೊಮ್ಮೆ ಮುಂದೆ ಬಂದು ತನ್ನ ಅಸಹ್ಯ ಮುಖವನ್ನು ತೋರಿಸುತ್ತಿರುತ್ತದೆ. ಮೊನ್ನೆ ಬೆಂಗಳೂರಿನಲ್ಲಿ ಆ ರಾಕ್ಷಸ ಮತ್ತೊಮ್ಮೆ ಪ್ರತ್ಯಕ್ಷವಾಗಿದೆ.


ಬೆಂಗಳೂರು ಕಾಸ್ಮೋಪಾಲಿಟನ್ ನಗರವಾಗಿ ರೂಪುಗೊಳ್ಳಲು ಹಲವಾರು ಐತಿಹಾಸಿಕ ಕಾರಣಗಳಿವೆ. ಆದರೆ ಈ ನಗರ ಈಗ ಮಹಿಳಾ ಪೀಡಕ ನಗರವಾಗಿ ಬದಲಾಗಿದ್ದಕ್ಕೆ ಕಾರಣಗಳೇನು? ಇದರ ಮೂಲ ಎಲ್ಲಾ ಕೋಮಿನವರು ಮಹಿಳೆಯರ ರಕ್ಷಣೆಗಾಗಿ ಅವರನ್ನು ನಾಲ್ಕು ಗೋಡೆಗಳ ನಡುವೆ ಬಂಧಿಸಬೇಕೆಂಬ ಧೋರಣೆ ಹೆಚ್ಚಾಗುತ್ತಿರುವುದರಲ್ಲಿದೆಯೇ? ಅಥವಾ ನವ ಉದಾರವಾದಿ ಆರ್ಥಿಕ ನಿಯಮದೊಂದಿಗೆ ಮಹಿಳೆಯರನ್ನು ಸರಕಾಗಿ ನೋಡುವ ದೃಷ್ಟಿಕೋನ ಹೆಚ್ಚಾಗುತ್ತಿರುವುದರಲ್ಲಿ ಈ ಸಮಸ್ಯೆಯ ಬೇರುಗಳಿವೆಯೇ? ಬೆಂಗಳೂರಿನ ಮಹಿಳೆಯರು ಹಿಂದಿನಿಂದಲೂ ಅನುಭವಿಸುತ್ತಿರುವ ಮುಕ್ತ ಆಯ್ಕೆಯ ಸ್ವಾತಂತ್ರ್ಯ ಈಗ ಹೊರಗಿನಿಂದ ಬೆಂಗಳೂರಿಗೆ ವಲಸೆ ಬಂದವರಿಗೆ ಸಹಿಸಲಾಗುತ್ತಿಲ್ಲವೇ? ಈಗ ಹೆಚ್ಚುತ್ತಿರುವ 'ಉದಾರ ಸಂಸ್ಕೃತಿ' ಒಂದೆಡೆ ಪುರುಷರ ವಿಕೃತವನ್ನು ಪ್ರೋತ್ಸಾಹಿಸುತ್ತಾ ಮಹಿಳೆಯರ ಆಯ್ಕೆಗಳಿಗೆ ಕಡಿವಾಣಗಳನ್ನು ಹಾಕುತ್ತಿದೆಯೇ? ಅಥವಾ ನಮ್ಮ ದೇಶದ ಇತರೆ ನಗರಗಳಲ್ಲಿ ಆಗುತ್ತಿರುವುದೇ ಇಲ್ಲೂ ಪುನರಾವರ್ತನೆಯಾಗುತ್ತಿದೆಯೇ? ಇದೆಲ್ಲವನ್ನು ಕಂಡು ಮಹಿಳೆಯರು ಇನ್ನು ಮುಂದೆ ತಮಗೆ ರಕ್ಷಣೆ ಕಷ್ಟಸಾಧ್ಯ ಎಂದು ತೆಪ್ಪಗಾಗಬೇಕೆ?

ಬೆಂಗಳೂರಿನ ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆಯಲು ಏನು ಮಾಡಬೇಕು? ತಮ್ಮ ಆಯ್ಕೆಯ ಸ್ವಾತಂತ್ರ್ಯವನ್ನು ಪಡೆಯಲು ಯಾವ ಮಾರ್ಗ ಹಿಡಿಯಬೇಕು? ಸಾರ್ವಜನಿಕ ಸ್ಥಳಗಳಾದ ಪಾರ್ಕ್, ರಸ್ತೆ, ಹೋಟೆಲ್ ಇತ್ಯಾದಿಗಳಲ್ಲಿ ತಮಗೆ ಲೈಂಗಿಕ ಕಿರುಕುಳ ಆಗದಂತೆ ನೋಡಿಕೊಳ್ಳಲು ಎಂತಹ ಹೋರಾಟ ಕೈಗೊಳ್ಳಬೇಕು? ಮಹಿಳೆಯರ ಮೇಲಿನ ಲೈಂಗಿಕ ದಾಳಿಗೆ ಕಾರಣ ಪುರುಷರ ಮಿದುಳಿನಲ್ಲಿ ತುಂಬಿರುವ ಹೇಸಿಗೆಯೇ ಹೊರತು ಯುವತಿಯರು ಧರಿಸಿರುವ ಬಟ್ಟೆಗಳಲ್ಲ ಎಂದು ಗೃಹಮಂತ್ರಿ ಪರಮೇಶ್ವರ್ ತರಹದವರಿಗೆ ಅರ್ಥ ಮಾಡಿಸುವುದು ಹೇಗೆ?

ಮೊದಲನೆ ಹೆಜ್ಜೆಯಾಗಿ ಇದೇ ಶನಿವಾರ, ಜನವರಿ 7ರಂದು, ಕಬ್ಬನ್ ಪಾರ್ಕ್‌ನಲ್ಲಿರುವ ಬ್ಯಾಂಡ್ ಸ್ಟಾಂಡ್ ಹತ್ತಿರ ಹೀಗೆ ಸುಮ್ಮನೆ ಹಲವು ಮಹಿಳೆಯರು ಸೇರುವುದೆಂದು ನನ್ನ ಕೆಲವು ಮಹಿಳಾ ಮಿತ್ರರು ನಿರ್ಧರಿಸಿದ್ದಾರೆ. ಅವತ್ತು ನಾವು ಪ್ರತಿಭಟಿಸುವುದಿಲ್ಲ, ಘೋಷಣೆಗಳನ್ನು ಕೂಗುವುದಿಲ್ಲ. ಬದಲಾಗಿ ಅಲ್ಲಿ ಹಾಡುಗಳನ್ನು ಹಾಡುತ್ತಾ, ಆಟಗಳನ್ನು ಆಡುತ್ತಾ, ಪುಸ್ತಕ ಓದುತ್ತಾ... ಯಾವ ವಿಕೃತನಿಗೂ ಹೆದರದೆ ಅಲ್ಲಿ ಸಮಯ ಕಳೆಯುವುದರ ಮೂಲಕ ನಮಗೂ ಆ ಸಾರ್ವಜನಿಕ ಸ್ಥಳದಲ್ಲಿ ಸಮಯ ಕಳೆಯಲು ಹಕ್ಕು ಇದೆ ಎಂದು ತೋರಿಸುವುದಷ್ಟೇ ಮಹಿಳೆಯರ ಉದ್ದೇಶ.

ಎನಿಷ್ಟೆ ನಾನು ಕಂಡಿದ್ದ ಪ್ರೀತಿಸಿದ್ದ ಬೆಂಗಳೂರು ಈಗ ಇಲ್ಲವಾಗಿದೆ ಎಂದು ಹೇಳಲು ದುಃಖವಾಗುತ್ತಿದೆ.

ಉಗ್ರಪ್ಪ ವಿರುದ್ಧ ರೇಪಿಸ್ಟ್ ರಾಘೂ ಪಟಾಲ



ಅನಾಚಾರಿ ರಾಘವೇಶ್ವರನ ಪಾಪದ ಕೊಡ ದಿನೇದಿನೇ ಹೇಗೆಲ್ಲಾ ಭರ್ತಿಯಾಗುತ್ತಿದೆ ಅನ್ನುವುದಕ್ಕಿದು ಮತ್ತೊಂದು ಉದಾಹರಣೆಯಷ್ಟೇ. ಈ ಬಾರಿ ರಾಘೂ ಗ್ಯಾಂಗ್‌ನ ಸರ್ಜಿಕಲ್ ಸ್ಟ್ರೈಕಿಗೆ ಗುರಿಯಾಗಿದ್ದು ಎಮ್ಮೆಲ್ಸಿ ಉಗ್ರಪ್ಪ. ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಮತ್ತು ಅತ್ಯಾಚಾರ ನಿಯಂತ್ರಣ ಸಮಿತಿಯ ಅಧ್ಯಕ್ಷರೂ ಆಗಿರುವ ಪರಿಷತ್ ಸದಸ್ಯ ವಿ.ಎಸ್. ಉಗ್ರಪ್ಪ ವಿರುದ್ಧ ರಾಘೂ ಪಟಾಲಂ ದೂರು ದಾಖಲಿಸುವ ಮಟ್ಟಕ್ಕೆ ಬಂದಿದೆಯೆಂದರೆ, ತನ್ನ ಅನಾಚಾರದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲೂ ದನಿಯೆತ್ತುವವರ ವಿರುದ್ಧವೂ ಬಾಡಿಗೆ ಭಂಟರನ್ನು ಸ್ವಾಮೀಜಿ ಛೂಬಿಡುತ್ತಾನೆಂದರೆ; ಅದು ಆತನ ಅಸಹ್ಯದ ಪರಮಾವಧಿಯಲ್ಲದೇ ಮತ್ತೇನು?

ವಿಧಾನ ಪರಿಷತ್ ಸದಸ್ಯ ವಿ.ಎಸ್. ಉಗ್ರಪ್ಪ ಮತ್ತಿತರರು ಶ್ರೀರಾಮಚಂದ್ರಾಪುರ ಮಠದ ಜಗದ್ಗುರು ರಾಘವೇಶ್ವರ ಭಾರತಿ ಸ್ವಾಮೀಜಿ ವಿರುದ್ಧ ಕೊಲೆ ಯತ್ನ ನಡೆಸುತ್ತಿದ್ದಾರೆ. ಅವರ ವಿರುದ್ಧ ಉಗ್ರಪ್ಪ ಪ್ರಚೋದನಕಾರಿ ಹೇಳಿಕೆ ನೀಡುವ ಮೂಲಕ ಸ್ವಾಮೀಜಿಗೆ ಜೀವಭಯ ಹುಟ್ಟು ಹಾಕಿದ್ದಾರೆ. ಉಗ್ರಪ್ಪನವರ ಪ್ರಚೋದನೆಯಿಂದಾಗಿಯೇ ಸ್ವಾಮೀಜಿಯನ್ನು ಗುಂಡಿಕ್ಕಿ ಕೊಲ್ಲಬೇಕು ಎಂದು ಕೆಲವರು ಫೇಸ್‌ಬುಕ್ ಮತ್ತು ವಾಟ್ಸ್‌ಪ್‌ಗಳಲ್ಲಿ ಸಂದೇಶ ನೀಡುತ್ತಿದ್ದಾರೆ. ಇದಲ್ಲದೆ ಇನ್ನೂ ಕೆಲವರು ಸತ್ಯಶೋಧ ಮಿತ್ರಮಂಡಳಿ ಎಂಬ ಫೇಸ್‌ಬುಕ್ ಖಾತೆಯಲ್ಲೂ ಸ್ವಾಮೀಜಿಗೆ ಕೊಲೆ ಬೆದರಿಕೆ ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದಾರೆ. ಇದರಿಂದ ಮಠದ ಭಕ್ತಾದಿಗಳ ಧಾರ್ಮಿಕ ಭಾವನೆಗೆ ಧಕ್ಕೆಯಾಗಿದೆ. ಸ್ವಾಮೀಜಿಗಾಗಲಿ, ಮಠದ ಭಕ್ತರಿಗಾಗಲಿ ಏನೇ ತೊಂದರೆ ಯಾದರೂ ಅದಕ್ಕೆ ಕಾಂಗ್ರೆಸ್ ನಾಯಕ ವಿ.ಎಸ್. ಉಗ್ರಪ್ಪ ಮತ್ತು ಸತ್ಯಶೋಧಕ ಮಿತ್ರ ಮಂಡಳಿಯ ನಾಲ್ವರು ಸದಸ್ಯರೇ ನೇರ ಹೊಣೆಯಾಗುತ್ತಾರೆ. ಆದ್ದರಿಂದ ಸರ್ಕಾರ ಇವರೆಲ್ಲರನ್ನೂ ಬಂಧಿಸಿ ಕ್ರಮ ಜರುಗಿಸಬೇಕು ಎಂಬುದು ರಾಮಚಂದ್ರಾಪುರ ಮಠದ ಸೋಕಾಲ್ಡ್ ಆಡಳಿತಾಧಿಕಾರಿ ಕೆ.ಜಿ. ಭಟ್ ಎಂಬಾತ ವಿಧಾನಸೌಧ ಪೊಲೀಸರಿಗೆ ನೀಡಿರುವ ದೂರು.

ಕಳ್ಳ ಸ್ವಾಮಿಯೊಬ್ಬ ತನ್ನ ಅನಾಚಾರದ ವಿರುದ್ಧ ಯಾರ್‍ಯಾರು ದನಿಯೆತ್ತುತ್ತಾರೋ ಅಂಥವರೆಲ್ಲರನ್ನೂ ಒಬ್ಬೊಬ್ಬರಾಗಿ ಮುಗಿಸಲು ಈ ರೀತಿ ಪೊಲೀಸರಿಗೆ ದೂರು, ಸುಳ್ಳು ಕೇಸುಗಳು, ಬೆದರಿಕೆ, ಮಿಥ್ಯಾರೋಪ ಇತ್ಯಾದಿಗಳಲ್ಲೇ ಪ್ರತಿನಿತ್ಯ ಮುಳುಗೇಳುತ್ತಾನೆಂದರೆ; ಆತನ ದುರಾಚಾರದ ಎಲ್ಲ ಪರಿವೆಯಿದ್ದೂ ಆತನ ಭಟ್ಟಂಗಿ ಪಡೆ ಕೂಡ ದನಿಯೆತ್ತಿದವರ ವಿರುದ್ಧವೇ ಗುರುಗುಟ್ಟುತ್ತದೆಯೆಂದರೆ ಅದು ಪಾಪದ ಕೊಡ ಭರ್ತಿಯಾಗಿರುವುದರ ಲಕ್ಷಣವಲ್ಲದೆ ಮತ್ತೇನಲ್ಲ. ಈತನಕ ತನ್ನ ವಿಕೃತಿ ವಿರುದ್ಧ ದೂರು ಕೊಟ್ಟು ಪ್ರತಿನಿತ್ಯ ಕೋರ್ಟ್ ಪೊಲೀಸು ಎಂದೆಲ್ಲ ಓಡಾಡುತ್ತಿದ್ದ ಗಾಯಕಿ ಪ್ರೇಮಲತಾ ಶಾಸ್ತ್ರಿ ಗಂಡ ದಿವಾಕರ ಶಾಸ್ತ್ರಿ ಅವರ ಸಂಬಂಧಿಗಳು ಮಠಕ್ಕೆ ಬಂದು ಸಂಸಾರವನ್ನೇ ಹಾಳುಮಾಡಿಕೊಂಡವರು. ಅವರ ಸಂಬಂಧಿಗಳು ಇತ್ಯಾದಿಗಳನ್ನಷ್ಟೇ ಗುರಿಯಾಗಿಸಿ ಪೀಡಿಸುತ್ತಿದ್ದ ಕೇಡಿ ರಾಘವೇಶ್ವರ ಈಗ ಏಕಾಏಕಿ ಕಾಂಗ್ರೆಸ್ ಸರ್ಕಾರದ ಪ್ರಮುಖರೊಬ್ಬರ ವಿರುದ್ಧ ದಾಳಿಗಿಳಿಯುವುದಕ್ಕೂ ಕಾರಣವಿದೆ.

ಉಗ್ರಪ್ಪ ಆದೇಶ!

ಸದ್ಯ ಉಗ್ರಪ್ಪ ಯಾರೋ ಮಾಮೂಲಿ ಕಾಂಗ್ರೆಸ್ ನಾಯಕರಾಗಲಿ, ಮಿಕ್ಕೆಲ್ಲಾ ಎಮ್ಮೆಲ್ಸಿಗಳಂತೆ ತನ್ನ ಪಾಡಿಗೆ ತಾಸಿರಬೇಕಾದ ವ್ಯಕ್ತಿಯಾಗಲಿ ಅಲ್ಲ, ಮಹಿಳೆ ಮತ್ತು ಮಕ್ಕಳ ಮೇಲಿನ ಶೋಷಣೆ ಮತ್ತು ಅತ್ಯಾಚಾರ ನಿಯಂತ್ರಣ ಸಮಿತಿಯ ಅಧ್ಯಕ್ಷರು. ಆ ಕಾರಣಕ್ಕೇ ರಾಘವೇಶ್ವರನ ದುರಾಚಾರದ ಬಲಿಪಶುಗಳಾದ ಹವ್ಯಕರ ಗುಂಪೊಂದು ಉಗ್ರಪ್ಪರನ್ನ ಕಂಡು ದೂರು ಕೊಟ್ಟಿದ್ದು ಡಿಸೆಂಬರ್ ಇಪ್ಪತ್ತರಂದು. ಹವ್ಯಕ ಸಮಾಜದ ಹಿರಿಯರಾದ ಎಂ.ಎಸ್. ಭಟ್ ಮದ್ಗುಣಿ, ವಕೀಲರಾದ ಶಿವಾನಂದ ಭಟ್, ಉದ್ಯಮಿಗಳಾದ ಸಿಎಚ್‌ಎಸ್ ಭಟ್, ಚಾರ್ಟರ್ಡ್ ಅಕೌಂಟೆಂಟ್ ನರಸಿಂಹ ಮೂರ್ತಿ, ಹಿರಿಯ ವಕೀಲ ಶ್ರೀಪಾದ್ ಭಟ್, ಉದ್ಯಮಿಗಳಾದ ಈಶ್ವರ ಭಟ್ ಮತ್ತು ಯು.ಎನ್. ಭಟ್ ಇತ್ಯಾದಿ ಹತ್ತಕ್ಕೂ ಅಧಿಕ ಮಂದಿಯಿದ್ದ ಹವ್ಯಕ ಗಣ್ಯರ ನಿಯೋಗ ವಿಧಾನಸೌಧಕ್ಕೆ ಬಂದು ಉಗ್ರಪ್ಪನವರಿಗೆ ಮನವಿಯಿತ್ತಿದೆ.

ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯದ ವಿರುದ್ಧ ದನಿಯೆತ್ತುವುದು ತನ್ನ ಕರ್ತವ್ಯ ಸಹಜ ಹೊಣೆಗಾರಿಕೆಯಾದ್ದರಿಂದಲೇ ಉಗ್ರಪ್ಪ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು, ಸರ್ಕಾರದ ಪೊಲೀಸ್ ಇಲಾಖೆ ಸಲಹೆಗಾರರಾದ ಕೆಂಪಯ್ಯ, ಸಿಐಡಿ ಡಿಐಜಿ ಕಿಶೋರ್ ಚಂದ್ರ ಮುಂತಾದವರಿಗೆಲ್ಲ ಫೋನ್ ಮಾಡಿ ರಾಘವೇಶ್ವರನ ವಿರುದ್ಧ ಪ್ರಕರಣಗಳನ್ನು ಆದಷ್ಟು ಬೇಗ ಇತ್ಯರ್ಥಪಡಿಸುವಂತೆ ಆದೇಶಿಸಿದ್ದಾರೆ. ಅದೂ ಕೂಡ ಮನವಿಯ ಮೇರೆಗೆ. ಪ್ರೇಮಲತಾ ಶಾಸ್ತ್ರಿ ಮತ್ತು ದಿವಾಕರ ಶಾಸ್ತ್ರಿಗಳ ವಿರುದ್ಧ ರಾಘವೇಶ್ವರ ಹಾಕಿಸಿದ ಸುಳ್ಳು ಕೇಸು, ಧಾರಾವಾಹಿಗಳಲ್ಲಿ ನಟಿಸುತ್ತಿದ್ದ ಹವ್ಯಕ ಯುವತಿಯ ಮೇಲೆ ನಡೆದ ಅತ್ಯಾಚಾರ ಮತ್ತು ಮಠಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಹಾಕಿದ ಕೇಸುಗಳ್ಯಾವುದೂ ಇನ್ನೂ ಇತ್ಯರ್ಥವಾಗಿಲ್ಲ. ತೊಂಭತ್ತು ದಿನಗಳ ಒಳಗೆ ಚಾರ್ಜ್‌ಶೀಟ್ ದಾಖಲಿಸಲೇಬೇಕು. ಹಾಗೊಮ್ಮೆ ಸಾಕ್ಷ್ಯಾಧಾರಗಳಿಲ್ಲದೆ ಹೋದರೆ 'ಬಿ' ರಿಪೋರ್ಟ್‌ನ್ನಾದರೂ ಸಲ್ಲಿಸಬೇಕು. ಅದು ಬಿಟ್ಟು ಅನ್ಯತಾ ಕಾಲಹರಣ ಮಾಡುವುದು ಅನ್ಯಾಯಕ್ಕೆ ಕಾರಣವಾಗುತ್ತದೆ ಎಂದೇ ಉಗ್ರಪ್ಪ ಪೊಲೀಸ್ ವರಿಷ್ಠರನ್ನು ಒತ್ತಾಯಿಸಿದ್ದಾರೆ.

ಪ್ರೇಮಲತಾ ಶಾಸ್ತ್ರಿ ಮೇಲಿನ ಅತ್ಯಾಚಾರ ಪ್ರಕರಣದಲ್ಲಂತೂ ಕೋರ್ಟು 169ಕ್ಕೂ ಅಧಿಕ ಬಾರಿ ಸ್ವಾಮೀಜಿ ಮತ್ತು ಮಹಿಳೆ ಪರಸ್ಪರ ಸಮ್ಮತಿಯ ಮೇರೆಗೇ ಸಂಭೋಗ ನಡೆಸಿದ್ದಾರೆಂಬುದನ್ನು ಒತ್ತಿ ಹೇಳಿದೆ. ಈ ಪ್ರಕರಣ ಹೈಕೋರ್ಟ್ ಮುಂದೆ ಬಂದಾಗಲೂ ಮುಖ್ಯ ನ್ಯಾಯಮೂರ್ತಿಗಳೇ ಇವನೆಂಥಾ ಸ್ವಾಮೀರಿ.....? ಎಂದು ತಲೆ ಚಚ್ಚಿಕೊಂಡಿದ್ದಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳೇ ಸ್ವಾಮಿಯೊಬ್ಬ ಈ ಮಟ್ಟಿಗೆ ಕುಲಗೆಟ್ಟ ರೀತಿಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಯಾರೋ ಜನಸಾಮಾನ್ಯರು ಈ ರೀತಿ ಮಾಡಿದ್ದರೆ ಹಾಳಾಗಲಿ ಅನ್ನಬಹುದಿತ್ತು. ಅಂಥಾದ್ದರಲ್ಲಿ ಅರಿಷಡ್ವರ್ಗಗಳನ್ನು ಜಯಿಸಿದ್ದೇನೆಂದು ಹೇಳುವ ಸ್ವಾಮೀಜಿಯೇ ಸ್ವಚ್ಛಂದ ಕಾಮಕೇಳಿ ನಡೆಸಿದ್ದು ಕೋರ್ಟಿನಲ್ಲಿ ಸಾಬೀತಾಗಿದೆ ಎಂದಮೇಲೆ ಅಂಥಾ ಮಠಕ್ಕೊಬ್ಬ ಆಡಳಿತಾಧಿಕಾರಿಯನ್ನು ನೇಮಿಸುವುದು ಸರ್ಕಾರದ ಆದ್ಯತೆಯಾಗಬೇಕು ಎಂಬುದು ಉಗ್ರಪ್ಪನವರ ಕಾಳಜಿಯಾಗಿತ್ತು.

ಅದೇನಾಯಿತೋ ಗೊತ್ತಿಲ್ಲ, ಉಗ್ರಪ್ಪ ಈ ರೀತಿ ಪೊಲೀಸ್ ವರಿಷ್ಠರಿಗೆಲ್ಲ ಫೋನ್ ಮಾಡಿ ಒತ್ತಡ ಹಾಕಿದ್ದು ಮರುದಿನ ಪತ್ರಿಕೆಗಳಲ್ಲಿ ಸುದ್ದಿಯಾಗಿತ್ತು. ಬಹುಶಃ ದೂರು ನೀಡಲು ಬಂದವರೇ ತಮ್ಮೊಂದಿಗೆ ಪತ್ರಿಕಾ ವರದಿಗಾರರನ್ನು ಕರೆತಂದಿದ್ದರೇನೋ. ಉಗ್ರಪ್ಪ ಪೊಲೀಸ್ ಮಹಾ ನಿರ್ದೇಶಕರು, ಗೃಹ ಇಲಾಖೆ ಸಲಹೆಗಾರರು, ಸಿಐಡಿಯ ಮುಖ್ಯಸ್ಥರು ಇತ್ಯಾದಿಗಳೆಲ್ಲರಿಗೂ ಹೀಗ್ಹೀಗೇ ಆದೇಶಿಸಿದ್ದಾರೆಂದು ಮರುದಿನ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಸಾಲದ್ದಕ್ಕೆ ಉಗ್ರಪ್ಪನವರೇ ಅಖಿಲ ಹವ್ಯಕ ಒಕ್ಕೂಟದವರ ಭೇಟಿ ನಂತರ ನೆರೆದಿದ್ದ ಪತ್ರಕರ್ತರಿಗೆಲ್ಲ ತಾನು ಕೈಗೊಂಡ ಕ್ರಮದ ಕುರಿತಂತೆ ವಿವರಣೆ ನೀಡಿದ್ದರಲ್ಲ!



ಗುಂಡಿಟ್ಟು ಕೊಲ್ಲಿ...!

ಮರುದಿನದ ಪತ್ರಿಕೆಗಳಲ್ಲಿ ಇದು ವರದಿಯಾಗಿದ್ದೇ ತಡ, ಕೇಡಿ ರಾಘು ಬುಡಕ್ಕೆ ಬೆಂಕಿ ಬಿದ್ದಿದೆ. ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ಉಗ್ರಪ್ಪನವರನ್ನು ಹಣಿಯಲು ಏನೇನು ಬೇಕೋ ಅದೆಲ್ಲವನ್ನೂ ರಾಘೂ ಪಟಾಲಂ ಪ್ರಯೋಗಿಸಿದೆ. ಅದಕ್ಕೆಂದೇ 'ಸ್ವಚ್ಛ ಬ್ರಾಹ್ಮಣ ವೇದಿಕೆ' ಹೆಸರಿನ ಫೇಸ್‌ಬುಕ್ ಗುಂಪೊಂದನ್ನು ಸೃಷ್ಟಿಸಲಾಗಿದೆ. ಅದರಲ್ಲಿ ಒಬ್ಬೊಬ್ಬರಾಗಿ ಉಗ್ರಪ್ಪ ವಿರುದ್ಧ ನಡೆಸಿದ ದಾಳಿಯಿತ್ತಲ್ಲ; ಬಹುಶಃ ಯಾರೇ ಸ್ವಾಮೀಜಿ, ಯಾವುದೇ ಧಾರ್ಮಿಕ ವ್ಯವಸ್ಥೆಯೊಂದು ಈ ಮಟ್ಟದ ನೀಚತನಕ್ಕಿಳಿಯಲಿಕ್ಕಿಲ್ಲ. ಪ್ರದೀಪ್ ಸಿ.ಎನ್ ಎಂಬಾತ 'ಇವನಂತ ತುಗ್ರಪ್ಪ ಸಾವಿರ ಜನ ಬಂದರೂ ಮಠಮಾನ್ಯಗಳನ್ನು ಮುಟ್ಟಲು ಸಾಧ್ಯವಿಲ್ಲ, ಇದೇನು ನಿಮ್ಮಪ್ಪನ ಆಸ್ತೀನಾ... ತಾಕತ್ತಿದ್ದರೆ ಮುಟ್ಟು...' ಎಂದು ಕಮೆಂಟ್ ಮಾಡುತ್ತಾನೆ. ಆತನೇ ಮತ್ತೊಮ್ಮೆ ಕಮೆಂಟ್ ಮಾಡಿ ದನಾ ತಿನ್ನೋ ನಾಲಿಗೆ..... ಎನ್ನುತ್ತಾನೆ.

ಇದಕ್ಕೂ ಮುನ್ನ ರಾಜೇಶ್ವರಿ ಸುವಿಗ್ನಾ ಎಂಬಾಕೆ 'ಇಂಥವರನ್ನು ಗುಂಡಿಟ್ಟು ಕೊಲ್ಲಬೇಕು. ಆಗ ಮಠದ ತಂಟೆಗೆ ಬರುವುದಿಲ್ಲಾ' ಎಂದು ಒಂದು ಸಾಲಿನ ಕಮೆಂಟ್ ಮಾಡುತ್ತಾಳೆ. ಮತ್ತೊಬ್ಬ ಬಾಲಕೃಷ್ಣ ಎಂಬಾತ ಉಗ್ರನ ಮೇಲೆ ಸರ್ಜಿಕಲ್ ಸ್ಟ್ರೈಕ್ ಬ್ರಹ್ಮ ಸಮಾಜ ಮಾಡಬೇಕು ಎಂದು ಕಿಡಿಕಾರುತ್ತಾನೆ. ಶ್ಯಾಂಭಟ್ ಎಂಬ ಹೆಸರಲ್ಲಿ 'ಇಂತಹ ಹಲ್ಕಾಗಳು ನಮ್ಮ ನಾಯಕರಾಗಿರುವುದು ದುರಂತ' ಎಂಬ ಕಮೆಂಟ್ ಹಾಕುತ್ತಾನೆ. ಛಾಯಾದೇವಿ ಛಾಯಾ ಎಂಬ ಹೆಸರಲ್ಲಿ 'ಒಟ್ಟಲ್ಲಿ ಬ್ರಾಹ್ಮಣರ ಏಳಿಗೆ ಸಹಿಸದ ಜನ ಇವರಿಗೆಲ್ಲ ನಮ್ಮ ಒಗ್ಗಟ್ಟು ಗೊತ್ತಾಗಬೇಕು. ನಮ್ಮ ಮಠಮಂದಿರಗಳ ಸುದ್ದಿಗೆ ಬಂದ್ರೆ ಏನಾಗುತ್ತೆ ಅಂತ ಪಾಠ ಕಲಿಸಬೇಕು' ಎನ್ನುತ್ತಾಳೆ. ಮೋಹನ್‌ಕುಮಾರ್ ಎಲ್ ಎಂಬ ಹೆಸರಲ್ಲಿ 'ಕೇವಲ ಬ್ರಾಹ್ಮಣ ಮಠಗಳ ಮೇಲೆ ಕಣ್ಣು ಹಾಕುತ್ತಿರುವ ದರಿದ್ರ ಅಹಿಂದ ಪರ ಸರ್ಕಾರ ಒಕ್ಕಲಿಗರ, ಲಿಂಗಾಯತರ ಮಠಗಳನ್ನು ಚರ್ಚು, ಮಸೀದಿಗಳನ್ನು ಮುಟ್ಟುವ ಧೈರ್ಯ ತೋರಿಸಲಿ. ಷಂಡ ಸರ್ಕಾರ, ಅದಕ್ಕೊಬ್ಬ ಶಿಖಂಡಿ ವಕ್ತಾರ...!'

ಹೀಗೆ ಸ್ವಚ್ಛ ಬ್ರಾಹ್ಮಣ ವೇದಿಕೆ ಎಂಬ ಫೇಸ್‌ಬುಕ್‌ನ ಖಾತೆಯ ತುಂಬ ಉಗ್ರಪ್ಪ ವಿರುದ್ಧ ವಾಚಾಮಗೋಚರ ಬೈಗುಳಗಳನ್ನೇ ಹರಿಯಬಿಟ್ಟ ರಾಘೂ ಪಟಾಲಂ ಕಳ್ಳಾಟ ಹೊರಜಗತ್ತಿಗೆ ಗೊತ್ತಾಗಲು ಸಾಧ್ಯವೇ ಇಲ್ಲವ ಭಾವಿಸಿತ್ತೇನೊ. ಇದನ್ನು ಸೂಕ್ಷ್ಮವಾಗೇ ಗಮನಿಸಿದ ಉ ಎಲ್ಲಾ ಕಮೆಂಟುಗಳ ಭಾಷೆ, ವಿಷಯ ಮತ್ತು ದಾಟಿಯ ಸ್ಪಷ್ಟವಾದ ಒಂದು ಸಂಗತಿಯೆಂದರೆ ಈ ಎಲ್ಲಾ ಕಮೆ ಗಳನ್ನೂ ಒಂದೇ ವ್ಯಕ್ತಿ ಅಥವಾ ಗುಂಪು ಹಾಕಿರಬೇಕೆಂಬ ಮನದಟ್ಟಾಗಿತ್ತು. ಮರುದಿನವೇ ವಿಧಾನಸೌಧ ಪೊ ಠಾಣೆಯಲ್ಲಿ ಸ್ವಚ್ಛ ಬ್ರಾಹ್ಮಣರ ವೇದಿಕೆಯ ವಿರುದ್ಧ ದ ದಾಖಲಿಸಿದ್ದಾರೆ. ಅದರಲ್ಲೂ ಗುಂಡಿಟ್ಟು ಕೊಲ್ಲಬೇಕು, ಸರ್ಜಿ ಸ್ಟ್ರೈಕ್ ಮಾಡಬೇಕು, ಇಂಥ ಹಲ್ಕಾಗಳು ನ ನಾಯಕರಾಗಿರುವುದೇ ದುರಂತ, ಷಂಡ ಸರ್ಕಾರ, ಶಿ ವಕ್ತಾರ... ಇತ್ಯಾದಿ ಅಸಹ್ಯದ ಬೈಗುಳದ ಪ್ರಾಣಹಾನಿಗೆ ಕರೆ ಫೇಸ್‌ಬುಕ್ ಖಾತಾದಾರರ ಹೆಸರನ್ನೆಲ್ಲ ಪಟ್ಟಿ ಮಾ ಪೊಲೀಸರಿಗೆ ದೂರು ನೀಡಿದ್ದಾರೆ. ಹೀಗೆ ಉಗ್ರಪ್ಪ ನ ದೂರಿನ ಆಧಾರದ ಮೇಲೆ ಪ್ರಾಣಹಾನಿ, ಮಾನ ಹಾ ಕಮೆಂಟುಗಳನ್ನು ಮಾಡಿದವರ ಪಟ್ಟಿ ಮಾಡಿದ ವಿಧಾನ ಪೊಲೀಸರಿಗೆ ಒಟ್ಟು 98 ಹೆಸರುಗಳ ಪಟ್ಟಿ ಸಿಕ್ಕಿದೆ!

ಬೀದಿಗೆ ಬಿದ್ದ ಕಳ್ಳಾಟ!

ಯಾವತ್ತು ಉಗ್ರಪ್ಪ ದೂರು ಕೊಟ್ಟಿದ್ದು ಗೊತ್ತಾಯಿ ಹುಷಾರಾದ ರಾಘೂ ಸ್ವಾಮಿ ತನ್ನ ಭಟ್ಟಂಗಿ ಸಂ ತಲಕಾಲಕೊಪ್ಪ ಎಂಬಾತನ ಹೆಸರಲ್ಲಿ ವಿ ಪತ್ರಿಕಾಪ್ರಕಟಣೆಯೊಂದನ್ನು ಹೊರಡಿಸಿದ್ದಾನೆ. ಯ ಉಗ್ರಪ್ಪ ವಿರುದ್ಧ ವಾಚಾಮಗೋಚರ ಬೈದಿದ್ದಾ ಗುಂಡಿಟ್ಟು ಕೊಲ್ಲಬೇಕೆಂದು ಯಾರೆಲ್ಲ ಕರೆ ಕೊಟ್ಟಿದ್ದಾ ಅವರ್‍ಯಾರೂ ಮಠದ ಭಕ್ತರಲ್ಲವೆಂದೂ, ಶ್ರೀಮಠವಾ ಸ್ವಾಮೀಜಿಯಾಗಲಿ ತಮ್ಮ ಭಕ್ತರಿಗೆ ಇಂಥ ಕಾನೂನುಬಾ ಕೃತ್ಯಕ್ಕೆ ಕುಮ್ಮಕ್ಕು ಪ್ರೋತ್ಸಾಹ ನೀಡುವುದಿಲ್ಲವೆಂದು ಬಗ್ಗೆ ಸರ್ಕಾರ ಏನೇ ಕ್ರಮ ಕೈಗೊಂಡರೂ ಸ್ವಾಗತಾ ಪತ್ರಿಕಾಪ್ರಕಟಣೆ ರವಾನಿಸಿದ್ದ.

ಮೇಲುನೋಟಕ್ಕೆ ಸ್ವಾಮಿ ಸಂಭಾವಿತನೆಂ ತೋರಿಸಿಕೊಳ್ಳಲು ಈ ಥರದ ಡ್ರಾಮಾ ಒದ ಮಾಡಲಾಗಿತ್ತಾದರೂ ಅಸಲೀ ಮರ್ಮ ಗೊತ್ತಾಗಲು ಸಮಯ ಹಿಡಿಯಲಿಲ್ಲ. ಯಾವ ಸಂದೇಶ್ ತಲಕಾಲ ಎಂಬಾತ ಸ್ವಚ್ಛ ಬ್ರಾಹ್ಮಣ ವೇದಿಕೆ ಹೆಸರಿನ ಫೇಸ್

⇨

ಉಗ್ರಪ್ಪನಿಗೆ ಅವನಪ್ಪ ಯಾರೆಂದು ಗೊತ್ತಾ? ಕೇಡಿ ರಾಘೂ ಕಳ್ಳಾ

ತಾನೇ ಸೃಷ್ಟಿಸಿದ ನಕಲಿ ಖಾತೆಗಳ ಮೂಲಕ ಖದೀಮ ರಾಘೂ ಉಗ್ರಪ್ಪ ವಿರುದ್ಧ ಮಾಡಿದ ದಾಳಿಗಳ ಕೆಲ ಸ್ಯಾಂಪಲ್ಲುಗಳಿವು-


* **Shyam Prakash Polya**- ಆಡಳಿತಾಧಿಕಾರಿ ಬೇಕಿರೋದು ನರಸತ್ತ ಕಾಂಗ್ರೆಸ್ ಸ್ಟೇಟ್ Govtಗೆ.
* **Mohan Kumar**- ಕೇವಲ ಬ್ರಾಹ್ಮಣ ಮಠಗಳ ಮೇಲೆ ಕಣ್ಣು ಹಾಕುವ ಈ ದರಿದ್ರ ಅಹಿಂದ ಪರ ಸರ್ಕಾರ ಚರ್ಚು ಮಸೀದಿಗಳನ್ನು....
* **Shyama Bhat**- ಇಂತಹ ಹಲ್ಕಾಗಳು ನಮ್ಮ ನಾಯಕರು ದುರಂತ.
* **Chayadevi Chaya**- ಒಟ್ನಲ್ಲಿ ಬ್ರಾಹ್ಮಣರ ಏಳಿಗೆ ಸಹಿಸದ ಜನ ಇವರಿಗೆಲ್ಲ ನಮ್ಮ ಒಗ್ಗಟ್ಟು ಗೊತ್ತಾಗಬೇಕು. ನಮ್ಮ ಮಠಮಂದಿರಗಳ ಸುದ್ದಿಗೆ ಬಂದ್ರೆ ಏನಾಗುತ್ತೆ ಅಂತ ಪಾಠ ಕಲಿಸಬೇಕು.
* ವೇಣುಗೋಪಾಲ ಬೆಳೆಯೂರು- ಛೀ ಹುಸುಲೂಸ್ ಜನಾ...!
* **Rajeshwari Suvigna**- ಇಂಥವರನ್ನಾ ಗುಂಡಿಕ್ಕಿ ಕೊಲ್ಲಬೇಕು. ಆಗ ಮಠದ ತಂಟೆಗೆ ಬರುವುದಿಲ್ಲಾ.
* **Pradeep CN**- ಇವನಂತ ತುಗ್ರಪ್ಪ, ಸಾವಿರ ಜನ ಬಂದರೂ ಮಠಮಾನ್ಯಗಳನ್ನು ಮುಟ್ಟಲು ಸಾಧ್ಯವಿಲ್ಲ, ಇದೇನು ನಿಮ್ಮಪ್ಪನ ಆಸ್ತೀನಾ ತಾಕತ್ತಿದ್ದರೆ ಮುಟ್ಟು
* **Pradeep CN**- ದನ ತಿನ್ನೋ ನಾಲಿಗೆ.
* **Anant Hegde**- ಉಗ್ರಪ್ಪನಿಗೆ ಅವನಪ್ಪ ಯಾರೆಂದು ಗೊತ್ತಾ? ಅಡ್ಡ ಬ ಉದ್ಭವ ನರಕಾಸುರ ಉಗ್ರಪ್ಪ
* **Ananthram Nagabhusan**- ವಿ ಉಗ್ರಪ್ಪ ಅಪರಾಧಿಗೂ ಆರೋ ಇರುವ ವ್ಯತ್ಯಾಸ ಗೊತ್ತಿಲ್ಲದ ನಿಮ್ಮಂತಹವರಿಗೆ ಏನು ಹೇಳಬೇಕು? ಈ ಹೇಳಿಕೆ ಕೊಟ್ಟು ಯಾಕೆ ಎಲ್ಲರ ಕೈಯಲ್ಲೂ ಉಗಿಸಿಕೊಳ್ತೀಯಾ ನಾಚಿಕೆ ಆಗು
* **Krishnamurthy Bhat**- ಈ ಲೋಫರ್‌ಗೆ ಯಾಕಪ್ಪಾ ಮಠದ ಉಸಾ
* ರಾಮಚಂದ್ರ ಬಿ.ಸಿ - ತಿಕ್ಕಲು ಮನುಷ್ಯ.
* **Ishwar Bhat Vadwe**- ಆಡಳಿತಾಧಿಕಾರಿ ನೇಮಿಸಲು ಉಗ್ರಪ್ಪ ಯ

.... ಹೀಗೆ ಯಾರ್‍ಯಾರದೋ ಹೆಸರಲ್ಲಿ ಫೇಕು ಖಾತೆಗಳನ್ನು ತೆರೆದು ರಾಘೂ ಉಗ್ರಪ್ಪನವರ ವಿರುದ್ಧ ಕಿಡಿಕಾರಿದ ರೀತಿ, ಅದರ ಧಾಟಿ ಮತ್ತು ಬರವಣಿಗೆಯ ನೋಡಿದರೆ ಇದೆಲ್ಲವನ್ನೂ ಒಬ್ಬನೇ ಮಾಡಿದಂತಿಲ್ಲವೆ?

ಮೋದಿ ಸುಳ್ಳೇಳತನೆ ಸಾರ್, ನಂಬಬಾರ್ದು!

ಥೂತ್ತೇರಿ

▶ ಯಾಹೂ



ಳೆದ ವಾರ ಕರ್ನಾಟಕ ಎರಡು ಮೂರು ಘಟನೆ
ಬೆಚ್ಚಿ ಕೂತಿದೆ. ಅದರಲ್ಲಿ ಒಂದೆರಡು ಭಜರಂಗಿ
ಗಳು ದಕ್ಷಿಣ ಕನ್ನಡ ಜಿಲ್ಲೆಗೆ ಬೆಂಕಿ ಹಚ್ಚುತ್ತೇವೆ
ಮತ್ತೊಂದು ಸಿರ್ಸಿಯ ವೈದ್ಯರನ್ನು ಹಿಡಿದು
ಮಾಡಿದೆ. ಇವುಗಳ ಮೂಲಗುಣಗಳನ್ನ ಅರಿತ
ಾದರೂ ಅಚ್ಚರಿಯಾಗಿಲ್ಲ. ಆದರೆ ಇವುಗಳ ಇಂತಹ
ದ ಮೂಲ ಯಾವುದು ಎಂಬುದು ಚರ್ಚೆಯಾಗ
. ಕುತ್ತಿಗೆ ಭಾಗಕ್ಕೆ ಮತ್ತು ತಲೆಯ ಭಾಗಕ್ಕೆ ಗಾಯಾ
ಕೊಂಡ ವೈದ್ಯರು ತಮ್ಮ ಜೀವಿತಾವಧಿಯಲ್ಲಿ ಒಂದು
ಾನಿತ ಹಲ್ಲೆಯಾಗಿ ನೆನೆದು ನೋಯುವುದು
ಲ್ಲವೆ. ಆದಷ್ಟು ಬೇಗ ಪ್ರಜ್ಞಾವಂತ ಶೂದ್ರಶಕ್ತಿ ಚಿಡ್ಡಿಗಳಿಗೆ
ಹುಟ್ಟಿಸಬೇಕಿದೆ. ಇಲ್ಲವಾದರೆ ಈ ಅನಾಗರಿಕರು
ಲದಿಂದಲೇ ಮೆರೆದಾಡುವ ಕಾಲ ದೂರವಿಲ್ಲವಂತಲ್ಲಾ.
ನ್ನ ನಮ್ಮ ಸಜ್ಜನ ರಾಜಕಾರಣಿ ಮಲಗಿದಲ್ಲಿಯೇ
ಟುಹೋಗಿದ್ದಾರೆ. ತುಂಬಲಾರದ ನಷ್ಟ ಎಂದರೆ
ಕಳೆದ ಹನ್ನೆರಡು ವರ್ಷಗಳಿಂದ ಸಾವನ್ನು ಅರಸುತ್ತ
ರುವ ರಾಜಕಾರಣಿಗಳ ಸನಿಹಕ್ಕೆ ಸುಳಿಯದ ಸಾವು,
ಆರೋಗ್ಯವಂತ ಮಹದೇವ ಪ್ರಸಾದರನ್ನು
ರಿಸಿದೆ. ಈ ವಿಪರ್ಯಾಸಕ್ಕೆ ಥೂ ಎನ್ನದೆ ವಿಧಿಯಿಲ್ಲ,
ೇರಿ!

* *

ಥರ ಇದ್ದವರು ಅವರೊಬ್ಬರೆ ಎನ್ನುವಂತಿದ್ದ
ದೇವ ಪ್ರಸಾದ್, ರಾಜಕಾರಣದಲ್ಲಿ ಮೆಚ್ಚಿದ್ದು ಇಬ್ಬರನ್ನು.
ಪಟೇಲರು ಮತ್ತೊಬ್ಬರು ಎಂ.ಪಿ. ಪ್ರಕಾಶ್. ಈ
ಹಿಂಬಾಲಕರಾದದ್ದು ಸಿದ್ದರಾಮಯ್ಯನಿಗೆ. ಪರಸ್ಪರ
ಸಿಕೊಂಡ ಇವರಿಬ್ಬರ ನಡುವೆ ಹೆಚ್ಚು ಮಾತಿನ
ಿರಲಿಲ್ಲ, ಮನಸ್ತಾಪಕ್ಕೂ ಜಾಗವಿರಲಿಲ್ಲ. ಆದ್ದರಿಂದ
ಸ್ಥೈರ್ಯ ಒಂದಿಷ್ಟು ಉಡುಗಿದ್ದು ನಿಜ. ಆದರೆ
ಸ್ಸನ್ನು ಮುಗಿಸುವ ಸಂಚಿನಲ್ಲಿರುವ ಮಾಧ್ಯಮಗಳ
ಶ್ರೀನಿವಾಸ್ ಪ್ರಸಾದರಿಂದ ದಲಿತರು ಕಾಂಗ್ರೆ
. ಮಹದೇವ ಪ್ರಸಾದ್ ನಿರ್ಗಮನದಿಂದ
ಯತರು ಹೊರ ನಡೆದರು. ಅಲ್ಲಿಗೆ ಮೈಸೂರು
ದಲ್ಲಿ ಕಾಂಗ್ರೆಸ್ ಕತೆ ಮುಗಿಯಿತೆಂದು ಭಾವಿಸಿದ
ಮದವರ ಮೂರ್ಖತನಕ್ಕೆ ಏನು ಹೇಳುವುದು.
ೇರಿ!!

* *

ುಕ್ಕುವುದರಲ್ಲಿ ಮುಕುಡಪ್ಪ ಪ್ರಖ್ಯಾತನಾದ ವ್ಯಕ್ತಿ.
ನಾದ ರಾಯಣ್ಣ ಹೋರಾಡಿದ್ದು ಲಿಂಗಾಯತರ
ನ್ನು ರಾಣಿ ಮಾಡಲು. ಹಾಗೆಯೇ ಈ ಆಧುನಿಕ
ಈಶ್ವರಪ್ಪ ಹೋರಾಡುತ್ತಿರುವುದು ಶೋಭಾಳ
ಣಿಗ ಲಿಂಗಾಯತ ಯಡಿಯೂರಪ್ಪನನ್ನು ಕರ್ನಾಟಕದ
ಸನದ ಮೇಲೆ ಕೂರಿಸಿ ಕಣ್ತುಂಬ ನೋಡಿ ಕಣ್ಮುಚ್ಚಲು
ತೆ ಮಾತನಾಡಿದ್ದಾರಂತಲ್ಲಾ, ಇದೇ ಮುಕುಡಪ್ಪ
ಮಯ್ಯನ ಬಳಿಯಿದ್ದಾಗ ಸಿದ್ದು ಪರವಾಗಿ ಅಹಿಂದ
ಏರ್ಪಡಿಸಲು ಸಹಾಯ ಮಾಡಿದ್ದವರು. ಆದರೆ ಸಿದ್ದು ಸೂಕ್ಷ್ಮವಾಗಿ ಗಮನಿಸಲಾಗಿ ಮುಕುಡಪ್ಪನ ಬಾಯಿ ಏನು ಸಿಕ್ಕರೂ ಮುಕ್ಕುವಂತಿದ್ದರಿಂದ ಒಳಗೊಳಗೆ ಬೆಚ್ಚಿ ತಾತ್ಸಾರ ಮಾಡತೊಡಗಿದರಂತಲ್ಲಾ. ಮಾಡಿದ ಉಪಕಾರಕ್ಕೆ ಮೆಚ್ಚುಗೆ ಮಾತು ಇಲ್ಲ. ಕೃತಜ್ಞತೆಯ ನಡವಳಿಕೆಯೂ ಇಲ್ಲ. ಇಂತಹ ಸಿದ್ದು ಬಳಿಯಿದ್ದರೆ ಬರೀ ಮುದ್ದೆಯೇ ಗತಿಯೆಂದು ಬಗೆದ ಮುಕುಡಪ್ಪನಿಗೆ ಕಂಡಿದ್ದೇ ಕಂಠಪೂರ್ತಿ ತಿಂದು ಕೊಬ್ಬಿದ ಈಶ್ವರಪ್ಪನೆಂಬ ಟಗರು. ಆ ಕೂಡಲೇ ಸಿದ್ದು ಮನೆ ಕಾಂಪೌಂಡ್ ನೆಗೆದ ಮುಕುಡಪ್ಪ, ಈಶ್ವರಪ್ಪನ ಕೊರಳಿಗೆ ಗಂಟುಬಿದ್ದು ಈಗ ಆಧುನಿಕ ರಾಯಣ್ಣನನ್ನು ರೂಪಿಸುತ್ತಿದ್ದಾರಂತಲ್ಲಾ. ಆದರೆ ನೆನಪಿರಲಿ ರಾಯಣ್ಣ ಆಲದ ಮರಕ್ಕೆ ನೇಣು ಹಾಕಿಸಿಕೊಂಡದ್ದು, ಹುತಾತ್ಮನಾದದ್ದು ಬ್ರಿಟಿಷರ ಇನಾಮಿಗೆ ಮನಸೋತವರಿಂದ. ಇರಲಿ ಸದ್ಯದ ಜೋಕ್ ಯಾವುದೆಂದರೆ ಪುರೋಹಿತರ ಪಿಂಡಗಳಂತೆ ಮಾತನಾಡುತ್ತ, ಪೇಜಾವರರ ಆಜ್ಞೆ ಪಾಲಿಸುತ್ತ, ದನ ತಿನ್ನುವವರ ಗಂಟಲು ಸೀಳುತ್ತೇನೆ ಎಂದು ಕಿರುಚುತ್ತಿದ್ದ ಈಶ್ವರಪ್ಪನಿಗೆ ಮನುವಾದಿ ಮಾರ್ಗದಲ್ಲಿ ಯಾವ ಘನ ಪುರುಷನೂ ಸಿಕ್ಕದೆ ಓಲೆಕಾರ ರಾಯಣ್ಣ ಸಿಕ್ಕಿಕೊಂಡಿರುವುದು ಅವುಗಳ ಬೌದ್ಧಿಕ ದಾರಿದ್ರ ತೋರುವುದಿಲ್ಲವೆ. ಥೂತ್ತೇರಿ!!!

* * *

ಸದ್ಯದಲ್ಲಿ ನೋಟು ಬ್ಯಾನಿನ ಪರಿಣಾಮಕ್ಕೆ ಸಿಕ್ಕ ಜನ ಹೇಗಿರಬಹುದೆಂಬ ಕುತೂಹಲವಾಯ್ತಲ್ಲಾ. ಈ ಬಗ್ಗೆ ಮಾತನಾಡಿಸಲು ವಾಟಿಸ್ನೆಗಿಂತ ಮಿಗಿಲಾದ ವ್ಯಕ್ತಿ ಇರಲಾರನೆಂದು ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಏನಿದೀ ಗ್ರಹಚಾರವೋ ಏನಿದೀ ವನವಾಸವೋ"

"ಹಲೋ ನಮಸ್ಕಾರ ಸಾರ್."

"ಹೇಗಿದ್ದೀ ವಾಟಿಸ್ನೆ."

"ಲೈಫೇ ಬೋರಾಗ್ಯದೆ ಸಾರ್."

"ಯಾಕ್ ಬೋರಾಗಿದೆ."

"ಏನೂ ಅಂತ ಹೇಳಕ್ಕೆ ಬತ್ತಾಯಿಲ್ಲ ಸಾರ್. ಪ್ರಜಾಸ್ತೋಮ ದಲ್ಲಾಗ್ಯದೆ."

"ಕಾರಣ ಏನೂ ಅಂತ ಹೇಳ್ತಿರಾ?"

"ಫೈನಾನ್ಸ್ ಪ್ರಾಬ್ಲಮ್ಮು."

"ಯಲ್ಲ ಸರಿಯಾಗಿದೆಯಂತಲ್ಲಾ?"

"ಯಾವ ಪೊಲಿಸ್ ಥೆಲೊ ಸಾರ್ ಅಂಗಂದೋನು. ಆ ಮನಮೋಹನ ಸಿಂಗ್ ಹತ್ತೊರಸ ಪ್ರಧಾನಿಯಾಗಿ ನಮ್ಮ ಸವಾಸಕ್ಕೆ ಬಂದಿರಲಿಲ್ಲ. ಈ ಮೋದಿ ನಮ್ಮ ಮನೆ ಅಡಿಗೆಮನಿಗೂ ಬಂದನಲ್ಲಾ ಸಾರ್."

"ಅಡಿಗೆಮನಿಗೂ ಬಂದವ್ರಾ?"

"ಹೌದು ಸಾರ್. ನನ್ನೆಂಡ್ತಿ ಕೂಡ ಮೋದಿ ಅದ್ಯಾರದೋ ದುಡ್ಡು ಕಿತ್ತು ನಮ್ಮ ಅಕೌಂಟಿಗಾಕ್ತನಂತೆ ಅಂತ ಮಾತಾಡ್ತಳಲ್ಲ ಸಾರ್."

"ಅಂತೂ ಇಂದಿರಾಗಾಂಧಿ ತರ ಇವನೂ ಹಳ್ಳಿ ಜನಗಳಿಗೆ ತಲುಪಿದ ಅನ್ನು."

"ಇಂದ್ರಾಗಾಂಧಿ ಸ್ವಲ್ಪ ಲೇಟಾದ್ಲು ಸಾರ್. ಗರೀಬಿ ಹಟಾವ್ ಅಂದ್ಲು, ಗರೀಬರೇ ಸತ್ರು ವಿನಃ ಗರೀಬು ಅಂಗೆ ಉಳಿತು. ಇವ್ನು ಥವ್ಜೆಂಡು ಫೈಹಂಡ್ರೆಡ್ ಹಟಾವ್ ಅಂದ. ಹಟಾವಾಯ್ತು. ಬಡಬಗ್ಗರ ಕಥೆನೂ ಮುಗಿತು ಸಾರ್."

"ಆಗಂತಿಯಾ?"

"ಸಾರ್, ಕೂಲಿಗೆ ಅಂತ ಸಿಟಿಗೋದೋರು ವಾಪಸು ಬಂದ್ರು. ಬಿಲ್ಡಿಂಗ್ ಕ್ಯಲಸ ನಿಂತದೆ, ಮರಳದಂಧೆ ನಿಂತದೆ, ದೇಶನೆ ಸ್ವಂಟ ಮುರಕಂಡು ಮನಿಗಿರಂಗೆ ಕಾಣ್ತಾ ಅದೆ ಸಾರ್."

"ಮುಂದೆ ಸರಿ ಹೋಗುತ್ತಂತಲ್ಲಾ."

"ಈಗಿನ ಕತೆ ಹೇಳಿ ಸಾರ್. ಮೊನ್ನೆ ದಿನ ಬಂಡಿಗನೂಲಿ ಹೋಟ್ಲಿಗೋಗಿ ಕುಂತಿದ್ದೆ. ಇದೇ ಮೋದಿ ವಿಷಯ ತಗದು ಬೋದೆ ನೋಡಿ, ಜನವೇ ಸೇರಿಬುಟ್ರು."

"ಏನಂತ ಬೋದ್ರಿ?"

"ಈ ಮೋದಿಗೆ ಎಜುಕೇಷನ್ ಇಲ್ಲ. ಅದ್ಕೆ ಟೀ ಅಂಗಡಿ ಮಡಿಕಂಡು ಕೇವಲ ಹದಿನೈದು ರೂಪಾಯಿ ಬಂಡವಾಳದಲ್ಲಿ ಕಾಲ ಮಾಡಿದೋನು. ಅಂಥೋನ್ನ ಪ್ರಧಾನಿ ಮಾಡಿಕಂಡು ಮೋಸ ಹೋಗಿದ್ದೀವಿ. ಇವ್ನು ಸಂಸಾರಸ್ಥನಾಗಿದ್ರೆ ಸಂಸಾರದ ಕಷ್ಟ ಗೊತ್ತಾಗದು. ಅದೂ ಇಲ್ಲ. ಕಟಿಗಂಡೆಂಡ್ತಿ ಸಾಕಕ್ಯಾಗದೆ ಬುಟ್ಟು ಹೋದೋನು. ಅವುರವ್ವ ಓಲ್ಡೇಜು ಮತ್ತು ವಿಡೋ ಪಿಂಚಣಿ ತಗಂಡು ಬದುಕ್ತಾ ಅವ್ಳೆ. ಯಾರು ಇಲ್ದೆಯಿರೋ ಇವ್ನು ತನ್ನನ್ನೇ ಫಕೀರ ಅನ್ನಕತ್ತನೆ. ಫಕೀರ ಆದೋನು ದೇಶ ಆಳಬಾರ್ದು. ಬಾಬಾ ಬುಡನ್‌ಗಿರಿಗೋಗಿ ಸೇರಿಕಬೇಕು ಅಂದೆ ಸಾರ್. ಜನ ಬೇಸ್ ಕಣಯ್ಯ ಅಂದ್ರು. ಆಮ್ಯಾಲಿನ್ನೊಂದು ಮಾತಂದೆ. ಇವನು ಚನ್ನಾಗಿ ಮಾತಾಡ್ತನೆ. ಚನ್ನಾಗಿ ಸುಳ್ಳೇಳತನೆ. ಅಂಗಾಗಿ ಇವ್ನನ್ನ ನಂಬಬಾರದು. ನಮ್ಮ ಅಕೌಂಟಿಗೆ ದುಡ್ಡಾಕ್ತಿನಿ ಅಂತನೆ. ನಮ್ಮ ಅಕೌಂಟಿಗೆ ದುಡ್ಡು ಬರಬೇಕಾದ್ರೆ ನಮ್ಮ ಮಕ್ಕಳು ಹಾಕಬೇಕು. ಇಲ್ಲ ನಮ್ಮಿಂದ ಸಾಲ ತಗಂಡೋನು ಹಾಕಬೇಕು. ಅದ್ಯಾವುದೂ ಇಲ್ಲದೆ ದುಡ್ಡು ಬರಲ್ಲ. ಈ ನನಮಕ್ಕಳು ರಾಮಮಂದಿರ ಕಟ್ಟಿದಂಗೆಯ ನಮ್ಮ ಅಕೌಂಟಿಗೆ ದುಡ್ಡು ಬರದು ಅಂದೆ ಸಾರ್. ಜನ ಯಲ್ರೂ ಒಂದೊಂದು ಕಾಫಿ ಹೇಳೋರೆಯ. ಇನ್ನು ಮುಂದೆ ಇವ್ನೇನು ಅಂತ ಯಲ್ಲಾ ಹೋಟ್ಲಿಗೂ ಹೋಗೇಳ್ತಿನಿ ಸಾರ್. ಒಂದಿಷ್ಟು ಕರೆನ್ಸಿ ಹಾಕಿ."


"ಥೂತ್ತೇರಿ !!!"

4⇦

ಗೂ ಮಠಕ್ಕೂ ಯಾವ ಸಂಬಂಧವೂ ಇಲ್ಲವೆಂಬ
ಹೇಳಿಕೆ ನೀಡಿದ್ದನೋ ಅದೇ ಸಂದೇಶನೇ ಸದರಿ
ಬ್ರಾಹ್ಮಣ ವೇದಿಕೆ ಖಾತೆಯ ಅಡ್ಮಿನ್ ಆಗಿದ್ದ.
ವಿಧಾನಸೌಧ ಪೊಲೀಸರಿಗೆ ಎಂಥಾ ಅಚ್ಚರಿ
ದರೆ ಸಂದೇಶ ತಲಕಾಲಕೊಪ್ಪನ ಹೆಸರಲ್ಲಿ ಪತ್ರಿಕಾ
ೆ ಹೊರಡಿಸಿದ್ದ ರಾಘು ಸ್ವಾಮಿಯೇ ಅದೇ ಹೆಸರಲ್ಲಿ
ಾಹ್ಮಣ ವೇದಿಕೆ ಎಂಬ ಖಾತೆ ತೆರೆದಿದ್ದ. ಅದರಲ್ಲಿ
ರು ಸದಸ್ಯರಿದ್ದಾರೆಂಬ ಮಾಹಿತಿಯೇನೋ ಇತ್ತಾದರೂ
ವಿರುದ್ಧ ಕಮೆಂಟ್ ಮಾಡಿದ ಬಹುತೇಕ
ಳೆಲ್ಲವೂ ರಾಘೂ ಸ್ವಾಮಿಯೇ ಬೇನಾಮಿಯಾಗಿ
ಭಿಸಿದ ಕಳ್ಳ ಖಾತೆಗಳಾಗಿದ್ದವು!
ಂಥಾ ಹೆಸರಿನ ವ್ಯಕ್ತಿಗಳೇ ಇರಲಿಲ್ಲ, ಉಗ್ರಪ್ಪ ವಿರುದ್ಧ
ಾಹ್ಮಣ ವೇದಿಕೆಯಲ್ಲಿ ವಾಚಾಮಗೋಚರ ಬೈದಿದ್ದ
ತೇಕ ಹೆಸರುಗಳೆಲ್ಲವೂ ರಾಘವೇಶ್ವರನೇ
ಮಿಯಾಗಿ ಹುಟ್ಟುಹಾಕಿದ ಕಳ್ಳ ಖಾತೆಗಳಾಗಿದ್ದವು.
ರಾಘೂ ಸ್ವಾಮಿಯ ಕಳ್ಳಾಟದ ಒಂದು
ಯಾಗಿದ್ದರೆ ಫೇಸ್‌ಬುಕ್‌ನಲ್ಲಿ ಇದನ್ನು ನೋಡಿದ
ಪ್ರಜ್ಞಾವಂತರಿಗೆ ಹೊಟ್ಟೆ ಸಂಕಟ ಶುರುವಾಗಿತ್ತು.
ಕ್ತಿ ಹರೀಶ್ ಆನುದಿ ಎಂಬುವವರು 'ತನ್ನನ್ನು
ಮಾಡಿದವರೆಲ್ಲರನ್ನೂ ಗುಂಡಿಟ್ಟು ಕೊಲ್ಲಿ' ಎಂಬಂತೆ
ಹೇಳುತ್ತಿರುವ ವ್ಯಂಗ್ಯಚಿತ್ರವೊಂದನ್ನು ಪೋಸ್ಟ್
ದ್ದಾರೆ. ಸತ್ಯಶೋಧಕ ಮಿತ್ರಮಂಡಳಿಯ ಶಾಂತಾರಾಮ್
ರವಿಕುಮಾರ್, ಗುಂಡೂರಾವ್, ಹರೀಶ್ ಆಮುದಿ
ತೆ ನೂರಕ್ಕೂ ಅಧಿಕ ಮಂದಿ ರಾಘವೇಶ್ವರನ ಈ
ದ ವಿರುದ್ಧ ಕಿಡಿಕಾರಿದ್ದಾರೆ.
ಗೆ ಟೀಕಿಸಿದವರ್‍ಯಾರೂ ಅಪ್ರಚೋದಕವಾಗಿ ಅಥವಾ
ಪೂರ್ವಕವಾಗಿ ಸ್ವಾಮಿಯ ವಿರುದ್ಧ ಕಿಡಿ ಕಾರಿರಲಿಲ್ಲ, ಉಗ್ರಪ್ಪ ವಿರುದ್ಧ ಕಳ್ಳಸ್ವಾಮಿ ಮಾಡುತ್ತಿದ್ದ ಷಡ್ಯಂತ್ರವನ್ನು ಕಂಡು ರೋಸತ್ತಿ ಪ್ರತಿಕ್ರಿಯಿಸಿದ್ದರು. ಹಾಗಂತ ತನ್ನ ಬಣ್ಣವೆಲ್ಲಿ ಬಯಲಾಗುತ್ತೋ ಎಂಬ ಅಳುಕಿಗೆ ಬಿದ್ದ ರಾಘೂ ಸ್ವಾಮಿ ನೇರವಾಗಿ ಉಗ್ರಪ್ಪನವರನ್ನೇ ಗುರಿ ಮಾಡಿ ತನ್ನ ಆಡಳಿತಾಧಿಕಾರಿ ಕೆ.ಜಿ. ಭಟ್ಟನ ಹೆಸರಲ್ಲಿ ಪೊಲೀಸ್ ಕಂಪ್ಲೇಂಟ್ ಕೊಡಿಸಿಬಿಟ್ಟ. ಸರ್ಕಾರದ ಮಹಿಳಾ ದೌರ್ಜನ್ಯ ನಿಯಂತ್ರಣ ಸಮಿತಿಯ ಅಧ್ಯಕ್ಷರಾಗಿ ತನ್ನ ಕರ್ತವ್ಯ ನಿರ್ವಹಿಸಿದ್ದೇ ಸ್ವಾಮಿಗೆ ಮಹಾಪರಾಧವಾಗಿತ್ತು. ಇದನ್ನು ಫೇಸ್‌ಬುಕ್‌ನಲ್ಲಿ ಗೇಲಿ ಮಾಡಿದರೆಂದು ಸತ್ಯಶೋಧಕ ಮಿತ್ರಮಂಡಳಿಯ ಶಾಂತಾರಾಮ ಹೆಗಡೆ, ರವಿಕುಮಾರ್, ಗುಂಡೂರಾವ್ ಮತ್ತು ಹರೀಶ್ ಆಮುದಿಯನ್ನೂ ಸೇರಿಸಿ ವಿಧಾನಸೌಧ ಪೊಲೀಸರಿಗೆ ದೂರು ನೀಡಲಾಯ್ತು. ಮಠದ ವತಿಯಿಂದ ಕೊಟ್ಟ ದೂರೇನೋ ದಾಖಲಾಗಬಹುದು. ಪತ್ರಿಕೆಗಳಲ್ಲದು ಸುದ್ದಿಯಾಗಲೂಬಹುದು. ಆದರೆ ಜನರೇನು ಮುಠ್ಠಾಳರೇ? ಖದೀಮ ಸ್ವಾಮಿಯ ಕಳ್ಳಾಟ ಹಾದುಹಾಗಲೇ ಸಾಬೀತಾಯಿತಲ್ಲವೇ? ಇಷ್ಟಾಗಿಯೂ ನಾಚಿಕೆ ಮಾನಮರ್‍ಯಾದೆ ಯಿಲ್ಲದ ಕೇಡಿ ಸ್ವಾಮಿಗೆ ಹೆಸರು ಬೇರೆ ಕೇಡು!

■ ರಾ. ಸೋಮನಾಥ್

ತನ್ನ ತಟ್ಟೆಯ ಹೆಗ್ಗಣ ಮರೆತು ಮತ್ತೊಬ್ಬರ ತಟ್ಟೆಯ ನೊಣ ಹುಡುಕುವ ಅವಿವೇಕಿ...!



ಶಾಂತಾರಾಮ ಹೆಗಡೆ ಹರೀಶ್ ಆನೂಡಿ

ಗೇಲಿಗೂ ಬೈಗುಳಕ್ಕೂ ಟೀಕೆಗೂ ಅವಾಚ್ಯಕ್ಕೂ ಇರುವ ವ್ಯತ್ಯಾಸ ಕೂಡ ರಾಘುವಿನ ಅತೀಬುದ್ಧಿಗೆ ಅರ್ಥವಾಗುತ್ತಿಲ್ಲ. ಅದರಲ್ಲೂ ಫೇಸ್‌ಬುಕ್ ಹೇಳಿಕೇಳಿ ಸಾಮಾಜಿಕ ವೇದಿಕೆ. ತನ್ನ ವಿರುದ್ಧ ದೂರು ಕೊಟ್ಟ ಪ್ರೇಮಲತಾ ಶಾಸ್ತ್ರಿ ಅವರ ಮಕ್ಕಳನ್ನೂ ಬಿಡದೆ ಅವರ ಬಗ್ಗೆ ಕೆಟ್ಟಾ ಕೊಳಕು ಬೈಗುಳವನ್ನು ತೇಲಿಬಿಟ್ಟು ರಾಘುಸ್ವಾಮಿ ತೇಜೋವಧೆಗೆಂದು ಇದೇ ಫೇಸ್‌ಬುಕ್ ಬಳಸಿಕೊಂಡ. ಆಗ ಅದು ತಾನು ಎಸಗಿದ ಅಪರಾಧವೆಂಬ ಸಣ್ಣಪ್ರಜ್ಞೆಯೂ ಈತನಿಗಿರಲಿಲ್ಲ. ಈತನ ದುರುಳ ಬೆಂಬಲಿಗರಿಗೂ ತಾವು ಮಾಡುತ್ತಿರುವುದರ ಕಾನೂನಿನ ಪರಿವೆಯಿರಲಿಲ್ಲ!

ಈಗ ಇದೇ ಫೇಸ್‌ಬುಕ್‌ನಲ್ಲಿ ತನ್ನ ವಿರುದ್ಧ ಟೀಕೆ ಮಾಡಿದರೆಂದು ಕೊಲೆ ಸಂಚು, ಮಾನಹಾನಿ ಇತ್ಯಾದಿ ಪ್ರಕರಣಗಳಡಿ ವಿಧಾನಸೌಧ ಪೊಲೀಸರಲ್ಲಿ ದೂರು ದಾಖಲಿಸಿದ್ದಾನೆ. ಅಷ್ಟಕ್ಕೂ ಈತನ ವಿರುದ್ಧ ಟೀಕೆ ಮಾಡಿದವರ್‍ಯಾರೂ ಅವಾಚ್ಯವಾಗಿ ಬೈದಿಲ್ಲ, ಈತನ ಹಾಗೆ ಭಕ್ತರನ್ನು ಛೂಬಿಟ್ಟು 'ಗುಂಡಿಟ್ಟು ಕೊಲ್ಲಿ....' ಎಂಬಂಥ ಹತ್ಯಾ ಪ್ರಚೋದನೆ ಮಾಡಿಲ್ಲ, ಉಗ್ರಪ್ಪ ತಮ್ಮ ಕರ್ತವ್ಯ ಸಹಜ ಕ್ರಮ ಜರುಗಿಸಿದ್ದು ಒತ್ತಟ್ಟಿಗಿರಲಿ, ಹರೀಶ್ ಆನೂಡಿ, ಶಾಂತಾರಾಮ ಹೆಗಡೆ, ಗುಂಡೂರಾವ್, ರವಿಕುಮಾರ್ ಇವರ್‍ಯಾರೂ ಸಜ್ಜನಿಕೆಯನ್ನು ಮೀರಿ ಟೀಕಿಸಿಲ್ಲ.


ಈ ಪೈಕಿ ರವಿಕುಮಾರ್ ಕುರುಬರ ಸಂಘದ ಪದಾಧಿಕಾರಿ ಮತ್ತು ಸಾಮಾಜಿಕವಾಗಿ ಹೊಣೆಯರಿತ ವ್ಯಕ್ತಿ. ಹರೀಶ್ ಆನೂಡಿ ಫೇಸ್‌ಬುಕ್‌ನಲ್ಲಿ ಸಕ್ರಿಯವಾಗಿದ್ದು ದಲಿತರ ಶೋಷಣೆ, ಮೌಢ್ಯ, ಕೋಮುವಾದ, ಧರ್ಮಾಂಧತೆ ಮತ್ತು ಭ್ರಷ್ಟಾಚಾರದ ವಿರುದ್ಧ ತಮ್ಮದೇ ರೀತಿಯಲ್ಲಿ ಹೋರಾಡುತ್ತ ಬಂದವರು. ಹಾಗೇ ಶಾಂತಾರಾಮ ಹೆಗಡೆ ತನ್ನ ಜಾತಿಯನ್ನೂ ಮೀರಿ ಖದೀಮ ಸ್ವಾಮಿಯ ಅನಾಚಾರವನ್ನು ಖಂಡಿಸುತ್ತಲೇ ಬಂದವರು.

ಇದೇ ಫೇಸ್‌ಬುಕ್ ಮತ್ತು ವಾಟ್ಸಪ್ ಬಳಸಿಕೊಂಡು ಖದೀಮ ಸಗಣಿ ಸ್ವಾಮಿ ಮಾಡಿದ ಬ್ಲ್ಯಾಕ್‌ಮೇಲ್, ತೇಜೋವಧೆ, ಸಾಮಾಜಿಕ ವ್ಯಭಿಚಾರಕ್ಕೆ ಹೋಲಿಸಿದರೆ ಹರೀಶ್ ಆನೂಡಿ, ಶಾಂತಾರಾಮ, ರವಿಕುಮಾರ್ ಮಾಡಿದ ಟೀಕೆಗಳು ಏನೇನೂ ಅಲ್ಲ. ಯಾರೇ ಜವಾಬ್ದಾರಿಯುತ ನಾಗರಿಕನೊಬ್ಬ ಸಮಾಜದ ಅನ್ಯಾಯ, ಅನಿಷ್ಟದ ವಿರುದ್ಧ ತನ್ನ ಕರ್ತವ್ಯ ಮತ್ತು ಮನುಷ್ಯ ಸಹಜ ಹೊಣೆಗಾರಿಕೆಯ ಕಾರಣಕ್ಕೆ ನೀಡುವ ಪ್ರತಿಕ್ರಿಯೆ ಸಹಜವಾಗೇ ಆರೋಗ್ಯಕರವಾಗಿರುತ್ತದೆ ಮತ್ತು ನ್ಯಾಯಪ್ರೇರಿತವಾಗಿರುತ್ತದೆ.

ಯಾರದೋ ಹೆಣ್ಣುಮಕ್ಕಳು ರೆಸ್ಟೋರೆಂಟಿನಲ್ಲಿ ಮಾಡಿದ ಪಾರ್ಟಿಯನ್ನೇ ಮಹಾಪಾಪವೆಂದು ಕತೆ ಕಟ್ಟಿ ಫೇಸ್‌ಬುಕ್ಕಿಗೆ ಹಾಕಿಸಿದ ಕೇಡಿ ರಾಘವೇಶ್ವರನ ದುರ್ಬುದ್ಧಿಯನ್ನು, ದುರಾಚಾರವನ್ನು ಖಂಡಿಸುವುದೇ ಅಪರಾಧವೆಂದಾದಲ್ಲಿ ಕರ್ನಾಟಕದ ಲಕ್ಷೋಪಲಕ್ಷ ಪ್ರಜ್ಞಾವಂತರನ್ನು ಪೊಲೀಸರು ಬಂಧಿಸಿ ಜೈಲಿಗೆ ದಬ್ಬಬೇಕಾದೀತು.

ತನ್ನ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದ್ದರೂ ಮತ್ತೊಬ್ಬರ ತಟ್ಟೆಯಲ್ಲಿ ನೊಣ ಹುಡುಕ ಹೊರಟ ಖದೀಮ ರಾಘೂನ ಅಲ್ಪಬುದ್ಧಿಗೆ ಏನೆನ್ನಬೇಕೋ....?

ದಿಡ್ಡಳ್ಳಿಯ ಬಡವರು ಮತ್ತು ನೀಲಂಬೂರು ತೋಟದ ಸಾಹುಕಾರರು



ದೀಕ್ಷಿತ್

ಕೊಡಗು ಜಿಲ್ಲೆಯ ಉಸ್ತುವಾರಿ ಸಚಿವ ಸ್ಥಾನಕ್ಕೆ ಎಂ.ಆರ್. ಸೀತಾರಾಮ್ ಅನರ್ಹ ವ್ಯಕ್ತಿ ಎಂಬುದನ್ನು ಅವರು ಮತ್ತೊಮ್ಮೆ ಸಾಬೀತುಮಾಡಿಕೊಂಡಿದ್ದಾರೆ. ದಿಡ್ಡಳ್ಳಿಗೆ ಸಂಬಂಧಪಟ್ಟಂತೆ ಸೀತಾರಾಮ್ ಅತ್ಯಂತ ಬೇಜವಾಬ್ದಾರಿತನದಿಂದ ಮಾತನಾಡಿದ್ದಾರೆ. ಅಲ್ಲಿರುವ ಆದಿವಾಸಿಗಳನ್ನು ನುಸುಳುಕೋರರು ಹಾಗೂ ಹೊರಗಿನವರು ಎಂದು ಹೇಳುವ ಮೂಲಕ ತಾನು ಕಾಂಗ್ರೆಸ್ ಸರಕಾರದ ಒಂದು ಭಾಗ ಎಂಬುದನ್ನು ಸೀತಾರಾಮ್ ಮರೆತಿದ್ದಾರೆ ಎನ್ನುವುದರಲ್ಲಿ ಸಂಶಯವಿಲ್ಲ.

ಆಗಸ್ಟ್ ತಿಂಗಳಿನಲ್ಲಿ ಕೊಡಗಿನ ಬೇರೆ ಬೇರೆ ಭಾಗದಿಂದ ಮತ್ತು ಅಲ್ಲಿಯೇ ನೆಲೆನಿಂತಿದ್ದಂತಹ ಕೆಲವು ಮಂದಿ ಗುಡಿಸಲುಗಳನ್ನು ಕಟ್ಟಿಕೊಂಡು ದಿಡ್ಡಳ್ಳಿಯಲ್ಲಿ ನೆಲೆ ನಿಂತರು. ಒಟ್ಟು 577 ಕುಟುಂಬಗಳು ಅಲ್ಲಿ ಗರಿಷ್ಠ 40 ಎಕ್ರೆ ಪ್ರದೇಶದಲ್ಲಿ ನೆಲೆ ನಿಂತಿದ್ದರು. ಕೊಡಗು ಜಿಲ್ಲಾಡಳಿತ ಈ ಎಲ್ಲಾ 577 ಕುಟುಂಬಗಳು ಕೊಡಗಿನ ಆದಿವಾಸಿಗಳೇ ಎಂಬುದನ್ನು ಖಚಿತಪಡಿಸಿತ್ತು ಮತ್ತು ಅವರೆಲ್ಲರಿಗೂ ಮೂಲ ಸೌಕರ್ಯಗಳನ್ನು ಒದಗಿಸಲು ಕೊಡಗಿಗೆ ಆಗಮಿಸಿದ್ದ ಸಮಾಜ ಕಲ್ಯಾಣ ಸಚಿವ ಆಂಜನೇಯರವರು ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದರು. ಆದಿವಾಸಿಗಳ ಸಂಕಷ್ಟಗಳನ್ನು ಅರಿತಿರುವ ಆಂಜನೇಯರವರಿಗೂ, ಸೀತಾರಾಮ್‌ರವರಿಗೂ ಇರುವ ವ್ಯತ್ಯಾಸ ಇದು. ಈಗ ಸೀತಾರಾಮ್ ಮೊದಲು ಇಲ್ಲಿ 199 ಕುಟುಂಬಗಳು ಮಾತ್ರ ಇದ್ದವು, ಉಳಿದವರು ನುಸುಳುಕೋರರು, ಅಸಲಿ ಆದಿವಾಸಿಗಳಿಗೆ ಮಾತ್ರ ವಸತಿ ಎನ್ನುವ ಮಾತುಗಳನ್ನು ಆಡಿದ್ದಾರೆ.

ಕಾಂಗ್ರೆಸ್ ಸರಕಾರ ಬಡವರಿಗೆ ಸೂರು ಒದಗಿಸುವ ಮಾತುಗಳನ್ನು ಆಡುತ್ತಿದೆ. ಸೀತಾರಾಮ್‌ರವರು ಇದಕ್ಕೆ ವ್ಯತಿರಿಕ್ತವಾಗಿ ಮಾತನಾಡುತ್ತಿದ್ದಾರೆ. ಯಾಕೆಂದರೆ ಅವರು ಸಮಸ್ಯೆಗಳನ್ನು ಅರಿಯುವ ಕಾರ್ಯವನ್ನೇ ಮಾಡುತ್ತಿಲ್ಲ, ಮಾತ್ರವಲ್ಲ, ಅವರು ಉಡಾಫೆತನದಿಂದ ವರ್ತಿಸುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ. ಇಲ್ಲೊಂದು ಶಾಲೆ, ಕೊಳವೆ ಬಾವಿ, ಆಸ್ಪತ್ರೆ, ಕಾಂಕ್ರೀಟ್ ರಸ್ತೆ ಇವೆಲ್ಲಾ ಏತಕ್ಕಾಗಿ ಮಾಡಲಾಯಿತು ಎಂಬುದನ್ನು ಉಸ್ತುವಾರಿ ಸಚಿವರು ಚಿಂತಿಸಬೇಕಲ್ಲವೇ?

ಉಸ್ತುವಾರಿ ಸಚಿವರು ಅರಣ್ಯ ಇಲಾಖೆಯ ಮತ್ತು ಕೆಲವು ಸ್ಥಾಪಿತ ಹಿತಾಸಕ್ತಿಗಳ ಆಣತಿಯಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಅರಣ್ಯ ಇಲಾಖೆ ಬಡವರ ವಿರುದ್ಧ ಇದೆಯೇ ವಿನಹ, ಶ್ರೀಮಂತರ ವಿರುದ್ಧ ಇಲ್ಲ. ಶ್ರೀಮಂತ ವರ್ಗದವರು ಎಂತಹ ಅಕ್ರಮಗಳನ್ನು ಮಾಡಿದರೂ ಅವರ ಬೆನ್ನಿಗೆ ನಿಲ್ಲುತ್ತಾರೆ ಎನ್ನುವುದಕ್ಕೆ ಹಲವಾರು ಸಾಕ್ಷಿಗಳು ಇವೆ. ಕೊಡಗಿನ ರಬ್ಬರ್ ತೋಟಗಳ ಕರ್ಮಕಾಂಡದ ಒಂದು ಝಲಕ್ ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಮೀಸಲು ಅರಣ್ಯ ಅಲ್ಲ ಎಂದ ಅರಣ್ಯಾಧಿಕಾರಿ

ದಿಡ್ಡಳ್ಳಿಯ ಪ್ರದೇಶ ದಾಖಲೆಯಲ್ಲಿ ಅರಣ್ಯ ಪೈಸಾರಿ ಎಂದು ಇದೆ. ಈ ನಿಬಂಧನೆಯೇ ವಿವಾದಾಸ್ಪದವಾಗಿದೆ. ಇಲ್ಲಿ 577 ಕುಟುಂಬಗಳು 40 ಎಕ್ರೆ ಪ್ರದೇಶದಲ್ಲಿ ನೆಲೆ ನಿಂತಿದೆ. ಇದು ಅರಣ್ಯ ಇಲಾಖೆಯವರ ಕೆಂಗಣ್ಣಿಗೆ ಗುರಿಯಾಗಿದೆ. ಆದರೆ 713.13 ಎಕ್ರೆ ಪ್ರದೇಶ ಕೊಡಗಿನ ಸಂಪಾಜೆ ಭಾಗದಲ್ಲಿ ನೀಲಂಬೂರು ರಬ್ಬರ್ ತೋಟದ ಹೆಸರಿನಲ್ಲಿ ಇದೆ. ಈ ಜಮೀನು ಮೀಸಲು ಅರಣ್ಯವಾಗಿತ್ತು ಮತ್ತು 2013ರವರೆಗೂ ಈ ಜಮೀನನ್ನು ಮೀಸಲು ಅರಣ್ಯವೆಂದೇ ಅರಣ್ಯ ಇಲಾಖೆ ಹೇಳಿಕೊಂಡು ಬಂದಿತ್ತು. ಈ ಮೀಸಲು ಅರಣ್ಯವನ್ನು ಗುತ್ತಿಗೆಗೆ ಬ್ರಿಟಿಷ್ ಸರಕಾರ 1908ರಿಂದ 1911ರ ವೇಳೆಗೆ ನೀಡಿತ್ತು, ಇದಕ್ಕೆ ಆಗಿನ ಸರಕಾರವು ಗುತ್ತಿಗೆ ದರವನ್ನು ಕೂಡ ನಿಗದಿಪಡಿಸಿತ್ತು.

ಗುತ್ತಿಗೆ ಪಡೆದವರು ಗುತ್ತಿಗೆ ದರವನ್ನು ಇಲ್ಲಿಯವರೆಗೂ ಪಾವತಿಸಿರಲಿಲ್ಲ, ಜೊತೆಗೆ ಸಾಕಷ್ಟು ನಿರ್ಬಂಧಗಳನ್ನು ಗುತ್ತಿಗೆ ಪಡೆದವರು ಮುರಿದಿದ್ದ ಕಾರಣ ಅವರಿಗೆ ಗುತ್ತಿಗೆಯನ್ನು ಮುಂದುವರೆಸುವಂತೆ ಇರಲಿಲ್ಲ. ಗುತ್ತಿಗೆ 999 ವರ್ಷಕ್ಕೋ ಅಥವ 99 ವರ್ಷಕ್ಕೋ ಎಂಬ ವಿವಾದದ ನಡುವೆ ಕರ್ನಾಟಕ ರಾಜ್ಯ ಸರಕಾರವು 19-12-2012ರಲ್ಲಿ ಗುತ್ತಿಗೆಯು 99 ವರ್ಷಕ್ಕೆ ಎಂಬ ನಿರ್ಣಯವನ್ನು ಸಂಪುಟ ಸಭೆಯಲ್ಲಿ ತೆಗೆದುಕೊಂಡಿತ್ತಲ್ಲದೆ, ಅಂದಿನಿಂದಲೇ ಅದನ್ನು ವಶಕ್ಕೆ ತೆಗೆದುಕೊಳ್ಳುವಂತೆ ಸೂಚಿಸಿತ್ತು. ಅರಣ್ಯ ಇಲಾಖೆ 2015ರಲ್ಲಿಯೇ ಆ ಜಮೀನನ್ನು ವಶಕ್ಕೆ ಪಡೆದುಕೊಂಡಿದೆ ಎಂಬ ಅಧಿಸೂಚನೆಯನ್ನು ಹೊರಡಿಸಿತ್ತು.

ಈ ಅಧಿಸೂಚನೆ ಹೊರಡಿಸುವಾಗ ಅಂದರೆ 14-3-2015ರಲ್ಲಿ ಈ ರಬ್ಬರ್ ತೋಟವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂಬ ಆದೇಶ ಹೊರಡಿಸಿದ ನಂತರ, ರಬ್ಬರ್ ತೋಟದವರು ಅಲ್ಲಿಯವರೆಗೆ ಪಾವತಿಸಬೇಕಾಗಿದ್ದ 130 ಕೋಟಿ 22 ಲಕ್ಷದ 16 ಸಾವಿರದ 277 ರೂಪಾಯಿಗಳನ್ನು ಕೂಡಲೇ ಪಾವತಿಸುವಂತೆ ಆದೇಶಿಸಿತ್ತು. ಈ ಮೊತ್ತ ಇಲಾಖೆಯು ಗುತ್ತಿಗೆ ನೀಡಿದ ಮೊದಲ ದಿನದಿಂದ 14-3-2015ರವರೆಗಿನ ಮೊತ್ತವಾಗಿತ್ತು. ಈ ಆದೇಶದಲ್ಲಿ ನೀಲಂಬೂರು ರಬ್ಬರ್ ತೋಟದವರು ತಮ್ಮ ವಶದಲ್ಲಿರುವ ತೋಟವನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸದಿದ್ದಲ್ಲಿ, ಪ್ರತಿ ದಿನ 6 ಲಕ್ಷದ 42 ಸಾವಿರದ 188 ರೂಪಾಯಿ ಪಾವತಿಸಬೇಕು ಎಂದು ಆದೇಶಿಸಿತ್ತು.

ಅರಣ್ಯ ಇಲಾಖೆಯ ಈ ಆದೇಶದ ವಿರುದ್ಧ ನೀಲಂಬೂರು ರಬ್ಬರ್ ತೋಟದವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯೊಂದನ್ನು ಸಲ್ಲಿಸಿದ್ದರು. 30-9-2015ರಲ್ಲಿ ರಾಜ್ಯ ಉಚ್ಚ ನ್ಯಾಯಾಲಯವು



ಮನೋಜ್ ಕುಮಾರ್

ನೀಲಂಬೂರು ರಬ್ಬರ್ ತೋಟದವರು ಈ ಮೊತ್ತ[...] ಠೇವಣಿಯಾಗಿ ಇಡಬೇಕು ಮತ್ತು ನ್ಯಾಯಾಲಯದ ಅಂತಿ[...] ಆದೇಶ ಬರುವವರೆಗೂ ಠೇವಣಿಯಾಗಿಯೇ ಇಡಬೇ[...] ಎಂದು ಹೇಳಿತ್ತು, ಆದರೆ ರಬ್ಬರ್ ತೋಟದ ಮಾಲಿ[...] ನ್ಯಾಯಾಲಯದ ಈ ಆದೇಶವನ್ನು ಪಾಲಿಸಲಿಲ್ಲ.

ರಾಜ್ಯ ಸರಕಾರ ಸಂಪುಟ ತೀರ್ಮಾನದಲ್ಲಿ ಗು[...] ಅವಧಿ ಮುಗಿದಿರುವುದು ಮತ್ತು ಎಲ್ಲಾ ರಬ್ಬರ್ ತೋಟ[...] ನಿಬಂಧನೆಗಳು ಹೇಗೇ ಇರಲಿ, ಅವುಗಳನ್ನು ಮೀಸ[...] ಅರಣ್ಯ ಎಂದು ಪರಿಗಣಿಸಬೇಕು ಎಂದು ತೀರ್ಮಾನಿಸಿ[...] ಈ ನಡುವೆ 25-3-2013ರಲ್ಲಿ ಉಚ್ಚ ನ್ಯಾಯಾಲ[...] ಈ ರಬ್ಬರ್ ತೋಟದ ನಿಬಂಧನೆ ಮೀಸಲು ಅರಣ್ಯ[...] ಅಲ್ಲವೋ ಎಂಬುದನ್ನು ಪುನರ್ ಪರಿಶೀ[...] ನ್ಯಾಯಾಲಯಕ್ಕೆ ವರದಿ ನೀಡಬೇಕು ಎಂದು ಸೂಚಿಸಿ[...]

⇨ 0[...]

ಸುಳ್ಯದಲ್ಲಿ ಒಂದು ಅಪರೂಪದ ಕಾರ್ಯಕ್ರಮ

ತೀರಾ ಅಪರೂಪಕ್ಕೆ ಇಂತಹ ಒಂದು ಕಾರ್ಯಕ್ರಮ ಪರಿಸರದ ಮಡಿಲಿನಲ್ಲಿ ನಡೆಯುತ್ತದೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲೆ ಸಂಘ ಪರಿವಾರದ ಕಪಿಮುಷ್ಠಿಯೊಳಗೆ ಇದ್ದು, ಅವರ ಚಟುವಟಿಕೆಗಳನ್ನು ಬಯಲಿಗೆಳೆಯುವ, ಸದೆಬಡಿಯುವ ಕಾರ್ಯ ಈ ಎರಡೂ ಜಿಲ್ಲೆಗಳಲ್ಲಿ ಸಣ್ಣ ತಂಡಗಳಿಂದ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಸುಳ್ಯದ ಪರಿಸರದಲ್ಲಿ ಕೆಲ ಯುವ ಹಾಗೂ ಪ್ರಜ್ಞಾವಂತ ಚಿಂತಕರು ಉತ್ತಮ ಕಾರ್ಯಕ್ರಮಗಳನ್ನು ನಡೆಸುತ್ತಲೇ ಇದ್ದಾರೆ. ಸಾಮಾಜಿಕ ಪರಿವರ್ತನೆಗೆ ಮುನ್ನುಡಿ ಬರೆಯುವ ಕಾರ್ಯವನ್ನು ಈ ತಂಡ ಸದ್ದಿಲ್ಲದೆ ಮಾಡುತ್ತಿದೆ.

ಇವುಗಳ ಮಧ್ಯೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದಲ್ಲಿ ಎ.ಕೆ. ಹಿಮಕರ ಅವರು ತಮ್ಮ ಕನಸಿನ ಬಂಟಮಲೆ ಅಕಾಡೆಮಿಯೊಂದನ್ನು ಸ್ಥಾಪಿಸಿದ್ದಾರೆ. ಇದನ್ನು ಕಲೆ, ಸಾಹಿತ್ಯ ಸಂಸ್ಕೃತಿ ಮತ್ತು ವಿಜ್ಞಾನ ಕ್ಷೇತ್ರಗಳಿಗೆ ಅಧ್ಯಯನ ಕೇಂದ್ರವಾಗಿ ನಡೆಸುವ ಉದ್ದೇಶವನ್ನು ಅವರು ಇಟ್ಟುಕೊಂಡಿದ್ದಾರೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಲೋಹಿಯಾ, ನಾರಾಯಣ ಗುರು, ಪೆರಿಯಾರ್, ಕುವೆಂಪು ಮೊದಲಾದ ದಾರ್ಶನಿಕರ ವಿಚಾರಧಾರೆ ಮತ್ತು ಆದರ್ಶಗಳನ್ನು ಮಾದರಿಯೆಂದು ಹಿಮಕರ ಪರಿಗಣಿಸಿದ್ದು, ಇದಕ್ಕಾಗಿ ಬಂಟಮಲೆ ತಪ್ಪಲಿನಲ್ಲಿ 'ಕಾಡಿನ ಶಾಲೆ'ಯನ್ನು ಕೇಂದ್ರವಾಗಿಸಿ ಚಟುವಟಿಕೆಯನ್ನು ಆರಂಭಿಸಿದ್ದಾರೆ.

ಈ ಸಂಸ್ಥೆ 'ಕುವೆಂಪು ಬಂಟಮಲೆ ಪ್ರಶಸ್ತಿ'ಯೊಂದನ್ನು ಶೋಷಿತರ ಪರವಾಗಿ ಮಿಡಿಯಬಲ್ಲ ಹೃದಯವನ್ನು ಗುರುತಿಸಿ ಅವರನ್ನು ಗೌರವಿಸುವ ಒಂದು ಕಾರ್ಯವನ್ನು ಆರಂಭಿಸಿದೆ. ಕುವೆಂಪುರವರು ಪ್ರತಿಪಾದಿಸಿದ ಸಮಸಮಾಜ, ಮೌಢ್ಯಗಳ ವಿರುದ್ಧದ ವೈಜ್ಞಾನಿಕ ದೃಷ್ಟಿಕೋನ, ಜಾತಿಧರ್ಮಗಳ ಬಲೆಯಾಚೆಗಿನ ಸ್ವಾತಂತ್ರ್ಯದ ಸಾಮಾಜಿಕ ಬದುಕು, ವರ್ಗ, ಜಾತಿ, ಭಾಷೆ, ಧರ್ಮಗಳ ಮೇಲುಕೀಳುಗಳನ್ನು ಧಿಕ್ಕರಿಸುವ ಸಾಮಾಜಿಕ ನಿಷ್ಠೆ ಹೊಂದಿರುವ ವ್ಯಕ್ತಿಯನ್ನು ಗುರುತಿಸಿ ಅವರಿಗೆ ಈ ಪ್ರಶಸ್ತಿಯನ್ನು ನೀಡುವ ಕಾರ್ಯವನ್ನು ಕುವೆಂಪುರವರ ಜನ್ಮ ದಿನದಂದು ಅಂದರೆ ಡಿಸೆಂಬರ್ 29ರಂದು ನಡೆಸಲು ಉದ್ದೇಶಿಸಿದ್ದಾರೆ.

ಈ ಪ್ರಶಸ್ತಿಗೆ ಅರ್ಹ ವ್ಯಕ್ತಿಯನ್ನು ಆಯ್ಕೆಮಾಡುವ ಕಾರ್ಯಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಡಾ। ಮುಜಾಫರ್ ಅಸಾದಿ, ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಡಾ। ಟಿ.ಪಿ. ವಿಜಯ್ ಹಾಗೂ ಬೆಳ್ತಂಗಡಿ ಸರಕಾರಿ ಕಾಲೇಜಿನ ಉಪನ್ಯಾಸಕ ಟಿ.ಪಿ. ಆಂಟನಿಯವರನ್ನೊಳಗೊಂಡ ತಜ್ಞರ ಸಮಿತಿಯೊಂದನ್ನು ರಚಿಸಲಾಗಿದ್ದು, ಅವರು ಆಯ್ಕೆ ಮಾಡುವ ವ್ಯಕ್ತಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ.



ಮೊದಲ ಬಾರಿಯ ಈ ಪ್ರಶಸ್ತಿಯನ್ನು ಕರ್ನಾಟಕ ರಾಜ್ಯದ ಹಿರಿಯ ಚಿಂತಕರಾದ ಎ.ಕೆ. ಸುಬ್ಬಯ್ಯರವರಿಗೆ ನೀಡಿ ಗೌರವಿಸಲಾಗಿದೆ.

ಕಾರ್ಯಕ್ರಮ ಎಷ್ಟೊಂದು ಅರ್ಥಪೂರ್ಣವಾಗಿತ್ತು ಎಂದರೆ ಯಾವುದು ದೊಡ್ಡದು, ಯಾವುದು ಚಿಕ್ಕದು, ಯಾರು ದೊಡ್ಡವರು, ಯಾರು ಸಣ್ಣವರು ಎಂದು ಬಣ್ಣಿಸಲು ಸಾಧ್ಯವಾಗದ ರೀತಿಯಲ್ಲಿ ಇತ್ತು, ಸುಬ್ಬಯ್ಯನವರಿಂದ ಪ್ರಶಸ್ತಿಗೆ ಗೌರವ ಬಂತೋ ಅಥವ ಸುಬ್ಬಯ್ಯನವರಿಗೆ ಪ್ರಶಸ್ತಿಯಿಂದ ಗೌರವ ಬಂತೋ ಅಥವ ಪ್ರಶಸ್ತಿ ಪ್ರದಾನ ಮಾಡಿದ ನಿಡುಮಾಮಿಡಿ ಮಠದ ಶ್ರೀ ವೀರಭದ್ರಚನ್ನಮಲ್ಲಸ್ವಾಮಿ ಹಾಗೂ ಅಭಿನಂದನಾ ನುಡಿಗಳನ್ನು ಆಡಿದ ಡಾ. ಕಾಳೇಗೌಡ ನಾಗವಾರ ಮತ್ತು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶಿಕ್ಷಣ ತಜ್ಞ ಡಾ. ಸುಕುಮಾರಗೌಡರಿಂದ ಗೌರವ ಬಂತೋ ಎನ್ನುವಂತೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಡಾ. ಸುಕುಮಾರಗೌಡ ಶಿಕ್ಷಣ ತಜ್ಞ ಎನ್ನುವುದರಲ್ಲಿ ಎರಡು ಮಾತಿಲ್ಲ. ಅವರು ಹಾಲಿ ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರಬೇಕು ಎಂದು ಬಯಸುತ್ತಿರುವವರು. ಇದಕ್ಕಾಗಿ ಸಾಕಷ್ಟು ಯತ್ನಗಳನ್ನು ನಡೆಸಿದ್ದರೂ, ಸರಕಾರದ ಮಟ್ಟದಲ್ಲಿ ಯಶಸ್ಸು ಕಾಣದ ವ್ಯಕ್ತಿ. ಪ್ರತಿಯೊಬ್ಬರೂ ಚರ್ಚೆ ಮತ್ತು ವಿಚಾರಗಳ ಮಂಡನೆಯ ಮೂಲಕ ತಮ್ಮ ಜ್ಞಾನಭಂಡಾರವನ್ನು ತುಂಬಿಸಿಕೊಳ್ಳಬೇಕು ಎಂದು ಬಯಸುವವರು.

ಡಾ. ಕಾಳೇಗೌಡ ನಾಗವಾರರವರು ನಾಡಿನ ಪ್ರಮುಖ ಚಿಂತಕರಲ್ಲೊಬ್ಬರು. ಬಸವಣ್ಣ ಸಾರ್ವಕಾಲಿಕ ವ್ಯಕ್ತಿ ಎಂದು ಹೇಳಿದ ಅವರು, ಸುಬ್ಬಯ್ಯನವರು ವೈಚಾರಿಕತೆಯ ತಾರಕಕ್ಕೆ ಏರಿದ್ದಾರೆ ಹಾಗೂ ಪ್ರತಿ ಜಿಲ್ಲೆಯಲ್ಲಿಯೂ ಸುಬ್ಬಯ್ಯನವರಂತಹ ವ್ಯಕ್ತಿ ಇದ್ದರೆ ಖಂಡಿತವಾಗಿಯೂ ಅಂತಹ ಜಿಲ್ಲೆಗಳು ಸುಭಿಕ್ಷವಾಗಿ ಇರಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ಮಾನವೀಯತೆಯ ಹರಿಕಾರರು ಕರ್ನಾಟಕದಲ್ಲಿ ಇದ್ದರು ಎಂದು ಹೇಳಿದ ಅವರು, ನಿಸ್ವಾರ್ಥಕ ವಾತಾವರಣದಲ್ಲಿ ಒಳ್ಳೆಯ ಕೆಲಸವನ್ನು ಮಾಡಬೇಕಾಗಿರುವುದು ಕ[...] ಎಂದು ಅಭಿಪ್ರಾಯಪಟ್ಟರು.

ನಿಡುಮಾಮಿಡಿ ಮಠದ ಶ್ರೀ ವೀರಭದ್ರ ಚನ್ನ[...] ಸ್ವಾಮೀಜಿಯವರು ದೈವ ಐತಿಹಾಸಿಕ ವ್ಯಕ್ತಿಗಳು ಎಂಬು[...] ಪ್ರತಿಪಾದಿಸಿದರಲ್ಲದೆ, ಪ್ರತಿಯೊಂದು ಜನಾಂಗವೂ ದೈವ[...] ಪೂಜಿಸುವ ಮೂಲಕ ವೈದಿಕ ಮೌಲ್ಯಗಳನ್ನು ಒಪ್ಪಿಕೊಂ[...] ಅವೈದಿಕ ತತ್ವಗಳನ್ನು ಹುಸಿ ಮಾಡಿದರು ಎಂ[...] ಅಭಿಪ್ರಾಯಪಟ್ಟರು. ಕುವೆಂಪು ಎಲ್ಲಾ ಚಳವಳಿಗೆ ಮ[...] ಪುರುಷರಾಗಿದ್ದರು ಎಂದ ಅವರು, ಅವರ ಹೆಸರಿನ ಪ್ರ[...] ಧೀಮಂತ ಹೋರಾಟದ ಸಂಕೇತವಾದ ಸುಬ್ಬಯ್ಯ [...] ಅರ್ಹ ವ್ಯಕ್ತಿ ಎಂದು ಹೇಳಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಎ.ಕೆ. ಸುಬ್[...] ಮೌಢ್ಯ ಮುಕ್ತ ಭಾರತ ಆಗಬೇಕು ಎಂದರಲ್ಲದೆ, ನ[...] ಎಲ್ಲದಕ್ಕೂ ಅಡಿಪಾಯವೇ ಮೌಢ್ಯವಾಗಿದೆ. ಭ್ರಷ್ಟಾ[...] ಹಾಗೂ ಕೋಮುವಾದ ಎರಡೂ ಕೂಡ ಮೌಢ್ಯದಿಂ[...] ಬೆಳೆಯುತ್ತಿದೆ ಹಾಗೂ ಇತ್ತೀಚಿನ ದಿನಗಳಲ್ಲಿ ಮ[...] ಮೂಲಕ ಸಮಾಜವನ್ನು ಕಟ್ಟಿ ಹಾಕುವ ಕೆಲಸವಾಗು[...] ಇದನ್ನು ಹೋಗಲಾಡಿಸಬೇಕಾದರೆ ಮೌಢ್ಯ ಹೋಗಬೇ[...] ನಂಬಿಕೆಗಳನ್ನು ಪ್ರಶ್ನಿಸಬಾರದು ಎಂದು ಹೇಳುವ[...] ಪ್ರಶ್ನೆಗಳಿಗೆ ಉತ್ತರ ಇಲ್ಲದವರು ಮಾತ್ರ. ಅವರು ಉತ್ತ[...] ಅವರ ಟೊಳ್ಳುತನ ಬಯಲಾಗುತ್ತದೆ ಎಂದ ಸುಬ್[...] ದೇವರು ಎನ್ನುವುದು ಕಲ್ಪನೆ, ವಿಚಾರ ಮಾಡುವ[...] ವೈಚಾರಿಕತೆ ಎಂದು ಹೇಳಿದರು.


ಬೆಂಗಳೂರಿನ ಖ್ಯಾತ ಕಲಾವಿದ ಜಾನ್ ದೇವ[...] ರವರ ಅಪರೂಪದ ಸಂಗೀತ ಗೋಷ್ಠಿ ಈ ಕಾರ್ಯಕ್ರ[...] ಮೆರುಗನ್ನು ಹೆಚ್ಚಿಸಿತ್ತು. ಕಾಡಿನ ಮಧ್ಯೆ ಸ್ಥಾಪಿಸಲಾಗಿ[...] ಬಂಟಮಲೆ ಅಕಾಡೆಮಿ ಒಂದು ವಿಶಿಷ್ಟವಾದ ಕಾರ್ಯ[...] ಮುನ್ನುಡಿ ಬರೆದಿತ್ತು. ಈ ಕಾರ್ಯಕ್ರಮ ಎಷ್ಟೊ[...] ವಿಭಿನ್ನವಾಗಿತ್ತು ಎಂದರೆ, ಅತಿಥಿಗಳಿಗೆ ವೀಳ್ಯ[...] ಅಡಿಕೆಯನ್ನು ನೀಡಿ ಸ್ವಾಗತಿಸ ಲಾಗಿತ್ತು. ಕೊನೆ[...] ನೆನಪಿನ ಕಾಣಿಕೆಯಾಗಿ ಸುಬ್ಬಯ್ಯನವರಿಗೆ ಕೋವಿಯೊಂ[...] ನೀಡಲಾಯಿತು. ಇಷ್ಟೊಂದು ವಿಭಿನ್ನವಾದ ಚಿಂ[...] ಕಾರ್ಯಕ್ರಮ ಇದಾಗಿತ್ತು.

ಮೈಸೂರು: ಮಹದೇವ್ ಪ್ರಸಾದ್ ಉಳಿಸಿಹೋದ ಕೊರಗು!


ತ್ತೀಚೆಗಷ್ಟೆ ನಿಧನರಾದ ಸಹಕಾರ ಮತ್ತು ಸಕ್ಕರೆ ಎಚ್.ಎಸ್.ಮಹದೇವ ಪ್ರಸಾದ್ ಇದ್ದುದರಲ್ಲಿ ವಿತ ರಾಜಕಾರಣಿ ಎಂದರೆ ತಪ್ಪಾಗಲಿಕ್ಕಿಲ್ಲ. ಗಳೂರು ಜಿಲ್ಲೆ ಕೊಪ್ಪದಲ್ಲಿ ಜನವರಿ 4ರಂದು ುಬೇಕಿದ್ದ ಸಹಕಾರ ಸಾರಿಗೆ ಸಂಸ್ಥೆಯ ರಜತ ೋತ್ಸವದಲ್ಲಿ ಪಾಲ್ಗೊಳ್ಳಲೆಂದು ಸೋಮವಾರವೇ ರಿನಿಂದ ಚಿಕ್ಕಮಗಳೂರಿಗೆ ತೆರಳಿದ್ದ ಅವರು ಸೆರಾಯ್ ್ಟ್‌ನಲ್ಲಿ ತಂಗಿದ್ದರು. ಹೃದಯಾಘಾತಕ್ಕೆ ತುತ್ತಾಗಿ ನಿದ್ರೆ ುತ್ತಲೇ ಪ್ರಾಣ ಬಿಟ್ಟ ಪ್ರಸಾದ್ ಅವರ ನಿಧನ ಚಾರ ಹೊರಜಗತ್ತಿಗೆ ಗೊತ್ತಾದದ್ದು ಮಂಗಳವಾರ ರು 9 ಗಂಟೆ ಸಮಯದಲ್ಲಿ. ಮುಂಜಾನೆ ಸುಮಾರು ವ 6 ಗಂಟೆ ಸಮಯದಲ್ಲಿ ಅವರು ಶರಾಗಿರಬಹುದೆಂದು ವೈದ್ಯಲೋಕ ಅಂದಾಜಿಸಿದೆ.

ುಂಡ್ಲುಪೇಟೆ ತಾಲೂಕಿನ ಹಾಲಹಳ್ಳಿ ಗ್ರಾಮದ ಎನ್.ಶ್ರೀಕಂಠಶೆಟ್ಟಿ ಅವರ ಪುತ್ರರಾಗಿ 1958ನೆಯ ಆಗಸ್ಟ್ 5 ರಂದು ಜನಿಸಿದ ಮಹದೇವ ಪ್ರಸಾದ್ ತಳ ಮಟ್ಟದ ರಾಜಕೀಯದಿಂದ ತಮ್ಮ ನಡೆಯನ್ನು ತಿಸಿಕೊಂಡು ಹಂತಹಂತವಾಗಿ ಮೇಲೇರಿ









ೀಯದಲ್ಲಿ ಗಾಢ ಬೇರು ಬಿಟ್ಟು, ಲಿಂಗಾಯತ ವರ್ಗದ ವಿ ಮುಖಂಡರಾಗಿ ಬೆಳೆದವರು. ಕೆ.ಆರ್.ನಗರದ ೇಶ್ವರ ಬಡಾವಣೆಯಲ್ಲಿರುವ ವಿಶಾಲವಾದ ತೊಟ್ಟಿ ಯಲ್ಲಿ ಅವರ ಜನನವಾದಾಗ ಅಜ್ಜ ವೈ.ಆರ್.ಭದ್ರಪ್ಪ ಪುಟ್ಟಕ್ಕಯ್ಯಮ್ಮ, ತಂದೆ ಹೆಚ್.ಎಸ್.ಶ್ರೀಕಂಠಶೆಟ್ಟಿ, ವೀರಮ್ಮರಿಗೆ ಎಲ್ಲಿಲ್ಲದ ಸಂತೋಷ. ಯಾಕೆಂದರೆ ಟುಂಬದಲ್ಲಿ ಅಪರೂಪಕ್ಕೊಂದು ಗಂಡು ಮಗು ತ್ತು. ಬಹುಶಃ ಆ ಮಗು ಮುಂದೊಂದು ದಿನ ಈ ಕ್ಕೆ ಬೆಳೆದು ನಿಲ್ಲಬಲ್ಲ ಎಂದು ಗೊತ್ತಾಗಿದ್ದಿದ್ದರೆ ಅವರ ದುಪ್ಪಟ್ಟಾಗುತ್ತಿತ್ತೇನೊ.

ಸವೇಶ್ವರ ಬ್ಲಾಕ್‌ನಲ್ಲೇ ಇರುವ ಸರ್ಕಾರಿ ಕಿರಿಯ ಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಶುರು ಮಾಡಿದ್ದ ದೇವ ಪ್ರಸಾದ್‌ರು ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಶಿಕ್ಷಣ ವ್ಯಾಸಂಗ ಮುಗಿಸಿ ಮೈಸೂರಿನ ರಾಮಾನುಜ ಲ್ಲಿದ್ದ ಜೆಎಸ್‌ಎಸ್ ಪದವಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದರು. ಕಾಲೇಜು ದಿನದಿಂದಲೇ ನಾಯಕತ್ವದ ಗುಣ ಬೆಳೆಸಿಕೊಂಡಿದ್ದರು. ಆ ದಿನಗಳಲ್ಲೇ ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಸ್ಪರ್ಧಿಸಿ ಜಯಗಳಿಸಿದ್ದರು.

ಗುಂಡ್ಲುಪೇಟೆಯಲ್ಲಿ ಒಂದು ಕಾಲಕ್ಕೆ 'ಅಮ್ಮ' ಎಂದೇ ಭಾರೀ ಹೆಸರು ಮಾಡಿದ್ದ ಮಾಜಿ ಸಚಿವೆ ಕಬ್ಬಳ್ಳಿ ನಾಗರತ್ನಮ್ಮ ಅವರ ಎದುರು ರಾಜಕೀಯ ಮಾಡುವ ಶಕ್ತಿ ಯಾರಿಗೂ ಇರಲಿಲ್ಲ. ಅಂಥಾ ಸಂದರ್ಭದಲ್ಲಿ ಎಚ್.ಎಸ್.ಮಹದೇವ ಪ್ರಸಾದ್‌ರು ನಾಗರತ್ನಮ್ಮ ವಿರುದ್ಧ ರಾಜಕೀಯಕ್ಕೆ ನಿಂತರು. ಇದು ಅವರ ಧೈರ್ಯ ಮತ್ತು ಸ್ಪರ್ಧಾಮನೋಭಾವಕ್ಕೆ ಸಾಕ್ಷಿ. 1994ರಿಂದ ಸತತ ಐದು ಬಾರಿ ಗುಂಡ್ಲುಪೇಟೆ ಎಂಎಲ್ಎ ಚುನಾವಣೆಯಲ್ಲಿ ಜಯಗಳಿಸಿದ್ದ ಮಹದೇವ ಪ್ರಸಾದ್ ಅವರು ಸೋಲಿಲ್ಲದ ಸರದಾರ ಎನಿಸಿಕೊಂಡಿದ್ದರು. ಹಾಗಂತ ಮಹದೇವ ಪ್ರಸಾದ್ ಅವರು ಸೋಲನ್ನೇ ನೋಡದವರೇನಲ್ಲ. 1985 ಮತ್ತು 1989ರ ಚುನಾವಣೆಗಳಲ್ಲಿ ಕಬ್ಬಳ್ಳಿ ನಾಗರತ್ನಮ್ಮ ವಿರುದ್ಧ ಜನತಾ ಪಕ್ಷದಿಂದ ಸ್ಪರ್ಧಿಸಿ ಸೋಲನುಭವಿಸಿದ್ದರು. ಆದರೆ ಆ ಸೋಲುಗಳನ್ನು ಸವಾಲಾಗಿ ಸ್ವೀಕರಿಸಿ ರಾಜಕೀಯದ ಅಖಾಡಕ್ಕಿಳಿದ ಪ್ರಸಾದ್‌ರು 1994ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು.

ತದನಂತರ ಜನತಾದಳ ಇಬ್ಭಾಗವಾದ ಮೇಲೆ ಸಂಯುಕ್ತ ಜನತಾದಳ ಸೇರಿದ್ದರು. 1999ರಲ್ಲಿ ಸಂಯುಕ್ತ ಜನತಾದಳದಿಂದ ಎರಡನೆಯ ಬಾರಿ ಶಾಸಕರಾಗಿ ಆಯ್ಕೆಯಾದ ತರುವಾಯ ಜೆ.ಎಚ್.ಪಟೇಲ್ ಮತ್ತು ಎಚ್.ಡಿ.ದೇವೇಗೌಡರು ಮುನ್ನಡೆಸುತ್ತಿದ್ದ ಎರಡೂ ಬಣಗಳು ಒಂದಾಗಿ ರಚನೆಗೊಂಡ ಜೆಡಿಎಸ್ ಪಕ್ಷದಿಂದ 2004ರಲ್ಲಿ ಚುನಾವಣಾ ಅಖಾಡಕ್ಕಿಳಿದು ಹ್ಯಾಟ್ರಿಕ್ ಗೆಲುವು ಕಂಡಿದ್ದರು. ಆಗಲೇ ಮಹದೇವ ಪ್ರಸಾದ್‌ರಿಗೆ ಮಂತ್ರಿಯಾಗುವ ಯೋಗ ಒದಗಿಬಂದದ್ದು. ಜೆಡಿಎಸ್, ಕಾಂಗ್ರೆಸ್ ಸೇರಿ ರಚಿಸಿದ್ದ ಧರ್ಮಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರಾಗಿದ್ದ ಮಹದೇವ್ ಪ್ರಸಾದ್‌ರು ನಂತರ ರಚನೆಯಾದ ಜೆಡಿಎಸ್, ಬಿಜೆಪಿ ಮೈತ್ರಿ ಸರ್ಕಾರದಲ್ಲೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆಯಲ್ಲಿ ಮಿಂಚಿದ್ದರು.

ಹೀಗೆ ಎರಡು ಬಾರಿ ಮಂತ್ರಿಯಾಗಿ ತಾವು ವಹಿಸಿಕೊಂಡಿದ್ದ ಖಾತೆಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದ ಪ್ರಸಾದ್‌ರ ರಾಜಕೀಯ ಜೀವನ ಕೆಲವು ಬದಲಾವಣೆಗಳನ್ನು ಬಯಸುತ್ತಿತ್ತು. ಹಾಗಾಗಿ ಎಂ.ಪಿ.ಪ್ರಕಾಶ್ ಅವರೊಂದಿಗೆ ಜೆಡಿಎಸ್ ತ್ಯಜಿಸಿ ಕಾಂಗ್ರೆಸ್ ಸೇರಿಕೊಂಡ ಮಹದೇವಪ್ರಸಾದ್‌ರು 2009ರ ಚುನಾವಣೆಯಲ್ಲೂ ಜಯಗಳಿಸುವ ಮೂಲಕ ಗುಂಡ್ಲುಪೇಟೆಯಲ್ಲಿ ಪಕ್ಷಕ್ಕಿಂತ ಹೆಚ್ಚಾಗಿ ತಾನೊಬ್ಬ ವೈಯಕ್ತಿಕ ವರ್ಚಸ್ವೀ ನಾಯಕ ಎಂಬುದನ್ನು ಸಾಬೀತು ಮಾಡಿದ್ದರು. 20013ರಲ್ಲಿ ಐದನೇ ಬಾರಿ ಅವರ ಗೆಲುವು ಪುನರಾವರ್ತನೆಯಾದಾಗ ಸಿದ್ದರಾಮಯ್ಯ ಸರ್ಕಾರದಲ್ಲಿ ಸಹಕಾರ ಮತ್ತು ಸಕ್ಕರೆ ಖಾತೆ ಸಚಿವಗಿರಿಯು ಒಲಿದು ಬಂದಿತ್ತು. ಅಂದಹಾಗೆ, ಆ ಚುನಾವಣೆಯಲ್ಲಿ ಕೇವಲ ತಾನು ಗೆಲ್ಲುವುದಲ್ಲದೆ ಚಾಮರಾಜನಗರ, ಕೊಳ್ಳೇಗಾಲ, ಹನೂರು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಕಾರಣರಾಗಿದ್ದರು.

ಮಂತ್ರಿಯಾಗಿ ಗುರುತರ ಸಾಧನೆ

ಮಹದೇವ ಪ್ರಸಾದ್‌ರವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾಗಿದ್ದಾಗ ಜಾನಪದ ಜಾತ್ರೆಗೆ ಹೊಸ ಸ್ವರೂಪ ಕೊಟ್ಟಿದ್ದರು. ಅನೇಕ ಉತ್ತಮ ಗ್ರಂಥಗಳ ಪ್ರಕಟಣೆಗೆ ಕಾರಣರಾಗಿದ್ದರು. ಜಿಲ್ಲಾ ಉತ್ಸವಗಳನ್ನು ಆರಂಭಿಸಿದ್ದರು. ಮೈಸೂರಿನ ಕಲಾಮಂದಿರದ ಅಭಿವೃದ್ಧಿಗೆ ಕಾರಣಕರ್ತರಾಗಿದ್ದರು. ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರಾಗಿದ್ದಾಗ ಪಡಿತರ ಚೀಟಿ ಸಂಪೂರ್ಣವಾಗಿ ಗಣಕೀಕರಣಗೊಳಿಸಿದ್ದರು. ಹೊಸ ಪಡಿತರ ಚೀಟಿ ವಿತರಿಸುವ ಕಾರ್ಯ ಆರಂಭಿಸಿದ್ದರು. ಸಹಕಾರ ಸಚಿವರಾಗಿ ಶೂನ್ಯ ಬಡ್ಡಿ ದರದಲ್ಲಿ 3 ಲಕ್ಷ ರೂ.ವರೆಗೆ ಕೃಷಿ ಸಾಲ ನೀಡುವುದರ ಜೊತೆಗೆ ಯಶಸ್ವಿನಿ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸುವ ಕೆಲಸ ಮಾಡಿದ್ದರು. ಗುಂಡ್ಲುಪೇಟೆಯನ್ನು ಮಾದರಿ ಕ್ಷೇತ್ರವನ್ನಾಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಂದ ಕೋಟ್ಯಂತರ ರೂ. ಅನುದಾನ ಬಿಡುಗಡೆ ಮಾಡಿಸಿದ್ದರು. ತಮ್ಮ ಅಧಿಕಾರ ಅವಧಿಯಲ್ಲಿ ಚಾಮರಾಜನಗರ ಹಾಗೂ ಗುಂಡ್ಲುಪೇಟೆ ತಾಲ್ಲೂಕುಗಳ 197 ಗ್ರಾಮಗಳಿಗೆ ನದಿಮೂಲದಿಂದ ಕುಡಿಯುವ ನೀರು ಪೂರೈಕೆ ಮಾಡುವುದು, ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ಹೆದ್ದಾರಿ ನಿರ್ಮಾಣ,

⇨08

ಚ್.ಎಸ್.ಮಹದೇವ ಪ್ರಸಾದ್

ನ: 05-08-1958

ಟ್ಟೂರು: ಗುಂಡ್ಲುಪೇಟೆ ತಾಲ್ಲೂಕಿನ ಹಾಲಹಳ್ಳಿ ಗ್ರಾಮ

ದೆ: ಎಚ್.ಎಸ್.ಶ್ರೀಕಂಠಶೆಟ್ಟರು,

ತ್ಯ ಹೋರಾಟಗಾರರು

ಯಿ: ವೈ.ಬಿ.ವೀರಮ್ಮ

: ಡಾ.ಗೀತಾ ಮಹದೇವಪ್ರಸಾದ್

ತ್ರ: ಎಚ್.ಎಂ.ಗಣೇಶ್ ಪ್ರಸಾದ್

ಸೆ: ಎ.ಪಿ.ವಿದ್ಯಾ

ಮ್ಮಗ: ನಿಶ್ಚಿತ್

ೋದರ: ಎಚ್.ಎಸ್.ನಂಜುಂಡಪ್ರಸಾದ್

ೋದರಿ: ಪ್ರೇಮ ಡಾ.ಚಂದ್ರಚೂಡ್

ಹದೇವ ಪ್ರಸಾದ್ ವಿದ್ಯಾಭ್ಯಾಸ

ಥಮಿಕ ಶಿಕ್ಷಣ: ಕೆ.ಆರ್.ನಗರ

ಢಶಿಕ್ಷಣ: ರಾಮಕೃಷ್ಣ ವಿದ್ಯಾಲಯ ಮೈಸೂರು

ಯು ಪೂರ್ವ ಶಿಕ್ಷಣ: ಶಾರದಾ ವಿಲಾಸ ಕಾಲೇಜು

ವಿ ಶಿಕ್ಷಣ: ಜೆಎಸ್‌ಎಸ್ ಕಾಲೇಜು ಮೈಸೂರು

ಾತಕೋತ್ತರ ಪದವಿ: ಎಂಎ ರಾಜ್ಯಶಾಸ್ತ್ರ



ರಾಜಕೀಯದಲ್ಲಿ ಪ್ರಸಾದ್ ಹೆಜ್ಜೆ ಗುರುತುಗಳು

1978: ಕಾಂಗ್ರೆಸ್ ಮೂಲಕ ರಾಜಕೀಯ ಪ್ರವೇಶ, ಗುಂಡ್ಲುಪೇಟೆ ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ

1980: ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ನೇತೃತ್ವದ ಕ್ರಾಂತಿರಂಗಕ್ಕೆ ಸೇರ್ಪಡೆ

1985: ಮೊದಲ ಬಾರಿಗೆ ಗುಂಡ್ಲುಪೇಟೆ ಕ್ಷೇತ್ರದಲ್ಲಿ ಕ್ರಾಂತಿರಂಗದಿಂದ ವಿಧಾನಸಭೆಗೆ ಸ್ಪರ್ಧೆ

1989: ಮತ್ತೆ ಜನತಾ ಪಕ್ಷದಿಂದ ವಿಧಾನಸಭೆಗೆ ಸ್ಪರ್ಧೆ; ಕೆ.ಎಸ್.ನಾಗರತ್ನಮ್ಮ ಅವರ ವಿರುದ್ಧ ಸೋಲು

1990: ಕ 'ರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಉಪಾಧ್ಯಕ್ಷರಾಗಿ ಆಯ್ಕೆ

1994: ಜನತಾದಳದಿಂದ ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆ

1994 ರಿಂದ 1999ರವರೆಗೆ ಮೈಸೂರು ವಿವಿ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ಸೇವೆ

1999: ಸಂಯುಕ್ತ ಜನತಾದಳದಿಂದ ಎರಡನೆಯ ಬಾರಿಗೆ ಶಾಸಕರಾಗಿ ಆಯ್ಕೆ

2004: ಜೆ.ಎಚ್.ಪಟೇಲ್ ಮತ್ತು ಎಚ್.ಡಿ.ದೇವೇಗೌಡರು ಮುನ್ನಡೆಸುತ್ತಿದ್ದ ಎರಡು ಬಣಗಳು ಒಂದಾಗಿ ರಚನೆಗೊಂಡ ಜೆಡಿಎಸ್‌ನಿಂದ ಮೂರನೆಯ ಬಾರಿಗೆ ಶಾಸಕರಾಗಿ ಆಯ್ಕೆ

2005: ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವರಾಗಿ ಕಾರ್ಯ ನಿರ್ವಹಣೆ

2006: ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರಾಗಿ ಕಾರ್ಯನಿರ್ವಹಣೆ

2009: ಕಾಂಗ್ರೆಸ್‌ನಿಂದ ನಾಲ್ಕನೆಯ ಬಾರಿಗೆ ಶಾಸಕರಾಗಿ ಆಯ್ಕೆ

2013: ಕಾಂಗ್ರೆಸ್‌ನಿಂದ ಐದನೆಯ ಬಾರಿಗೆ ಶಾಸಕರಾಗಿ ಆಯ್ಕೆ

2013: ಪ್ರಸ್ತುತ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದಲ್ಲಿ ಸಹಕಾರ ಮತ್ತು ಸಕ್ಕರೆ ಖಾತೆ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಮಹದೇವ್ ಪ್ರಸಾದ್ ಉಳಿಸಿಹೋದ ಕೊರಗು!


07⇦

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರ ಅಭಿವೃದ್ಧಿಗೆ ಆದ್ಯತೆ, ಕ್ಷೇತ್ರದ ಅಗತ್ಯವಿರುವೆಡೆ ಸಮುದಾಯ ಭವನ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿ ಸೇರಿದಂತೆ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಜನಪ್ರಿಯ ನಾಯಕರಾಗಿದ್ದರು.





ಮಹದೇವಪ್ರಸಾದ್ ಅವರು ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆಪ್‌ಗಳನ್ನು ತಮ್ಮ ರಾಜಕೀಯ ಚಟುವಟಿಕೆಗಳಿಗೆ ಹಾಗೂ ವೈಯಕ್ತಿಕ ಆಸಕ್ತಿಗಳನ್ನು ಸಾರ್ವಜನಿಕರೊಂದಿಗೆ ಹಂಚಿಕೊಳ್ಳಲು ಬಳಸುತ್ತಿದ್ದರು. ಇದು ಆಧುನಿಕ ಕಾಲಘಟ್ಟಕ್ಕೆ ಮಹದೇವ ಪ್ರಸಾದ್ ಅವರು ತೆರೆದುಕೊಳ್ಳುತ್ತಿದ್ದ ರೀತಿಯನ್ನು ತಿಳಿಸುತ್ತದೆ. ಮಹದೇವ ಪ್ರಸಾದ್‌ರವರು ಮೈಸೂರು ಭಾಗದ ಲಿಂಗಾಯತ ಸಮುದಾಯವನ್ನು ಪ್ರತಿನಿಧಿಸುವ ಏಕೈಕ ಶಾಸಕರಾಗಿದ್ದರು. ಅಲ್ಲದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಪ್ತರಾಗಿದ್ದರು. ರಾಜಕಾರಣದಲ್ಲಿ ನಾಯಕರುಗಳಿಗೆ ವೈಮನಸ್ಸು ಉಂಟಾದರೆ, ಒಡೆಯುವ ತಂತ್ರಗಳು ಕಂಡುಬಂದರೆ ಅದನ್ನು ಸರಿದೂಗಿಸಿ ಹೊಂದಾಣಿಕೆ ಮಾಡುವ ರಾಜಕಾರಣದಲ್ಲಿ ಅವರು ಪ್ರವೀಣರಾಗಿದ್ದರು. ಯಾರೊಂದಿಗೂ ದ್ವೇಷ ಕಟ್ಟಿಕೊಳ್ಳದ ಮಹದೇವ ಪ್ರಸಾದ್ ಅಜಾತಶತ್ರುವಾಗಿದ್ದರು ಎಂದರೆ ಅತಿಶಯೋಕ್ತಿ ಆಗಲಾರದು.



ಆದಾಗ್ಯೂ ಅವರು ಆರೋಪಗಳಿಂದ ಮುಕ್ತವಾದ ರಾಜಕಾರಣಿಯೇನಲ್ಲ. ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಕರ್ನಾಟಕ ಗೃಹಮಂಡಳಿಯಿಂದ ಅಕ್ರಮವಾಗಿ ನಿವೇಶನ ಪಡೆದಿದ್ದಾರೆ ಎಂಬ ಆರೋಪ ಅವರ ಮೇಲಿತ್ತು. ಈ ಪ್ರಕರಣ ಕೋರ್ಟ್ ಮೆಟ್ಟಿಲನ್ನು ಹತ್ತಿತ್ತು. ಕೊನೆಗೆ ಮಹದೇವ ಪ್ರಸಾದ್ ಅವರ ವಿರುದ್ಧ ದೂರು ನೀಡಿದ್ದಾತನೇ ಕೋರ್ಟ್‌ನಿಂದ ಅರ್ಜಿ ಹಿಂಪಡೆದಿದ್ದ. ಸರಿ ಸುಮಾರು ಮೂರು ದಶಕಗಳಿಂದ ಗುಂಡ್ಲುಪೇಟೆ ಕ್ಷೇತ್ರದಲ್ಲಷ್ಟೇ ಅಲ್ಲದೆ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು ತಾಲ್ಲೂಕುಗಳಲ್ಲಿ ಹಾಗೂ ಮೈಸೂರು ಜಿಲ್ಲೆಯಲ್ಲಿ ಮಹದೇವ ಪ್ರಸಾದ್ ಹೆಚ್ಚು ಪ್ರಭಾವ ಬೀರಿದ್ದರು. ಇಲ್ಲಿನ ಪ್ರಭಾವಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಕೃಪಾಕಟಾಕ್ಷವೂ ಪ್ರಸಾದ್‌ರಿಗೆ ಲಭಿಸಿತ್ತು. ಆ ಕಾರಣಕ್ಕೆ ಲಿಂಗಾಯತ ಸಮುದಾಯದ ಬೆಂಬಲವಿತ್ತು. ಹಾಗಾಗಿಯೇ ಲಿಂಗಾಯ[ತ] ಪ್ರಭಾವಿ ರಾಜಕಾರಣಿ ಮಾಜಿ ಮುಖ್ಯಮ[ಂತ್ರಿ] ಬಿ.ಎಸ್.ಯಡಿಯೂರಪ್ಪ ಅವರ ಸಾರಥ್ಯ ಇದ್ದಾಗ[ಲೂ] ಚಾಮರಾಜನಗರ ಜಿಲ್ಲೆಯಲ್ಲಿ ಕಾಂಗ್ರೆಸ್‌ಅನ್ನು ಮುರಿಯ[ುವ] ಶಕ್ತಿ ಬಿಜೆಪಿಗೆ ಬಂದಿರಲಿಲ್ಲ. ಆದರೆ ಈಗ ಮಹ[ದೇವ] ಪ್ರಸಾದ್ ಅವರ ನಿಧನದಿಂದ ಚಾಮರಾಜನಗರ ಜಿಲ್ಲೆ[ಯಲ್ಲಿ] ಪ್ರಸಾದ್ ಅವರಂತಹ ಪ್ರಭಾವಿ ನಾಯಕನ ಕೊ[ರತೆ] ಕಾಣುತ್ತಿದೆ.

ಬಹುಶಃ ಪ್ರಸಾದ್ ಅವರು ಹೊಸ ಯುವನಾಯ[ಕರನ್ನು] ಬೆಳೆಸದಿರುವುದು ಪಕ್ಷಕ್ಕೆ ಕೊಂಚ ನಷ್ಟ ಉ[ಂಟು] ಮಾಡಬಹುದು. ಗುಂಡ್ಲುಪೇಟೆ ಮಾತ್ರವಲ್ಲ ಚಾಮರಾಜ[ನಗರ] ಜಿಲ್ಲೆಯೇ ಜಾತಿರಾಜಕೀಯ ಧ್ರುವೀಕರಣಕ್ಕೆ ಈಡಾ[ಗುವ] ಅಪಾಯವನ್ನು ತಳ್ಳಿಹಾಕಲು ಸಾಧ್ಯವಿಲ್ಲ. ತಮ್ಮ ರಾಜಕೀ[ಯ] ಜೀವನದುದ್ದಕ್ಕೂ ಹಲವುಹತ್ತು ಜನೋಪಕಾರಿ [...] ಮಾಡಿದ್ದ ಮಹಾದೇವ್ ಪ್ರಸಾದ್‌ರು ಇದೊಂದು ಕೊ[ರಗು] ಉಳಿಸಿಹೋಗಿದ್ದಾರೆ. ■

06⇦

ದಿಡ್ಡಳ್ಳಿ

ನ್ಯಾಯಾಲಯದ ಗಮನಕ್ಕೆ ತಾರದ ಸರಕಾರಿ ವಕೀಲರು

ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಗೆ ಬಂದಾಗ, ಸರಕಾರದ ಪರವಾಗಿ ವಾದಿಸಬೇಕಾಗಿದ್ದ ಮತ್ತು ರಾಜ್ಯ ಸರಕಾರ ತೆಗೆದುಕೊಂಡ ತೀರ್ಮಾನವನ್ನು ನ್ಯಾಯಾಲಯದ ಗಮನಕ್ಕೆ ತರಬೇಕಾಗಿದ್ದ ಅಂದಿನ ಸರಕಾರಿ ವಕೀಲರು ಸರಕಾರದ ಗಮನಕ್ಕೆ ವಿಚಾರವನ್ನು ತರುವಲ್ಲಿ ವಿಫಲರಾಗಿದ್ದರು.

19-12-2012ರಲ್ಲಿ ರಾಜ್ಯ ಸರಕಾರ ತನ್ನ ಸಚಿವ ಸಂಪುಟದಲ್ಲಿ ತೆಗೆದುಕೊಂಡ ತೀರ್ಮಾನದಂತೆ ಗೆಜೆಟ್ ಅಧಿಸೂಚನೆ ಹೊರಡಿಸಿರುವುದನ್ನು ಸರಕಾರಿ ವಕೀಲರು ನ್ಯಾಯಾಲಯದ ಗಮನಕ್ಕೆ ತರಬೇಕಾಗಿತ್ತು. ಅವರು ನ್ಯಾಯಾಲಯದ ಗಮನಕ್ಕೆ ತರುವುದು ಹಾಗಿರಲಿ, ನ್ಯಾಯಾಲಯವು ಈ ರಬ್ಬರ್ ತೋಟ ಮೀಸಲು ಅರಣ್ಯವೋ, ಅಲ್ಲವೋ ಎಂಬುದನ್ನು ಸಂಬಂಧಪಟ್ಟ ಇಲಾಖೆ ಪರಿಶೀಲಿಸಬೇಕು ಎಂದು ಹೇಳಿದಾಗ ತನ್ನ ಆಕ್ಷೇಪಣೆಯನ್ನು ಕೂಡ ಸಲ್ಲಿಸಲಿಲ್ಲ. ಇದು ತೀರಾ ವಿಚಿತ್ರವಾದ ಸನ್ನಿವೇಶ ಎಂದು ಅನಿಸುತ್ತದೆ. ಸರಕಾರಿ ವಕೀಲರು ಈ ವಿಚಾರವನ್ನು ನ್ಯಾಯಾಲಯದ ಗಮನಕ್ಕೆ ತರಲಿಲ್ಲವೋ ಅಥವ ಅರಣ್ಯ ಇಲಾಖೆ ಸರಕಾರದ ತೀರ್ಮಾನವನ್ನು ಸರಕಾರಿ ವಕೀಲರ ಮೂಲಕ ಉದ್ದೇಶ ಪೂರ್ವಕವಾಗಿ ನ್ಯಾಯಾಲಯದ ಗಮನಕ್ಕೆ ತರಲಿಲ್ಲವೋ ಎಂಬುದು ತಿಳಿಯಬೇಕಾದ ವಿಚಾರವಾಗಿದೆ.

ಈ ಜಮೀನು ಅರಣ್ಯವೋ ಅಲ್ಲವೋ ಎಂಬುದನ್ನು ಸೂಕ್ತ ಇಲಾಖೆ ವಿಚಾರಣೆಯನ್ನು ನಡೆಸಿ ವರದಿಯನ್ನು ನೀಡಬೇಕು ಎಂದು ಸೂಚಿಸಿತ್ತು. ಅಲ್ಲಿ ಅರಣ್ಯ ಇಲಾಖೆಯೇ ಈ ಬಗ್ಗೆ ವಿಚಾರಣೆಯನ್ನು ನಡೆಸಬೇಕು ಎಂದು ಎಲ್ಲಿಯೂ ರಾಜ್ಯ ಉಚ್ಚ ನ್ಯಾಯಾಲಯ ಹೇಳಲಿಲ್ಲ. ಆದರೆ ಆದೇಶದ ನಾಲ್ಕನೇ ಅಂಕಣದಲ್ಲಿ ಅರಣ್ಯ ಸಂರಕ್ಷಣಾಧಿಕಾರಿಗಳು ಈ ಬಗ್ಗೆ ಎಲ್ಲಾ ಸಂಬಂಧಿತ ವ್ಯಕ್ತಿಗಳಿಗೆ ಅವಕಾಶವನ್ನು ನೀಡಿ ವಿಚಾರಣೆ ನಡೆಸಬೇಕು ಎಂದು ಆದೇಶಿಸಿತ್ತಲ್ಲದೆ, ಮೂರು ತಿಂಗಳೊಳಗೆ ಇದು ಮೀಸಲು ಅರಣ್ಯವೋ ಅಥವ ಮೀಸಲು ಅರಣ್ಯದ ಸ್ವರೂಪವನ್ನು ಕಳೆದುಕೊಂಡಿದೆಯೋ ಎಂಬುದನ್ನು ತೀರ್ಮಾನಿಸಬೇಕು ಎಂದು ಸೂಚಿಸಿತ್ತು.

ಪರಿಸರ ಸಂರಕ್ಷಣೆ ತಮ್ಮ ಗುರಿ ಮತ್ತು ತಾವು ಸತ್ಯಹರಿಶ್ಚಂದ್ರರ ವಂಶಸ್ಥರು ಎಂದು ಹೇಳಿಕೊಳ್ಳುವ ಭ್ರಷ್ಟ ಮತ್ತು ಜನವಿರೋಧಿ ಇಲಾಖೆಯಾದ ಅರಣ್ಯ ಇಲಾಖೆಯಲ್ಲಿ ಅತ್ಯಂತ ಭ್ರಷ್ಟ ಅಧಿಕಾರಿಯಾಗಿ ಆ ವೇಳೆಯಲ್ಲಿ ಇದ್ದ ಐ.ಎಫ್.ಎಸ್. ಅಧಿಕಾರಿ ಬಿ.ಕೆ. ದೀಕ್ಷಿತ್‌ರವರು **1-6-2013**ರಲ್ಲಿ ವಿಚಾರಣೆಯ ಆದೇಶವನ್ನು ಹೊರಡಿಸಿ, ಈ ಜಮೀನು ಮೀಸಲು ಅರಣ್ಯ ಅಲ್ಲ ಎಂದು ತೀರ್ಮಾನಿಸಿದರು. ಅಲ್ಲದೆ ಇಲ್ಲಿಯವರೆಗೆ ಈ ಪ್ರಕರಣದಲ್ಲಿ ಅರಣ್ಯ ಇಲಾಖೆ ಈ ರಬ್ಬರ್ ತೋಟವನ್ನು ಮೀಸಲು ಅರಣ್ಯ ಎಂದು ಉಚ್ಚ ನ್ಯಾಯಾಲಯದಲ್ಲಿ ಪ್ರತಿಪಾದಿಸುತ್ತಾ ಬಂದಿದ್ದನ್ನು ಉಲ್ಲೇಖಿಸಿ, ನ್ಯಾಯಾಲಯದಲ್ಲಿ ಅದು ಮೀಸಲು ಅರಣ್ಯ ಅಲ್ಲ ಎಂದು ತಿದ್ದುಪಡಿ ಅರ್ಜಿಗಳನ್ನು ಹಾಕಬೇಕು ಎಂದು ಸರಕಾರಿ ವಕೀಲರಿಗೆ ಪತ್ರವನ್ನು ಬರೆದರು.

ಅಂದರೆ ಆಗಿನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ.ಕೆ. ದೀಕ್ಷಿತ್‌ರವರು ಕರ್ನಾಟಕ ರಾಜ್ಯ ಸರಕಾರ ತೆಗೆದುಕೊಂಡ ತೀರ್ಮಾನಕ್ಕೆ ವಿರುದ್ಧವಾಗಿ ಕಾರ್ಯ ನಿರ್ವಹಿಸಿದ್ದಾರೆ. ಸರಕಾರದ ತೀರ್ಮಾನದಂತೆ ಕಾರ್ಯ ನಿರ್ವಹಿಸಲಿಲ್ಲ ಎಂಬುದು ಖಚಿತವಾಗಿದೆ.

ಅರಣ್ಯ ಇಲಾಖೆಯುವರು ರಾಜ್ಯ ಸರಕಾರದ ತೀರ್ಮಾನವನ್ನು ಪಾಲಿಸಲಿಲ್ಲ ಎನ್ನುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ರಾಜ್ಯ ಉಚ್ಚ ನ್ಯಾಯಾಲಯವು ನಿರ್ದೇಶಿಸಿದಂತೆ ಸುಮಾರು **175** ಕೋಟಿ ರೂಪಾಯಿ ಠೇವಣಿ ಇಡುವಂತೆ ನೋಡಿಕೊಳ್ಳಲಿಲ್ಲ. ಹಿಂದಿನ ಬಾಕಿ **130** ಕೋಟಿ ರೂಪಾಯಿ ಇದ್ದರೆ, **14-3-2015**ರಿಂದ ದಿನವೊಂದಕ್ಕೆ **6** ಲಕ್ಷದ **42** ಸಾವಿರದ **189**ರಂತೆ ಒಟ್ಟು ಡಿಸೆಂಬರ್ **31**ರ ವೇಳೆಗೆ ಇಲಾಖೆಯೇ ನಿಗದಿಪಡಿಸಿದಂತೆ **41** ಕೋಟಿ **61** ಲಕ್ಷದ **38** ಸಾವಿರದ **472** ರೂಪಾಯಿಯನ್ನು ನೀಲಂಬೂರು ರಬ್ಬರ್ ತೋಟದವರಿಂದ ಪಡೆಯಬೇಕಾಗಿತ್ತು.

ಈಗ ಕೊಡಗಿನ ಮಡಿಕೇರಿಯಲ್ಲಿ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಯಾಗಿರುವ ಮನೋಜ್‌ಕುಮಾರ್ ಹಲವಾರು ರೀತಿಯಲ್ಲಿ ಭ್ರಷ್ಟ ಅಧಿಕಾರಿಗಳನ್ನು ಸಂರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ. ಜನಪರವಾಗಿರುವಂತಹ ಅಧಿಕಾರಿಗಳನ್ನು ಜಿಲ್ಲೆಯಿಂದ ಹೊರಹಾಕಲು ಬೇಕಾದ ಎಲ್ಲಾ ಕ್ರಮವನ್ನು ಮಾಡುತ್ತಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಅರಣ್ಯ ಇಲಾಖೆ ಜನಸಾಮಾನ್ಯರ ವಿರುದ್ಧ ತನ್ನ ದಬ್ಬಾಳಿಕೆಯನ್ನು ಆರಂಭಿಸಿದ್ದು ವೆಂಕಟಸುಬ್ಬಯ್ಯ ಎಂಬ ವ್ಯಕ್ತಿ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಲು ಆರಂಭಿಸಿದ ನಂತರ. ಜಿಲ್ಲೆಯಲ್ಲಿ ಕೃಷಿಕ ವರ್ಗದವರಿಗೆ ಇಲ್ಲಸಲ್ಲದ ಕಿರುಕುಳವನ್ನು ವೆಂಕಟಸುಬ್ಬಯ್ಯ ನೀಡುತ್ತಾ ಬಂದಿದ್ದರು. ಕೊಡಗಿನ ಕಾಫಿ ತೋಟಗಳೆಲ್ಲವೂ ಅರಣ್ಯ ಎಂದು ಪ್ರತಿಪಾದಿಸುತ್ತಾ ಬಂದವರು ವೆಂಕಟಸುಬ್ಬಯ್ಯ. ಇವರು ಈಗ ನಿವೃತ್ತರಾಗಿದ್ದಾರೆ.

ರಬ್ಬರ್ ತೋಟಕ್ಕೆ ಸಂಬಂಧಪಟ್ಟಂತೆ ಇವರು ತೆಗೆದುಕೊಂಡ ಒಂದು ಹಂತದ ಕ್ರಮವನ್ನು ರಾಜ್ಯ ಉಚ್ಚ ನ್ಯಾಯಾಲಯ ಪ್ರಶ್ನಿಸಿತ್ತು. ಕಾನೂನುಬಾಹಿರವಾಗಿ ತೆಗೆದುಕೊಂಡ ಕ್ರಮವನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿ, ಕಾನೂನು ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸೂಚಿಸಿತ್ತು. ಆಗ ವಶಪಡಿಸಿಕೊಂಡಿದ್ದ ರಬ್ಬರ್ ತೋಟವನ್ನು ಹಿಂದಿರುಗಿಸಬೇಕೆಂದು ಮತ್ತು ಕಾನೂನು ರೀತಿಯಲ್ಲಿ ವಶಪಡಿಸಿಕೊಳ್ಳಲು ಕ್ರಮ ಜರುಗಿಸಬೇಕೆಂದು ಸೂಚಿಸಿತ್ತು. ನ್ಯಾಯಾಲಯದ ಆದೇಶವನ್ನು ತನಗೆ ಬೇಕಾದಂತೆ ಚಲಾಯಿಸಲು ಪ್ರಯತ್ನಿಸಿ, ಮತ್ತೆ ನ್ಯಾಯಾಲಯದ ಅವಕೃಪೆಗೆ ಒಳಗಾಗಿ, ಲಕ್ಷಾಂತರ ರೂಪಾಯಿಯನ್ನು ನಷ್ಟ ಪರಿಹಾರವಾಗಿ ಆ ರಬ್ಬರ್ ತೋಟದ ಮಾಲಿಕರಿಗೆ ನೀಡಲು ನ್ಯಾಯಾಲಯ ನಿರ್ದೇಶನವನ್ನು ನೀಡಿತ್ತು.

ಹಾಗೆ ನೀಡಿದ ನಿರ್ದೇಶನದ ಅನ್ವಯ ಲಕ್ಷಾಂತರ ರೂಪಾಯಿ ರಾಜ್ಯದ ಬೊಕ್ಕಸಕ್ಕೆ ಒಬ್ಬ ಅಧಿಕಾರಿಯಿಂದಾಗಿ ನಷ್ಟವಾಗುತ್ತಿದೆ. ಆದ್ದರಿಂದ ಅವರ ತಪ್ಪು ನಿರ್ಧಾರದಿಂದ ಆಗಿರುವ ನಷ್ಟವನ್ನು ಅವರ ಕಿಸೆಯಿಂದಲೇ ಭರಿಸುವಂತೆ ರಾಜ್ಯ ಸರಕಾರ ಆದೇಶಿಸಬೇಕು ಎಂದು ಸಾರ್ವಜನಿಕರು ಒತ್ತಡ ತಂದಿದ್ದರೂ ಕೂಡ, ಯಾವುದೇ ಸಮಸ್ಯೆಗಳನ್ನು ಎದುರಿಸದೆ ವೆಂಕಟಸುಬ್ಬಯ್ಯ ನಿವೃತ್ತಿಯನ್ನು ಹೊಂದಿ[...] ಜೊತೆಗೆ ಅವರ ಎಲ್ಲಾ ಸೌಲಭ್ಯಗಳು ಅವರಿಗೆ ದೊರ[...]


ಮನೋಜ್ ಕುಮಾರ್ ಕೊಡಗು ಜಿಲ್ಲೆಯ ಪ[...] ಅರಣ್ಯ ಸಂರಕ್ಷಣಾಧಿಕಾರಿ ಎಂದು ಹೆಸರಿಗೆ ಮಾತ್ರ ಕಾ[ರ್ಯ] ನಿರ್ವಹಿಸುತ್ತಿದ್ದಾರೆ. ಎಲ್ಲಾ ರೀತಿಯ ತೀರ್ಮಾನಗ[ಳನ್ನು] ತೆಗೆದುಕೊಳ್ಳುತ್ತಿರುವುದು ಇದೇ ವೆಂಕಟಸುಬ್ಬಯ್ಯ. ಆಗ[...] ನಿವೃತ್ತಿಯ ನಂತರವೂ ಅವರು ಕೊಡಗಿನಲ್ಲಿ ಪ[...] ಅರಣ್ಯ ಸಂರಕ್ಷಣಾಧಿಕಾರಿಯ ನಿವಾಸದಲ್ಲಿ ಕಾ[...] ನಿರ್ವಹಿಸುತ್ತಿದ್ದಾರೆ. ಕಡತಗಳೆಲ್ಲವನ್ನೂ ವೆಂಕಟಸು[ಬ್ಬಯ್ಯ] ಪರಿಶೀಲಿಸುತ್ತಿದ್ದಾರೆ. ಅವರು ತೆಗೆದುಕೊಂಡ ತೀರ್ಮಾ[ನ] ಈಗ ಮನೋಜ್ ಕುಮಾರ್ ಮೂಲಕ ಚಾಲನೆಯಾಗ[...]

ಜಿಲ್ಲೆಯಲ್ಲಿ ಬಿ.ಸಿ.ಎಫ್ ಆಗಿ ಕಾರ್ಯ ನಿರ್ವಹಿ[...] ಎಡುಕೊಂಡಲು ಎಂಬ ವ್ಯಕ್ತಿ ಜನಸ್ನೇಹಿಯಾಗಿ ಕಾ[ರ್ಯ] ನಿರ್ವಹಿಸುತ್ತಿದ್ದರು. ಹಿಂದಿನ ಸಂಚಿಕೆಯಲ್ಲಿ ಬರ[...] ಬೇಲೂರು ಬಸವನಹಳ್ಳಿ ಮಠಕ್ಕೆ ಸುಮಾರು 150[...] 175 ಎಕ್ರೆ ಅರಣ್ಯ ಪ್ರದೇಶವನ್ನು ಮಂಜೂರು ಮಾ[...] ವಿಚಾರದಲ್ಲಿ ತನ್ನ ಒಪ್ಪಿಗೆಯನ್ನು ನೀಡದಿದ್ದ ಹ[...] ಮನೋಜ್ ಕುಮಾರ್ ಮತ್ತು ಎಡುಕೊಂಡಲು ನ[...] ಉತ್ತಮ ಬಾಂಧವ್ಯ ಇರಲಿಲ್ಲ.

ಈಗ ಈ ಎಡುಕೊಂಡಲುರವರನ್ನು ವರ್ಷದ [...] ಭಾಗದಲ್ಲಿ ಅಂದರೆ ಜನವರಿ 2ರಂದು ಜಿಲ್ಲೆಯ[...] ವರ್ಗಾಯಿಸಲಾಗಿದೆ. ವರ್ಗಾವಣೆ ಆದೇಶ ಬಂದ ದಿನ[...] ಮನೋಜ್ ಕುಮಾರ್‌ರವರು ಒತ್ತಡ ತಂದು ಬಲವಂ[...] ಅಧಿಕಾರವನ್ನು ಈಗಷ್ಟೇ ಡಿ.ಸಿ.ಎಫ್.ಆಗಿ ಬಡ್ತಿ [...] ಐ.ಎಫ್.ಎಸ್. ಅಧಿಕಾರಿ ಸೂರ್ಯರ[...] ಹಸ್ತಾಂತರಿಸಿದ್ದಾರೆ. ತನ್ನ ಆಣತಿಯಂತೆ ಕಾ[ರ್ಯ] ನಿರ್ವಹಿಸುವವರು ಮಾತ್ರ ಜಿಲ್ಲೆಯಲ್ಲಿ ಇರಬೇಕು ಎನ್[...] ಮನೋಜ್ ಕುಮಾರ್‌ರವರ ಕಾರ್ಯಾಚರಣೆಯ[...] ಪ್ರತಿಯೊಬ್ಬರೊಂದಿಗೂ ನಗು ಮುಖದಿಂದ "[...] ಮನೋಜ್‌ಕುಮಾರ್ ಪ್ರಾಮಾಣಿಕ ವ್ಯಕ್ತಿ ಅಲ್ಲ. "[...] ಜನವಿರೋಧಿ ಧೋರಣೆಯನ್ನು ತಳೆದಿರುವವರು. [...] ರಾಜ್ಯದ ಅರಣ್ಯ ಸಚಿವರಾದ ರಮಾನಾಥ್ ರೈಯ[...] ಇನ್ನೂ ಕೂಡ ಮನೋಜ್ ಕುಮಾರ್‌ರವರ ನಿಜ[...] ತಿಳಿಯಲು ಸಾಧ್ಯವಾಗಿಲ್ಲ.


ಇದರ ಫಲವಾಗಿ ದಿಡ್ಡಳ್ಳಿ ಪ್ರಕರಣಕ್ಕೆ ಸಂಬಂಧ[...] ಅಲ್ಲಿಯ ಆದಿವಾಸಿಗಳ ಆರೋಪಕ್ಕೆ ಗುರಿಯಾ[...] ಸೂರ್ಯರವರನ್ನು ಮಡಿಕೇರಿಯಲ್ಲಿ ಡಿ.ಸಿ.ಎಫ್[...] ಪ್ರತಿಷ್ಠಾಪಿಸಿದ್ದಾರೆ.


ಅರಣ್ಯ ಇಲಾಖೆ ಅರಣ್ಯವನ್ನು ಸಂರಕ್ಷಿಸುತ್ತದ[...] ಅಥವ ಅರಣ್ಯವನ್ನು ಲೂಟಿ ಮಾಡುತ್ತಿದೆಯೋ ಎಂಬ[...] ದಿಡ್ಡಳ್ಳಿ ಪ್ರಕರಣ ಮತ್ತು ನೀಲಂಬೂರು ರಬ್ಬರ್ ತೋ[ಟದ] ವಿಚಾರದಲ್ಲಿ ತೆಗೆದುಕೊಂಡಿರುವ ಕ್ರಮವನ್ನು ತುಲನೆ [...] ನೋಡಬಹುದಾಗಿದೆ.




■ ಬಿ.ಎನ್. ಮನು[...]

ಮಳವಳ್ಳಿ: ಕೇಬಲ್ ಕುಮಾರನ ಹಂತಕರು ಅಂದರ್







ಮಂಡ್ಯ ಜಿಲ್ಲೆಯಲ್ಲಿ ಕಳೆದ 10 ದಿನಗಳಲ್ಲಿ ...ಬ್ಬರಿ ನಾಲ್ವರು ಜೆಡಿಎಸ್ ಕಾರ್ಯಕರ್ತರು ...ವಾಗಿ ಹತ್ಯೆಯಾಗಿದ್ದಾರೆ. ಮಳವಳ್ಳಿಯ ಬೆನಮನಹಳ್ಳಿ ...ಲ್ ಕುಮಾರನ ಹತ್ಯೆಯೊಂದಿಗೆ ಶುರುವಾದ ...ಮೃದಂಗ ಮದ್ದೂರಿನ ತೊಪ್ಪನಹಳ್ಳಿ ಮುತ್ತುರಾಜ್, ...ಲ್ ಜೋಡಿಕೊಲೆ ಹಾಗೂ ಕೆ.ಆರ್.ಪೇಟೆಯ ...ಂಕನಹಳ್ಳಿ ಹರೀಶ್ ಕಗ್ಗೊಲೆಯೊಂದಿಗೆ ...ಮುವರೆದಿದೆ. ರಾಜಕೀಯ ವೈಷಮ್ಯದ ಈ ಕೊಲೆಗಳು ... ಜನರನ್ನು ಬೆಚ್ಚಿ ಬೀಳಿಸಿವೆ. ಸಕ್ಕರೆ ನಾಡೆಂಬ ...ಕ್ಯದ ಒಕ್ಕಣೆ ನಿಧಾನಕ್ಕೆ ನೆತ್ತರ ನಾಡಾಗಿ ...ರ್ತನೆಯಾಗುತ್ತಿರುವುದು ದುರ್ದೈವದ ಸಂಗತಿ.

ಕೇಬಲ್ ಕುಮಾರನ ಕಗ್ಗೊಲೆ


...ದ ಡಿಸೆಂಬರ್ 24ರಂದು ಮಳವಳ್ಳಿಯ ಜೆಡಿಎಸ್ ...ನಾಯಕ ಬೆನಮನಹಳ್ಳಿ ಕೇಬಲ್ ಕುಮಾರನನ್ನು ...ರವಾಗಿ ಹತ್ಯೆ ಮಾಡಲಾಗಿತ್ತು. ಈ ಕೊಲೆಯ ಹಿಂದೆ ... ಹಣಕಾಸಿನ ವಿಚಾರವೇ ಹೊರತು ರಾಜಕೀಯ ...ಷ್ಯವಲ್ಲ. ಹೆಚ್.ಡಿ.ಕುಮಾರಸ್ವಾಮಿಯ ಕಟ್ಟಾ ...ಾನಿಯಾಗಿದ್ದ ಕೇಬಲ್ ಕುಮಾರನನ್ನು ಇಬ್ಬರು ...ಪ್ತ ಬಾಲಕರು ಸೇರಿದಂತೆ ಐದು ಮಂದಿ ...ಹಗಲೇ ಬರ್ಬರವಾಗಿ ಕೊಂದು ಪರಾರಿಯಾಗಿದ್ದರು. ...ಲ್ ಕುಮಾರನ ಅಂತಿಮ ದರ್ಶನಕ್ಕೆ ಬಂದಿದ್ದ ...ರಸ್ವಾಮಿ ಹತ್ಯೆ ಆರೋಪಿಗಳನ್ನು ಬಂಧಿಸದಿದ್ದರೆ ...ಳಿಯುವುದಾಗಿ ಎಚ್ಚರಿಕೆ ನೀಡಿದ್ದರು. ರಾಜಕೀಯ ...ಹೆಚ್ಚಾದ್ದರಿಂದ ಎಸ್ಪಿ ಸುಧೀರ್‌ಕುಮಾರ್ ರೆಡ್ಡಿ ಕೇಬಲ್ ...ರನ ಹಂತಕರ ಪತ್ತೆಗೆ ವಿಶೇಷ ತನಿಖಾ ತಂಡ ...ರ್ದರು. ಹಲಗೂರು ಠಾಣೆಯ ಇನ್ಸ್‌ಪೆಕ್ಟರ್ ...ಲವಯ್ಯ ಮತ್ತು ಸಿಬ್ಬಂದಿ ಹಗಲು-ರಾತ್ರಿ ...ರ್ಯಚರಣೆ ನಡೆಸಿ ಈ ಕೊಲೆಯಲ್ಲಿ ಭಾಗಿಯಾಗಿದ್ದ ...ದಿ ಹಂತಕರನ್ನು ಎಡೆಮುರಿ ಕಟ್ಟಿ ಜೈಲಿಗೆ ದಬ್ಬಿದ್ದಾರೆ. ...ಯ ಪ್ರಮುಖ ಆರೋಪಿ ಕೀರ್ತಿಕುಮಾರ್, ಆತನ ...ರಾದ ಕೃಷ್ಣ ರಾಹುಲ್, 17 ವರ್ಷವೂ ತುಂಬದ ...ರಾದ ಪ್ರಮೋದ್, ದರ್ಶನ್ ಎಂಬ ಐವರು ...ಲ್ಲಿ ಮುದ್ದೆ ಮುರಿಯುತ್ತಿದ್ದಾರೆ.

...0 ವರ್ಷ ವಯಸ್ಸಿನ ಕುಮಾರ ಹಲಗೂರಿನ ...ುತ್ತಲ ಹಳ್ಳಿಗಳಿಗೆ ಕೇಬಲ್ ಕನೆಕ್ಷನ್ ಕೊಟ್ಟ ...ದಿಂದ ಕೇಬಲ್ ಕುಮಾರ ಎಂಬ ಹೆಸರು ಅವನಿಗೆ ...ಕೊಂಡಿತ್ತು. ಕುಮಾರಸ್ವಾಮಿಯ ಅಪ್ಪಟ ...ಾನಿಯಾಗಿದ್ದ ಕೇಬಲ್ ಕುಮಾರ ಕುಮಾರಸ್ವಾಮಿ ...ಗಲೆಲ್ಲಾ ಹಾಜರಿ ಹಾಕುತ್ತಿದ್ದ ಕೊಲೆಯಾಗುವ ವಾರದ ...ಷ್ಟೇ ಕುಮಾರಸ್ವಾಮಿಯ 58ನೇ ವರ್ಷದ ...ಹಬ್ಬವನ್ನು ಹಲಗೂರಿನಲ್ಲಿ ಅದ್ದೂರಿಯಾಗಿ ...ಜಿಸಿದ್ದ. 58 ಕೆಜಿ ತೂಕದ ಕೇಕನ್ನು ಕತ್ತರಿಸಿ 58 ...ಯಿಂದ ರಕ್ತದಾನ ಮಾಡಿಸಿದ್ದ. ಹಲಗೂರು ...ಳಿಯಲ್ಲಿ ಪ್ರಭಾವಿ ಜೆಡಿಎಸ್ ಮುಖಂಡನಾಗಿ ...ುತ್ತಿದ್ದ ಕೇಬಲ್ ಕುಮಾರನಿಗೆ 40 ವರ್ಷ ...ದರೂ ಮದುವೆಯಾಗಿರಲಿಲ್ಲ. ಈತನಿಗೆ ಮೂವರು ...ರಿಯರಿದ್ದರು. ಮನೆಕಡೆ ಸಾಕಷ್ಟು ಸ್ಥಿತಿವಂತನಾಗಿದ್ದ ...ರ ಕೇಬಲ್ ದಂಧೆಯಲ್ಲಿ ಸಾಕಷ್ಟು ಹಣ ಮಾಡಿದ್ದ. ...ು 1000ಕ್ಕೂ ಹೆಚ್ಚು ಮನೆಗಳಿಗೆ ಕೇಬಲ್ ಎಳೆದಿದ್ದ ...ವ್ಯವಹಾರ ಕೂಡ ಮಾಡುತ್ತಿದ್ದ. ಹಾಗಾಗಿ ಪಕ್ಷದ ...ಕ್ರಮಕ್ಕೆ ಧಾರಾಳವಾಗಿ ಖರ್ಚು ಮಾಡುತ್ತ ...ರಸ್ವಾಮಿಯ ವಿಶ್ವಾಸಕ್ಕೆ ಪಾತ್ರನಾಗಿದ್ದ.

...ಬಲ್ ಕುಮಾರನಿಗೆ ಹಲಗೂರಿನಲ್ಲಿ ಐದು ಅಂಗಡಿ ...ಗಳು ಹಾಗೂ ಒಂದು ಖಾಲಿ ಸೈಟು ಇತ್ತು. ಈಗ್ಗೆ ...ಗಳ ಹಿಂದಷ್ಟೇ ಅಂಗಡಿ ಮಳಿಗೆಗಳನ್ನು ಕೆಡವಿ ...ಾಗಿ ಬಿಲ್ಡಿಂಗ್ ಕಟ್ಟಲು ಯೋಚಿಸಿದ್ದ. ಅದರಂತೆ ...ಯಲ್ಲಿದ್ದವರನ್ನು ಖಾಲಿ ಮಾಡಿಸಿದ್ದ. ಕೇಬಲ್ ...ರನ ಅಂಗಡಿಯೊಂದರಲ್ಲಿ ಹಲಗೂರಿನ ವಳಗೆರೆ ...ು ಕೀರ್ತಿ ಎಂಬಾತ ಒಂದೂವರೆ ವರ್ಷಗಳಿಂದ ... ಅಂಗಡಿಯೊಂದನ್ನು ನಡೆಸುತ್ತಿದ್ದ. ಕೀರ್ತಿ, ಕೇಬಲ್ ...ರನಿಗೆ ಅಂಗಡಿ ಅಡ್ವಾನ್ಸ್ ಎಂದು 1.50 ಲಕ್ಷ ...ವನ್ನು ಕೊಟ್ಟಿದ್ದ. ಹೊಸದಾಗಿ ಅಂಗಡಿ ಮನೆ ...ಕಟ್ಟಲೆಂದು ಕೀರ್ತಿಯ ಕೋಳಿ ಅಂಗಡಿಯನ್ನು ಖಾಲಿ ...ದ್ದ ಕೇಬಲ್ ಕುಮಾರ ಕೀರ್ತಿ ಅಡ್ವಾನ್ಸ್ ಎಂದು ... 1.50 ಲಕ್ಷ ರೂ.ವನ್ನು ಕೊಟ್ಟಿರಲಿಲ್ಲ. ಕೀರ್ತಿ ... ಕೇಬಲ್ ಕುಮಾರನನ್ನು ಹಣ ನೀಡುವಂತೆ ...ದ್ದ. ಆದರೆ ಆತ ಹಣ ಕೊಡದೆ ಆಟವಾಡಿಸುತ್ತಿದ್ದ. ... ಮೇಲೆ ಅಡ್ವಾನ್ಸ್ ಎಂದು 1.50 ಲಕ್ಷ ಕೊಟ್ಟಿದ್ದ ...ವನಿಗೆ ಕರಾರುಪತ್ರ ಮಾಡಿಕೊಂಡಿರಲಿಲ್ಲ. ಅಡ್ವಾನ್ಸ್ ...ವಿಚಾರವಾಗಿ ಕೇಬಲ್ ಕುಮಾರನಿಗೂ ಕೀರ್ತಿಗೂ ... ಜಗಳ ನಡೆಯುತ್ತಲೇ ಇತ್ತು.

ಈಗ್ಗೆ ಕೆಲ ತಿಂಗಳ ಹಿಂದೆ ಕೇಬಲ್ ಕುಮಾರ ಹಲಗೂರಿನ ಪ್ರಮುಖ ವೃತ್ತದಲ್ಲಿ ನಾಲ್ಕಾರು ಮಂದಿ ಜೊತೆ ನಿಂತಿದ್ದಾಗ ಅಲ್ಲಿಗೆ ಹೋದ ಕೀರ್ತಿ ಅಡ್ವಾನ್ಸ್ ಹಣ ನೀಡುವಂತೆ ಕೇಳಿದ್ದ. ಜನರ ಮುಂದೆ ಕೀರ್ತಿ ಹಣ ಕೇಳಿದ್ದು ಕೇಬಲ್ ಕುಮಾರನಿಗೆ ಸಿಟ್ಟು ತರಿಸಿತ್ತು. ಆಗ ಕೇಬಲ್ ಕುಮಾರ ಕೀರ್ತಿಗೆ ಎರಡೇಟು ಬಿಟ್ಟು ಕಳಿಸಿದ್ದ. ಅಲ್ಲದೆ ಕುಮಾರನ ಹುಡುಗರು ಕೂಡ ಕೀರ್ತಿಗೆ ಹೊಡೆದಿದ್ದರು. ಇದರಿಂದ ಕೀರ್ತಿ ಕುದ್ದು ಹೋಗಿದ್ದ. ಅಷ್ಟೇ ಅಲ್ಲ 'ನಾನು ದುಡ್ಡು ಕೊಡೋದಿಲ್ಲ. ಏನು ಮಾಡ್ತೀಯೋ ಮಾಡ್ಕೋ ಹೋಗು' ಎಂದು ಕೇಬಲ್ ಕುಮಾರ ಕೀರ್ತಿಗೆ ಧಮಕಿ ಹಾಕಿದ್ದ. ಬೆಂಗಳೂರಿನಲ್ಲಿ ಕೊಲೆ ಪ್ರಕರಣವೊಂದರಲ್ಲಿ ಆರೋಪಿಯಾಗಿದ್ದ ಕೀರ್ತಿ ಜಾಮೀನಿನ ಮೇಲೆ ಹೊರಬಂದು ಕೋಳಿ ಅಂಗಡಿ ಕಸುಬಿಗಿಳಿದಿದ್ದ. ಇಂಥಾ ಹಿನ್ನೆಲೆಯ ಕೀರ್ತಿ, ಕುಮಾರನನ್ನು ಮುಗಿಸಲು ತೀರ್ಮಾನಿಸಿದ್ದ.

ಕೀರ್ತಿ ತನ್ನೂರು ವಳಗೆರೆದೊಡ್ಡಿಯಲ್ಲೂ ಕೋಳಿಫಾರಂ ನಡೆಸುತ್ತಿದ್ದ. ಆ ಕೋಳಿಫಾರಂ ಹಿಂಭಾಗದಲ್ಲಿರುವ ಪಟ್ಟಲದಮ್ಮ ದೇವಸ್ಥಾನದ ಬಳಿ ಹಲಗೂರಿನ ಪ್ರಮೋದ್, ದರ್ಶನ್, ಕನಕಪುರದ ರಾಹುಲ್ ಎಂಬ ಮೂವರು


ಸಿಪಿಐ ಶಿವಮಲವಯ್ಯ

ಪೋಲಿ ಗೆಳೆಯರು ಆಗಾಗ್ಗೆ ಗಾಂಜಾ, ಎಣ್ಣೆ ಹೊಡೆಯಲು ಸೇರುತ್ತಿದ್ದರು. ತನ್ನ ಕೋಳಿ ಫಾರಂ ಹಿಂಭಾಗವೇ ಇವರೆಲ್ಲಾ ಸೇರುತ್ತಿದ್ದರಿಂದ ಕೀರ್ತಿಗೂ ಅವರಿಗೂ ಗೆಳೆತನವಾಗಿತ್ತು. ಅದರಲ್ಲಿ ಪ್ರಮೋದ್, ದರ್ಶನ್ ಇಬ್ಬರಿಗೂ 17 ವರ್ಷ ವಯಸ್ಸು, ಸ್ಕೂಲ್ ಡ್ರಾಪ್ ಔಟ್. ಚಿಕ್ಕ ವಯಸ್ಸಿಗೆ ಸಕಲ ದುರ್ಗುಣಗಳನ್ನು ಬೆಳೆಸಿಕೊಂಡು ಪೋಲಿ ಬಿದ್ದುಹೋಗಿದ್ದರು.

ಕೀರ್ತಿ ಒಮ್ಮೆ ಅವರ ಬಳಿ ಕೇಬಲ್ ಕುಮಾರ ತನಗೆ ಕೊಡಬೇಕಿದ್ದ 1.50 ಲಕ್ಷ ಹಣ ಕೊಡದೆ ಹೊಡೆದು ಕಳುಹಿಸಿದ್ದ ವಿಚಾರ ಪ್ರಸ್ತಾಪಿಸಿದ್ದ. ಈ ಸಂದರ್ಭದಲ್ಲಿ ಪ್ರಮೋದ್ ಕೂಡ 'ನನಗೂ ಕುಮಾರ ಸಿಕ್ಕಿದಾಗಲೆಲ್ಲಾ ಬಾಯಿಗೆ ಬಂದಂತೆಲ್ಲಾ ಬಯ್ಯುತ್ತಾನೆ, ಹೊಡೆಯುತ್ತಾನೆ' ಎಂದು ಅಲವತ್ತುಕೊಂಡಿದ್ದ. ಕುಮಾರನಿಗೆ ಚೆನ್ನಾಗೇ ಗೊತ್ತಿದ್ದ ಪ್ರಮೋದ ಚಿಕ್ಕವಯಸ್ಸಿನಲ್ಲೇ ಎಣ್ಣೆ ಹೊಡೆಯೋದು, ಗಾಂಜಾ ಸೇದೋದು ಮಾಡುತ್ತಿದ್ದರಿಂದ ಒಂದೆರಡು ಬಾರಿ ಕೇಬಲ್‌ಕುಮಾರ ಆತನಿಗೆ ಹೊಡೆದು ಬುದ್ಧಿ ಹೇಳಿದ್ದ. ಒಮ್ಮೆ ಬಾರ್‌ವೊಂದರಲ್ಲಿ ಪ್ರಮೋದ್ ಕುಡಿಯುತ್ತಿದ್ದಾಗ ಅಲ್ಲಿಗೆ ಬಂದ ಕೇಬಲ್ ಕುಮಾರ 'ನಿನ್ನ ತಾಯಿ ಒಳ್ಳೆ ಬುದ್ಧಿ ಕಲಿತಿದ್ದರಲ್ಲ ನೀನು ಒಳ್ಳೆಯ ಬುದ್ಧಿ ಕಲಿಯೋದು' ಎಂದು ಮಾತನಾಡಿದ್ದ. ತನ್ನ ತಾಯಿಯನ್ನು ಕುಮಾರ ಕೆಟ್ಟದಾಗಿ ಬೈದದ್ದು ಪ್ರಮೋದನಿಗೂ ಸರಿಕಂಡಿರಲಿಲ್ಲ. ಹೀಗಾಗಿ ಆತ ಕೂಡ ಕುಮಾರನ ಮೇಲೆ ಸಿಟ್ಟು ಮಾಡಿಕೊಂಡಿದ್ದ.

ಕೇಬಲ್ ಕುಮಾರನನ್ನು ಮುಗಿಸಲು ಕೀರ್ತಿ ಸ್ಕೆಚ್ ಹಾಕಿರುವ ಬಗ್ಗೆ ತಿಳಿದ ಪ್ರಮೋದ್ ಅದಕ್ಕೆ ಸಾಥ್ ಕೊಡಲು ಸಿದ್ಧನಾಗಿದ್ದ. ಕೊನೆಗೆ ಈ ಐವರು ಕನಕಪುರದ ದೊಡ್ಡ ಆಲಹಳ್ಳಿ ಗ್ರಾಮದ ತೋಟದ ಮನೆಯೊಂದರಲ್ಲಿ ಸೇರಿ ಕೇಬಲ್ ಕುಮಾರನ ಹತ್ಯೆಗೆ ಪಕ್ಕಾ ಸ್ಕೆಚ್ ಹಾಕಿ ಸಿದ್ಧರಾದರು.

ಖಾರದಪುಡಿ ಎರಚಿ ಕೊಂದ್ರು

ಕೇಬಲ್ ಕುಮಾರನ ಕೊಲೆಗೆ ಡಿಸೆಂಬರ್ 24ರಂದು ಮುಹೂರ್ತವಿಟ್ಟರು. ಹಲಗೂರಿನಿಂದ ಕೇವಲ 2 ಕಿ.ಮೀ. ದೂರದಲ್ಲಿ ಕುಮಾರನ ಊರು ಬೆನಮನಹಳ್ಳಿ ಇದೆ. ಪ್ರತಿ ದಿನ ಕೇಬಲ್ ಕುಮಾರ ಬೆಳಗಿನ ಜಾವ ತನ್ನೂರು ಬೆನಮನಹಳ್ಳಿಯಿಂದ ಹಲಗೂರಿಗೆ ಷಟಲ್ ಆಡಲು ಹೋಗುತ್ತಿದ್ದ. ಈ ದಾರಿಯಲ್ಲೇ ಆತನನ್ನು ಮುಗಿಸಲು ಹಂತಕರು ನಿರ್ಧರಿಸಿ ಸಿದ್ಧರಾದರು. ಅಂದು ಬೆಳಗಿನ ಜಾವ ಕೀರ್ತಿ, ಪ್ರಮೋದ, ದರ್ಶನ್ ಬೈಕ್‌ನಲ್ಲಿ ಹೊರಟರೆ ಕೃಷ್ಣ ಮತ್ತು ರಾಹುಲ್ ಇಂಡಿಕಾ ಕಾರಿನಲ್ಲಿ ಕೇಬಲ್ ಕುಮಾರ ಬರುವುದನ್ನೇ ಕಾಯುತ್ತಾ ಕುಳಿತರು. ಬೆಳಗಿನ ಜಾವ ಕೇಬಲ್ ಕುಮಾರ ಬೈಕ್‌ನಲ್ಲಿ ಹಲಗೂರಿಗೆ ಹೊರಟುಬಂದಾಗ ದಾರಿಯಲ್ಲಿ ಆತನ ಹಿಂದೆ ಬೇರೆಯವರು ಬರುತ್ತಿದ್ದರಿಂದ ಕೊಲೆ ಮಾಡಲು ಸಾಧ್ಯವಾಗಿರಲಿಲ್ಲ. ಷಟಲ್ ಆಡಿಕೊಂಡು ಮತ್ತೆ ತನ್ನೂರು ಬೆನಮನಹಳ್ಳಿಗೆ ವಾಪಸ್ ಬರುತ್ತಾನೆಂದು ತಿಳಿದಿದ್ದ ಹಂತಕರು ಮತ್ತೆ ಅದೇ ದಾರಿಯಲ್ಲಿ ಹೊಂಚು ಹಾಕಿ ಕುಳಿತಿದ್ದರು.

ಬೆಳಗ್ಗೆ 9.20ರ ಸುಮಾರಿಗೆ ಕೇಬಲ್ ಕುಮಾರ ಬೈಕ್‌ನಲ್ಲಿ ಹಲಗೂರಿನಿಂದ ಬೆನಮನಹಳ್ಳಿಗೆ ಹೊರಟಿದ್ದ. ಅಲ್ಲೇ ದಾರಿಯಲ್ಲಿ ಕೃಷ್ಣ ಮತ್ತು ರಾಹುಲ್ ಇಂಡಿಕಾ ಕಾರಿನಲ್ಲಿ ಕಾಯುತ್ತಾ ನಿಂತರೆ, ಇವರಿಂದ 500 ಮೀಟರ್ ದೂರದಲ್ಲಿ ಹುಣಸೆ ತೋಪೊಂದರಲ್ಲಿ ಕೀರ್ತಿ, ಪ್ರಮೋದ್, ದರ್ಶನ್ ಬೈಕ್‌ನಲ್ಲಿ ಕಾಯುತ್ತಾ ಕುಳಿತಿದ್ದರು. ಸರಿಯಾಗಿ 9.30ರ ಸುಮಾರಿಗೆ ಕೇಬಲ್ ಕುಮಾರನ ಬೈಕ್ ದಾರಿಯಲ್ಲಿ ಪ್ರತ್ಯಕ್ಷವಾಗಿದ್ದೇ ತಡ ಕೃಷ್ಣ ಮತ್ತು ರಾಹುಲ್, ಕೀರ್ತಿಗೆ ಸಿಗ್ನಲ್ ಕೊಟ್ಟಿದ್ದಾರೆ. ದರ್ಶನ್ ಬೈಕ್ ಓಡಿಸುತ್ತಿದ್ದರೆ ಪ್ರಮೋದ್ ಮತ್ತು ಕೀರ್ತಿ ಹಿಂಬದಿ ಕುಳಿತಿದ್ದರು. ಕೀರ್ತಿ ಖಾರದ ಪುಡಿ ಹಾಗೂ ಡ್ರ್ಯಾಗರ್ ಹಿಡಿದುಕೊಂಡು ಕುಳಿತಿದ್ದ ಪ್ರಮೋದ್ ಕೈಯಲ್ಲಿ ಡ್ರ್ಯಾಗರ್ ಇತ್ತು. ಕೇಬಲ್ ಕುಮಾರ ಬಂದೊಡನೆ ಕೃಷ್ಣ ಮತ್ತು ರಾಹುಲ್ ಇಂಡಿಕಾ ಕಾರಿನಲ್ಲೇ ಚೇಸ್ ಮಾಡಿಕೊಂಡು ಕುಮಾರ ಬೈಕ್‌ಗೆ ಅಡ್ಡಲಾಗಿ ಕಾರು ನಿಲ್ಲಿಸಿದ್ದರು. ಬೈಕ್‌ನಲ್ಲಿ ಬಂದ ಕೀರ್ತಿ ಖಾರದಪುಡಿಯನ್ನು ಕುಮಾರನ ಕಣ್ಣಿಗೆ ಎರಚಿದ್ದ. ದರ್ಶನ್ ಹಾಗೂ ಪ್ರಮೋದ್ ಡ್ರ್ಯಾಗರ್‌ನಿಂದ ಕೇಬಲ್ ಕುಮಾರನ ಎದೆಗೆ ಚುಚ್ಚಿದ್ದರು. ಕೀರ್ತಿ ಕೂಡ ಕುಮಾರನ ಎದೆ, ಕುತ್ತಿಗೆ, ಹೊಟ್ಟೆಗೆ ನಾಲ್ಕೈದು ಬಾರಿ ಚುಚ್ಚಿದ್ದ. ಆ ಸಮಯಕ್ಕೆ ದಾರಿಯಲ್ಲಿ ಯಾರೋ ಬರುತ್ತಿರುವುದನ್ನು ನೋಡಿದ ಹಂತಕರು ಕುಮಾರ ಸತ್ತು ಬಿದ್ದಿರುವುದನ್ನು ಕನ್‌ಫರ್ಮ್ ಮಾಡಿಕೊಂಡೇ ಅಲ್ಲಿಂದ ಹಲಗೂರು ಮುಖಾಂತರ ಕನಕಪುರ ತಲುಪಿದ್ದರು. ಹಂತಕರ ಮಾರಣಾಂತಿಕ ಏಟಿಗೆ ಕೇಬಲ್ ಕುಮಾರ ಸ್ಥಳದಲ್ಲೇ ಗೋಣು ಚೆಲ್ಲಿದ್ದ.

ಕೃತ್ಯ ಮುಗಿದನಂತರ ಕನಕಪುರದ ಸಾತನೂರು ಸರ್ಕಲ್‌ನಲ್ಲಿ ಭೇಟಿ ಮಾಡಬೇಕೆಂದು ಮೊದಲೇ ಮಾತನಾಡಿಕೊಂಡಿದ್ದರು. ಅದರಂತೆ ಕೀರ್ತಿ, ಪ್ರಮೋದ್, ದರ್ಶನ್ ಬೈಕ್‌ನಲ್ಲಿ ಕೊನ್ನಾಪುರದ ಮೂಲಕ ಹಲಗೂರು ಮೂಲಕ ಸಾತನೂರು ತಲುಪಿದ್ದರು. ಮಾರ್ಗಮಧ್ಯೆ ಹೆಚ್.ಬಸಾಪುರ ಬಳಿ ಕೊಲೆಗೆ ಬಳಸಿದ್ದ ಡ್ರ್ಯಾಗರನ್ನು ಬಂಡೆಯೊಂದರ ಕೆಳಗೆ ಎಸೆದಿದ್ದರು. ಮತ್ತೊಂದು ಡ್ರ್ಯಾಗರನ್ನು ಕೀರ್ತಿ ತನ್ನ ಬಳಿಯೇ ಇಟ್ಟುಕೊಂಡಿದ್ದ. ಇಂಡಿಕಾ ಕಾರಿನಲ್ಲಿದ್ದ ಕೃಷ್ಣ ಮತ್ತು ರಾಹುಲ್ ಕನಕಪುರ ತಾಲ್ಲೂಕಿನ ಕಬ್ಬಾಳು ಹತ್ತಿರವಿರುವ ಕಂಸಾಗರದಲ್ಲಿ ಕಾರು ನಿಲ್ಲಿಸಿ, ಎಲ್ಲರೂ ಸಾತನೂರಿನಲ್ಲಿ ಸೇರಿ ಬೆಂಗಳೂರಿನ ಕಡೆ ಪ್ರಯಾಣ ಬೆಳೆಸಿದ್ದರು.

ಹಂತಕರ ಬಂಧನ

ತನ್ನ ಪಕ್ಷದ ಕಾರ್ಯಕರ್ತ ಕೇಬಲ್ ಕುಮಾರ ಕೊಲೆ ಆಗಿದ್ದಾನೆಂದು ತಿಳಿದ ಕುಮಾರಸ್ವಾಮಿ ಆತನ ಅಂತಿಮ ದರ್ಶನ ಪಡೆದು ಕೊಲೆಗಾರರನ್ನು ಶೀಘ್ರ ಬಂಧಿಸಬೇಕೆಂದು ಎಸ್ಪಿ ಸುಧೀರ್‌ಕುಮಾರ್ ರೆಡ್ಡಿಗೆ ಫೋನ್ ಮೂಲಕ ತಿಳಿಸಿದ್ದರು. ಅದರಂತೆ ಕೇಬಲ್ ಕುಮಾರನ ಹತ್ಯೆ ಆರೋಪಿಗಳ ಬಂಧನಕ್ಕೆ ಎಸ್ಪಿ ಸುಧೀರ್‌ಕುಮಾರ್ ರೆಡ್ಡಿ ಸಿಪಿಐ ಶಿವಮಲವಯ್ಯ ನೇತೃತ್ವದಲ್ಲಿ ಒಂದು ತಂಡ ರಚಿಸಿ ತನಿಖೆಗೆ ಮುಂದಾಗಿದ್ದರು. ಕೇಬಲ್ ಕುಮಾರನಿಗೂ ಕೀರ್ತಿಗೂ ಆಗಾಗ್ಗೆ ಜಗಳ ನಡೆದ ಬಗ್ಗೆ ಮಾಹಿತಿ ಕಲೆಹಾಕಿದ ಸರ್ಕಲ್ ಇನ್ಸ್‌ಪೆಕ್ಟರ್ ಶಿವಮಲವಯ್ಯ ಕೀರ್ತಿಯ ಮೊಬೈಲ್‌ಗೆ ಫೋನ್ ಮಾಡಿದರೆ ಅದು ಸ್ವಿಚ್ಡ್ ಆಫ್ ಆಗಿತ್ತು. ಕೊಲೆಯಲ್ಲಿ ಪ್ರಮೋದ್ ಹಾಗೂ ದರ್ಶನ್ ಎಂಬ ಅಪ್ರಾಪ್ತರ ಪಾತ್ರ ಇರುವುದನ್ನು ಖಚಿತಪಡಿಸಿಕೊಂಡ ಶಿವಮಲವಯ್ಯ ಪ್ರಮೋದ್ ಮೊಬೈಲ್‌ಗೆ ಕಿವಿ ಹಚ್ಚಿದ್ದರು. ಕೊಲೆ ನಡೆದ ಮಾರನೇ ದಿನ ಪ್ರಮೋದ್ ಎಂಬಾತ ಆತನ ತಾಯಿಗೆ ಫೋನ್ ಮಾಡಿ ಕೇಬಲ್ ಕುಮಾರನನ್ನು ಹತ್ಯೆ ಮಾಡಿದ ಸಂದರ್ಭದಲ್ಲಿ ನನ್ನ ಕಾಲಿಗೂ ತೀವ್ರ ಪೆಟ್ಟಾಗಿದೆ ಎಂದಿದ್ದ. ಆಗ ಆತನ ತಾಯಿ ಮಂಡ್ಯ ಆಸ್ಪತ್ರೆಗೆ ಬಾ ತೋರಿಸೋಣ ಎಂದಿದ್ದಳು. ಆಗ ಎಸ್‌ಐ ಶಿವಮಲವಯ್ಯ ತನ್ನೊಂದಿಗೆ ಪೇದೆಗಳಾದ ಪ್ರಶಾಂತ್, ಜಯಕುಮಾರ್, ಪ್ರೇಮ್‌ಕುಮಾರ್‌ನ್ನ ಕರೆದುಕೊಂಡು ಹೋಗಿ ಆರೋಪಿಗಳಾದ ಪ್ರಮೋದ್, ದರ್ಶನ್‌ನನ್ನು ಬಂಧಿಸಿ, ಬಾಯಿ ಬಿಡಿಸಿದಾಗ ತಾವಿಬ್ಬರೂ ಕೀರ್ತಿ, ಕೃಷ್ಣ ರಾಹುಲ್ ಜೊತೆ ಸೇರಿ ಕೇಬಲ್ ಕುಮಾರನ ಹತ್ಯೆ ಮಾಡಿದ್ದೇವೆ ಎಂದು ಬಾಯಿ ಬಿಟ್ಟಿದ್ದರು.

ಕೇಬಲ್ ಕುಮಾರನನ್ನು ಹತ್ಯೆ ಮಾಡುವ ಸಂದರ್ಭದಲ್ಲಿ ಆತ ಕೂಡ ತೀವ್ರ ಪ್ರತಿರೋಧ ತೋರಿದ್ದ. ಕೀರ್ತಿ, ಪ್ರಮೋದ್ ಡ್ರ್ಯಾಗರ್‌ನಿಂದ ಚುಚ್ಚುತ್ತಿದ್ದಾಗ ಕೇಬಲ್ ಕುಮಾರ ಪ್ರಮೋದನ ಕೈಲಿದ್ದ ಡ್ರ್ಯಾಗರ್ ಹಿಡಿದುಕೊಂಡಿದ್ದ. ಈ ಸಂದರ್ಭದಲ್ಲಿ ಪ್ರಮೋದ ಕೆಳಗೆ ಬಿದ್ದಿದ್ದ. ಆಗ ಡ್ರ್ಯಾಗರ್‌ನಿಂದ ಆತನ ಎಡಗಾಲಿಗೆ ಗಾಯವಾಗಿತ್ತು. ಅದಕ್ಕೆ ಚಿಕಿತ್ಸೆ ಪಡೆಯಲು ಪ್ರಮೋದ್, ದರ್ಶನ್ ಮಂಡ್ಯಕ್ಕೆ ಬಂದಾಗ ಸಿಪಿಐ ಶಿವಮಲವಯ್ಯರ ಕೈಗೆ ಸಿಕ್ಕಿಬಿದ್ದಿದ್ದಾರೆ.

ಆದಾಗಿ ವಾರ ಕಳೆಯುವಷ್ಟರಲ್ಲಿ ಮೊಬೈಲ್ ಟವರ್ ಲೊಕೇಷನ್ ಆಧಾರದ ಮೇಲೆ ಸಿಪಿಐ ಶಿವಮಲವಯ್ಯ ಸಾತನೂರು ಸರ್ಕಲ್‌ನಲ್ಲಿ ಡಿಸೆಂಬರ್ 30ರಂದು ರಾತ್ರಿ 11ಗಂಟೆ ಸಮಯದಲ್ಲಿ ಕೇಬಲ್ ಕುಮಾರನ ಹತ್ಯೆಯ ಪ್ರಮುಖ ಆರೋಪಿ ಕೀರ್ತಿ, ಕೃಷ್ಣ ರಾಹುಲ್‌ನನ್ನು ಎಡೆಮುರಿಕಟ್ಟಿ ಎಳೆದು ತಂದಿದ್ದರು. ಆರೋಪಿಗಳ ಬಂಧನದ ತರುವಾಯ ಈ ಕೊಲೆ ಹಣಕಾಸಿನ ಕಾರಣಕ್ಕೆ ನಡೆದಿದೆಯೇ ಹೊರತು ರಾಜಕೀಯ ದ್ವೇಷದಿಂದಲ್ಲ ಎಂಬುದು ಸಾಬೀತಾಗಿದೆಯಾದರೂ ಅದರ ನಂತರ ಘಟಿಸಿದ ರಾಜಕೀಯ ಹತ್ಯೆಗಳಿಗೆ ಅದೇ ಮುನ್ನುಡಿಯಾದದ್ದು ದುರದೃಷ್ಟಕರ.

■ ಮಂಡ್ಯ ನಾಗೇಶ್



ಅನಂತ್-ನಳಿನ್ ನಖರಾ



ಕರಾವಳಿ: ಕೇಸರಿ ಸಂಸದರಿಬ್ಬರ ರಕ್ತಪಿಪಾಸು ರೌಡಿಗಿರಿ!







ಕರಾವಳಿಯ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳು ಕೇಸರಿ ಕೊಳ್ಳಿ ದೆವ್ವಗಳ ಕುಚೋದ್ಯ-ಕುಚೇಷ್ಟೆಗೆ ಅಕ್ಷರಶಃ ಕಂಗಾಲಾಗಿ ಕೂತಿವೆ! ಮಾನವೀಯತೆ, ನೈತಿಕತೆ, ನಾಗರಿಕತೆ ಒಂದೂ ಇಲ್ಲದ ಸಂಘಿ ಸರದಾರರು 'ಜನನಾಯಕ'ರಾಗಿ ಅವತರಿಸಿರುವುದು ಭಯಾನಕವಾಗಿದೆ. ಅಮಾಯಕರನ್ನು ಹಿಂದೂತ್ವದ ಸಂಘರ್ಷ-ಸಂಕಟಕ್ಕೆ ತಳ್ಳಿ ತಾವು ಜಾಕ್‌ಪಾಟ್ ಹೊಡೆಯುತ್ತಿದ್ದಾರೆ ಚಡ್ಡಿ ಸೈತಾನರು. ಹೆಚ್ಚೇನಲ್ಲ, ಕೇವಲ ಆರೆಂಟು ವರ್ಷದ ಹಿಂದಿನತನಕ ಆರ್‌ಎಸ್‌ಎಸ್‌ನ ಬುತ್ತಿ ಮಾಣಿಗಳಾಗಿ ಹಳ್ಳಳ್ಳಿ ಅಂಡಲೆದು ಹಿಂಸಾತ್ಮಕ ಹಿಂದೂತ್ವ ಪ್ರಚಾರ ಮಾಡುತ್ತ ಹೊಟ್ಟೆ ಹೊರೆದುಕೊಳ್ಳುತ್ತಿದ್ದವರೀಗ ಬಿಜೆಪಿಯ ಎಂಪಿ, ಎಮ್ಮೆಲ್ಲೆ, ಮಂತ್ರಿ ಸುಖ ಅನುಭವಿಸುತ್ತ ಧರ್ಮಕಾರಣದ ಫಲಾನುಭವಿಗಳಾಗಿ ಮೆರೆಯುತ್ತಿದ್ದಾರೆ. ಊರೂರಿಗೆ ಬೆಂಕಿ ಹಾಕುವ, ಅಸಹಾಯಕರ ಮೇಲೆ ಹಲ್ಲೆ ಮಾಡುವ ಬಿಜೆಪಿ ಸಂಸದ-ಶಾಸಕರ ಆಟಾಟೋಪ ಮಿತಿಮೀರಿ ಹೋಗಿದೆ.

ಇದಿಷ್ಟು ಪೀಠಿಕೆ ಇಟ್ಟುಕೊಂಡು ವಿಶ್ಲೇಷಿಸಿದರಷ್ಟೇ ದಕ್ಷಿಣ ಕನ್ನಡದ ಭಜರಂಗಿ ಸಂಸದ ನಳಿನ್‌ಕುಮಾರ್ ಕಟೀಲ್ ಮತ್ತು ಉತ್ತರ ಕನ್ನಡದ ಹಿಂಜಾವೇ ಎಂಪಿ ಮಾಣಿ ಅನಂತಕುಮಾರ್ ಹೆಗಡೆಯ 'ದೇಶೋದ್ಧಾರ'ದ ಕಲ್ಯಾಣ ಕಾರ್ಯಕ್ರಮಗಳು ಎಳೆಎಳೆಯಾಗಿ ಅರ್ಥವಾಗುತ್ತದೆ. ಹೊಸ ವರ್ಷದ ಮೊದಲ ದಿನದ ಬೆಳಗ್ಗೆ ನಾಲಾಯಕ್ ನಳಿನ್ ತಾನು ಎಂಪಿಯಾಗಿ ಪ್ರತಿನಿಧಿಸುವ ಜಿಲ್ಲೆಗೆ ಬೆಂಕಿ ಹಾಕುವ ಪಾತಕ ಪ್ರವಚನ ಬಿಗಿದಿದ್ದಾನೆ.

ಮರುದಿನ ರಾತ್ರಿಯಷ್ಟೊತ್ತಿಗೆ ಉತ್ತರ ಕನ್ನಡದ ಅನಂತಕುಮಾರ್ ಹೆಗಡೆ ಕರ್ತವ್ಯದ ಮೇಲಿದ್ದ ವೈದ್ಯರಿಬ್ಬರ ಮೇಲೆ ಅಮಾನುಷ ಮುಷ್ಠಿ ಪ್ರಹಾರ ನಡೆಸಿ ನೆತ್ತರು ಹರಿಸಿ ಸಂತೃಪ್ತನಾಗಿದ್ದಾನೆ!! ಹಿಂದೂತ್ವದ 'ಹರಿಕಾರ' ಬಿಜೆಪಿಯನ್ನು ವಿಶ್ವಗುರು ಮಾಡುವ ಧ್ಯೇಯೋದ್ದೇಶದ ಮೋದಿ ಮಾಮು ಮತ್ತು ಚಡ್ಡಿ ಡಾನ್‌ಗಳು ಇಡೀ ಜಗತ್ತಿಗೇ ಶಿಷ್ಟಾಚಾರದ ಪಾಠ ಮಾಡುತ್ತಿದ್ದರೆ, ಇತ್ತ ಕರಾವಳಿಯಲ್ಲಿ ಅವರದೇ ಪಕ್ಷದ ಎಂಪಿಗಳು ಬರ್ಬರ-ಅಮಾನುಷ ಗೂಂಡಾಗಿರಿ ಮಾಡುತ್ತಿದ್ದಾರೆ!! ಸಂಘ ಪರಿವಾರದ ಅಸಲೀ ಗುಣಧರ್ಮದ ಪ್ರತೀಕದಂತೆ ಕಂಗೊಳಿಸುತ್ತಿದ್ದಾರೆ ನಳಿನ್ ಮತ್ತು ಅನಂತ್ ಎಂಬ ಅವಳಿ ಪುಂಡರು!

ನಳಿನ್ ರಾಜ್ಯ ಬಿಜೆಪಿಯ ಅಧ್ಯಕ್ಷ ಗಾದಿಗೆ ಪೈಪೋಟಿ ನಡೆಸಿದ ತೂಕದಾರನಾದರೆ, ಅನಂತ್ ರಾಜ್ಯ ಬಿಜೆಪಿಯ ಹಾಲಿ ಭಾರದ ಉಪಾಧ್ಯಕ್ಷ! ಇಬ್ಬರೂ ಬಿಜೆಪಿಯ ಕಮ್ಯುನಲ್ ರಾಜಕಾರಣದ ಮುಂಚೂಣಿಯ ಸೀನಿಯರ್ ಚಿತಾವಣೆಗಾರರು. ಮುಸ್ಲಿಮರೇ ಇಬ್ಬರ ಹೊಟ್ಟೆಪಾಡಿನ ಕರ್ಮಕಾರಣಕ್ಕೆ ಆಧಾರ. ನಳಿನ್ ಎರಡನೇ ಬಾರಿ ಸಂಸದನಾಗಿದ್ದಾನೆ; ಅನಂತ್‌ನದು ಇದು ಐದನೇ ಅವಧಿ. ಇಬ್ಬರೂ ಕ್ಷೇತ್ರಕ್ಕೆ ಒಳ್ಳೆಯದಾಗುವ ಪೈಸೆ ಕೆಲಸವೂ ಮಾಡಿಲ್ಲ, ಪ್ರಗತಿ-ಅಭಿವೃದ್ಧಿ-ಸಂಸದಗಿರಿಯ ಹೊಣೆಗಾರಿಕೆಯ ಗಂಧವೇ ಇಲ್ಲದ ಒಂಥರಾ ಗಾಂಪಸಂಘ ಈ ಭಂಡ ಸಂಸದದ್ವಯರು ಸ್ವಂತ ಜೀರ್ಣೋದ್ಧಾರ ಮಾತ್ರ ಸಕತ್ತಾಗೇ ಮಾಡಿಕೊಂಡಿದ್ದಾರೆ; ಮಾಡಿಕೊಳ್ಳುತ್ತಿದ್ದಾರೆ. ಅನಂತ್ ಲಾಗಾಯ್ತಿನಿಂದ ಕ್ಷೇತ್ರದ ಕೃಷಿಕ, ತೋಟಿಗ-ಮೀನುಗಾರರಿಗೆಲ್ಲ ಅಂಗೈಲೆ ಸ್ವರ್ಗ ತೋರಿಸುತ್ತ ಇಂಟರ್‌ನೆಟ್ ಯೋಜನೆಗಳ ಆವಿಷ್ಕಾರ ನಡೆಸುತ್ತಿದ್ದಾನೆ. ಈತ ಕಳೆದ ಒಂದೂವರೆ ದಶಕದಲ್ಲಿ ಹೊಡೆದ ಭೋಂಗಿಗೆ ಲೆಕ್ಕವೇ ಇಲ್ಲ!

ನಳಿನ್‌ನ ಖಾಲಿ ಬುರುಡೆಗೆ ಕ್ಷೇತ್ರದ ಅಭಿವೃದ್ಧಿಯ ಯೋಚನೆಯೇ ಹೊಳೆಯುವುದಿಲ್ಲ. ಎತ್ತಿನ ಹೊಳೆ ಯೋಜನೆ ವಿರೋಧಿಸಿ ಕಾಂಗ್ರೆಸ್‌ನ ಬಾಯಿ ಬಡುಕ ಜನಾರ್ದನ ಪೂಜಾರಿ ಬ್ರಿಗೇಡ್ ಹೊರಡಿಸಿದ ರಥಯಾತ್ರೆ ಹೈಜಾಕ್ ಮಾಡಿದ ನಳಿನ್ ಈ ಯೋಜನೆ ತನ್ನದೇ ಪಕ್ಷದ ಸದಾನಂದ ಗೌಡ ಸಿಎಂ ಆಗಿದ್ದಾಗ ಆರಂಭವಾಗಿತ್ತೆಂಬ ಸತ್ಯ ಮರೆಮಾಚಿ ಜನರಿಗೆ ವಂಚಿಸುತ್ತಿದ್ದಾನೆ. ಆಗ ಬಾಯಿಮುಚ್ಚಿಕೊಂಡಿದ್ದ ನಳಿನ್ ಈಗ ಎತ್ತಿನಹೊಳೆ ಯೋಜನೆ ವಿರುದ್ಧ ಬೀದಿಗಿಳಿದಿರುವುದರ ಹಿಂದೊಂದು ರಹಸ್ಯ ಅಡಗಿದೆ! ಮುಂಬರುವ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಸ್ವ-ಪಕ್ಷದ ಚಡ್ಡಿ ದೊರೆ ಕಲ್ಲಡ್ಕನ ಬಲ ಕುಗ್ಗಿಸಿ ತನ್ನದೇ ಹಿಂಬಾಲಕರನ್ನು ಶಾಸಕರನ್ನಾಗಿ ಮಾಡಿಕೊಳ್ಳುವ ಹಿಡನ್ ಅಜೆಂಡಾ ನಳಿನ್‌ದು. ದಕ್ಷಿಣ ಕನ್ನಡದ ಯಾವ್ಯಾವ ಅಸೆಂಬ್ಲಿ ಕ್ಷೇತ್ರದಲ್ಲಿ ಮುಸ್ಲಿಮರು ಹೆಚ್ಚಿದ್ದಾರೋ ಅಲ್ಲೆಲ್ಲ ನಳಿನ್ ಎಲೆಕ್ಷನ್ ತಯಾರಿ ಶುರು ಹಚ್ಚಿಕೊಂಡಿದ್ದಾನೆ. ಸದ್ಯಕ್ಕಾತನ ಕಣ್ಣಿರುವುದು ಮಂತ್ರಿ ಯು ಟಿ. ಖಾದರ್‌ರ ಮಂಗಳೂರು (ಉಳ್ಳಾಲ) ಕ್ಷೇತ್ರದ ಮೇಲೆ.

ಖಾದರ್ ಕಿತಾಪತಿಯಿಂದಾಗಿಯೇ ಉಳ್ಳಾಲದಲ್ಲಿ ಹಿಂದೂ ಸೇನಾನಿಗಳ ಹತ್ಯೆ, ಹಲ್ಲೆ ನಡೆಯುತ್ತಿದೆ ಎಂದು ಬೊಬ್ಬೆ ಹೊಡೆಯುತ್ತಿದ್ದಾನೆ ನಳಿನ್. ಹಿಂದೊಮ್ಮೆ ದನ ಕಡಿವವರ ತಲೆ ಕಡಿಯಿರಿ ಎಂದು ಕ್ರಿಮಿನಲ್ ಮಾತಾಡಿದ್ದ ಈ ಹಿಂದೂ ಹರಾಮಿ ಈಗ ಉಳ್ಳಾಲದಲ್ಲಾಗುತ್ತಿರುವ ಹಿಂದೂಗಳ ಮೇಲಿನ ಹಲ್ಲೆಗೆ ಕೇರಳದ ಭಯೋತ್ಪಾದಕ ಸಾಬಿಗಳ ನಂಟಿದೆ ಎಂದು ಕೋಮು ಬೆಂಕಿ ಹಾಕಿ ಮೈ ಕಾಯಿಸಿಕೊಳ್ಳುವ ಯೋಚನೆಯಲ್ಲಿದ್ದಾನೆ. ಆತನ ಮಾತುಗಾರಿಕೆಯ ಓಘ ಗಮನಿಸಿದರೆ ನಳಿನ್‌ಗೆ ಕೋಮು ದಳ್ಳುರಿಯ ಹಪಾಹಪಿ ಹತ್ತಿದೆ ಎಂಬುದು ಎಂಥವರಿಗೂ ಅರ್ಥವಾಗುತ್ತದೆ!

ಎರಡು ತಿಂಗಳ ಹಿಂದೆ ಉಳ್ಳಾಲದ ಪಜೀರ್‌ನ ಕಾರ್ತಿಕ್‌ರಾಜ್ ಎಂಬ ಯುವಕನ ಕೊಲೆ ಕೇಸನ್ನು ಅ[illegible] ಮಾಡಿಕೊಂಡು ನಳಿನ್ ಈಗ 'ಯುದ್ಧ'ಕ್ಕೆ ಧುಮುಕಿದ್ದಾನೆ. ಕೊಲೆ ನಡೆದಾಗ ಮಂತ್ರಿ ಖಾದರ್ ಅದನ್ನು ಬಲವಾಗಿ ಖಂಡಿಸಿದ್ದಾರೆ. ನಿಷ್ಪಕ್ಷಪಾತ ತನಿಖೆಗೆ ಹೇಳಿದ್ದಾರೆ. ತನಿಖೆಯಲ್ಲಿ ಮೂಗು ತೂರಿಸುವ ದರ್ದೂ ಆತನಿಗೇನೂ ಇರಲಿಲ್ಲ. ನಡೆಯುತ್ತಿರುವ ತನಿಖೆ ಬಗ್ಗೆ ಕಾರ್ತಿಕ್‌ರಾಜ್‌ನ ಕುಟುಂಬಸ್ಥರಾಗಲಿ, ಹೆತ್ತವರಾಗಲಿ ಈವರೆಗೆ ಆಕ್ಷೇಪವನ್ನೂ ಎತ್ತಿರಲಿಲ್ಲ. ಅಷ್ಟಕ್ಕೂ ಈ ಪ್ರಕರಣದ ತನಿಖಾಧಿಕಾರಿ ಅಶೋಕ್ ಎಂಬ ಪೊಲೀಸ್ ಇನ್ಸ್‌ಪೆಕ್ಟರ್ ಮೃ[illegible] ಕಾರ್ತಿಕ್‌ರಾಜ್‌ಗೆ ವರಸೆಯಲ್ಲಿ ಮಾವನೂ ಆಗುತ್ತಾರೆ. ಸಿಐಡಿ ತನಿಖೆಗೆ ಮೊದಮೊದಲು ಕಾರ್ತಿಕ್‌ರಾಜ್‌ನ ಮನೆಯವರಿಂದ ಒಪ್ಪಿಗೆಯೂ ಸಿಕ್ಕಿರಲಿಲ್ಲ. ಕಾರ್ತಿಕ್‌ಯ[illegible] ತಂದೆ ಉಮೇಶ್ ಬಿಜೆಪಿಯ ತಾಪಂ ಸದಸ್ಯರಾಗಿದ್ದರು[illegible]

ಹೇತ್ಲಾಂಡಿ ಹೆಗಡೆ ಸಂಧಾನ

ಶಿರಸಿಯ ಟಿಎಸ್‌ಎಸ್ ಆಸ್ಪತ್ರೆಯೇ ಒಂದು ಶಾಪದ ಕೂಸು. ಇದರ ಒಡೆತನ ಸ್ವಯಂಘೋಷಿತ ಸಹಕಾರಿ ಸರದಾರ ಶಾಂತಾರಾಮ ಹೆಗಡೆಯ ಖಾಸಗಿ ಟ್ರಸ್ಟ್ ಕೈಯಲ್ಲಿದೆ! ಅಮಾಯಕ ಅಡಿಕೆ ತೋಟಿಗ ಸದಸ್ಯರ ಪ್ರೋತ್ಸಾಹಧನ ಏಕಪಕ್ಷೀಯವಾಗಿ ಕಸಿದುಕೊಂಡು ಕಟ್ಟಲಾಗಿರುವ ಈ ಆಸ್ಪತ್ರೆ ವಿವಾದ ಸುಪ್ರೀಂಕೋರ್ಟ್‌ನಲ್ಲಿದೆ. ಬಡತೋಟಿಗರಿಗೆ ದುಬಾರಿ ಟಿಎಸ್‌ಎಸ್ ಆಸ್ಪತ್ರೆಯಿಂದ ಪ್ರಯೋಜನವೇನಿಲ್ಲ, ಡೊನೇಷನ್-ಕ್ಯಾಪಿಟೇಷನ್‌ನ ಮೆಡಿಕಲ್ ಕಾಲೇಜು ಸ್ಥಾಪಿಸುವ ದುರಾಸೆಯಿಂದ ಶಾಂತ್ಹೆಗ್ಡೆ ಸ್ಥಾಪಿಸಿದ್ದ ಸದ್ರಿ ಆಸ್ಪತ್ರೆಯೀಗ ಆತನಿಗೇ ಹೊರೆಯಂತಾಗಿದೆ. ಆಸ್ಪತ್ರೆ ಬಾಸ್ ತಾನೆಂದು ಬೀಗುವ ಶಾಂತ್ಹೆಗ್ಡೆಗೆ ಅಲ್ಲಿಯ ಆಗುಹೋಗು ಮೇಲೆ ಹಿಡಿತವೇ ಇಲ್ಲ!




ಕಾಲು ಮುರಿದುಕೊಂಡಿದ್ದ ತಾಯಿಯನ್ನು ಸರಿಯಾಗಿ ವೈದ್ಯರು ಉಪಚರಿಸುತ್ತಿಲ್ಲ ಎಂಬ ಆಕ್ರೋಶದಿಂದ ನಡುರಾತ್ರಿ ಟಿಎಸ್‌ಎಸ್ ಆಸ್ಪತ್ರೆಗೆ ತನ್ನ ಗೂಂಡಾ ಗೆಳೆಯರೊಂದಿಗೆ ನುಗ್ಗಿದ್ದ ಸಂಸದ ಅನಂತ್ ಹೆಗಡೆ ಇಬ್ಬರು ವೈದ್ಯರು ಮತ್ತೊಬ್ಬ ಸಿಬ್ಬಂದಿ ಮೇಲೆರಗಿ ಮುಖ-ಮೂತಿ ಎನ್ನದೆ ಮುಷ್ಠಿ ಪ್ರಹಾರ ನಡೆಸಿ ರಕ್ತ ಹರಿಸಿ ಹಾರಾಡಿದ್ದಾನೆ. ಆತನ ಪುಂಡಾಟಕ್ಕೆ ಆಸ್ಪತ್ರೆಯಲ್ಲಿದ್ದ ಜನರು-ಮಹಿಳಾ ನರ್ಸ್‌ಗಳೆಲ್ಲ ಬೆಚ್ಚಿಬಿದ್ದಿದ್ದಾರೆ. ದೇಶದ ಸಾರ್ವಭೌಮತೆಯ ದೇಗುಲವಾದ ಪಾರ್ಲಿಮೆಂಟ್‌ನ ಪ್ರತಿನಿಧಿಯೊಬ್ಬ ಮಾಡಬಹುದಾದ ವರ್ತನೆಯಾ ಇದು? ಇದೇನಾ ಹಿಂದೂ ಸಂಸ್ಕೃತಿ? ಇದೇನಾ ದೇಶಭಕ್ತಿ? ಇದೇನಾ ಸಂಘ ಪರಿವಾರ ಕಲಿಸಿದ ಸಂಸ್ಕಾರ? ಎಂದೆಲ್ಲ ಅನಂತನ ಅನಾಚಾರ ಕಂಡವರು ಕ್ಯಾಕರಿಸಿ ಉಗಿದಿದ್ದಾರೆ.

ವೈದ್ಯರನ್ನು ಮನಸೋಇಚ್ಛೆ ಥಳಿಸಿ ತಾಯಿಯನ್ನು ಆಸ್ಪತ್ರೆಯಿಂದ ಕರೆದುಕೊಂಡ ಸಂಸದ ಸಾಹೇಬ ಅಪರಾತ್ರಿ ಆಸ್ಪತ್ರೆ ಅಧ್ಯಕ್ಷ ಶಾಂತ್ಹೆಗ್ಡೆಗೆ ತನ್ನ 'ಕರ್ಮಕತೆ' ಹೇಳಿದ್ದಾನೆ. ಯಾವುದೇ ರೀತಿಯ ಕಂಪ್ಲೇಂಟು, ಉಲ್ಟಾ ಬೆಳವಣಿಗೆ ಆಗದಂತೆ ತಡೆಯುವ ತಾಕೀತು ಮಾಡಿದ್ದಾನೆ. ಇತ್ತ ಸಂಸದನ ಪಂಚ್‌ನಿಂದ ಅಪ್ಪಚ್ಚಿಯಾಗಿದ್ದ ಡಾಕ್ಟರ್‌ಗಳು ಕಾನೂನುಕ್ರಮಕ್ಕೆ ಸ್ಕೆಚ್ ಹಾಕುತ್ತಿದ್ದಂತೆಯೇ ಶಾಂತ್ಹೆಗ್ಡೆ ಪಂಚೆ ಎತ್ತಿಕಟ್ಟಿ ಲಗುಬಗೆಯಲ್ಲಿ ಆಸ್ಪತ್ರೆಯ ಪಡಸಾಲೆಗೆ ಬಂದಿದ್ದಾನೆ. ಪೊಲೀಸ್ ದೂರು ಕೊಡದಂತೆ ವೈದ್ಯರಿಗೆ ಒತ್ತಡ ಹಾಕಿದ್ದಾನೆ. ನೀವ[illegible] ಕಂಪ್ಲೇಂಟು ಕೊಟ್ಟರೆ ಎಂಪಿ ಕೌಂಟರ್ ದೂರು ಕೊಡ್ತಾರೆ. ದೊಡ್ಡ ಭಾನ್ಗಡಿಯಾ[illegible] ಆಸ್ಪತ್ರೆ ಹೆಸರು ಹಾಳಾಗ್ತದೆ ಎಂದು ಗೋಗರೆದಿದ್ದಾನೆ. ಇಡೀ ರಾತ್ರಿ ವಿಫಲ ಸಂಧಾ[illegible] ನಡೆಸಿದ್ದಾನೆ. ಡಾಕ್ಟರ್‌ಗಳು ಮತ್ತು ಸಂಸದನನ್ನು ಕೂಡ್ರಿಸಿಕೊಂಡು ರಾಜಿ ಪಂಚಾಯ[illegible] ಬೆಳಗಿನತನಕ ನಡೆಸಿದ್ದಾನೆ.

ಬೆಳಗಾಗುವ ಹೊತ್ತಿಗೆ ಶಿರಸಿ ಮಾರ್ಕೆಟ್ ಯಾರ್ಡ್ ಠಾಣೆಯಲ್ಲಿ ದೂರು-ಪ್ರ[illegible] ದೂರುಗಳು ದಾಖಲಾಗಿದೆ. ಸೂರ್ಯ ಪ್ರಖರನಾಗಿ ನೆತ್ತಿಗೆ ಬರುವ ವೇಳೆಗೆ ದೂರುಗಳ[illegible] ವಾಪಸ್ ಆಗಿದೆ. ಉಸ್ತುವಾರಿ ಮಂತ್ರಿ ದೇಶಪಾಂಡೆ ನಂಟಿನ ಕಾಂಗ್ರೆಸ್‌ನ ಪ್ರೊ[illegible] ಪುಢಾರಿಯೂ ಆಗಿರುವ ಶಾಂತ್ಹೆಗ್ಡೆ ವೈದ್ಯರು ಕಂಪ್ಲೇಂಟು ವಾಪಸ್ ಪಡೆವಂತೆ ಮಾಡಿದ್ದಾ[illegible] ಶಾಂತ್ಹೆಗ್ಡೆಗೆ ಸಂಸದ ಅನಂತ್‌ನ ಮಾನ ಕಾಪಾಡೋದಕ್ಕಿಂತ ಹೆಚ್ಚಾಗಿ ತನ್ನ ಬಂಡವಾ[illegible] ಬಯಲಾಗೋದರಿಂದ ಬಚಾವಾಗಬೇಕಾಗಿತ್ತು. ಮೊದಲೇ ತೋಟಿಗ[illegible] ವಂಚಿಸಿದ ಆರೋಪ; ನಂತರ ಸುಲಿಗೆ ಆಸ್ಪತ್ರೆ ಎಂಬ ಕಳಂಕ. ಆಮೇ[illegible] ಬಡರೋಗಿಗಳ ಜೀವ ತೆಗೆಯುವ ಅಡ್ಡೆ ಎಂಬ ಅಡ್ಡ ಹೆಸರು.

ಇಂಥ ಕುಖ್ಯಾತಿಯ ರಾಹುಕಾಲದಲ್ಲಿ ಸಂಸದ-ವೈದ್ಯರ ಭಾನ್ಗಡಿ[illegible] ಪುರಾಣ ಹಬ್ಬಿದರೆ ಶಾಂತ್ಹೆಗ್ಡೆ ಶಿರಸಿ ಪೇಟೇಲಿ ಮುಖ ಹೊತ್ತು[illegible] ತಿರುಗೋದಾದರೂ ಹೇಗೆ, ಪಾಪ? ಹಾಗಾಗಿ ಆತ ತನ್ನ ಆಸ್ಪತ್ರೆಯ[illegible] ಸಿಬ್ಬಂದಿ-ವೈದ್ಯರ ದುಮ್ಮಾನ ದೊಡ್ಡದಾಗದಂತೆ ನೋಡಿಕೊಂಡಿದ್ದಾನ[illegible] ಈ ಆಸ್ಪತ್ರೆ ಅಧ್ಯಕ್ಷ ಅದೆಂಥ ಹೊಣೆಗೇಡಿ ಹೇತ್ಲಾಂಡಿ ನೋಡಿ. ಈ[illegible] ಮುಂದೆ ನಿಂತು ತನ್ನ ಆಸ್ಪತ್ರೆಯ ನಿರಪರಾಧಿ ವೈದ್ಯರ ಕಾಪಾಡಬೇಕಿತ್ತು[illegible] ಅವರ ಪರವಾಗಿ ತಾನೆ ಪೊಲೀಸ್ ದೂರು ಕೊಟ್ಟು ನ್ಯಾಯ[illegible] ಒದಗಿಸಬೇಕಿತ್ತು, ತನಗಿರುವ ರಾಜಕೀಯ ತಾಕತ್ತಿನಿಂದ ಪುಂಡ ಸಂಸದ[illegible] ಪಾತಕ ಬಯಲುಗೊಳಿಸುವ ನೈತಿಕ-ಕೆಚ್ಚು ತೋರಿಸಬೇಕಿತ್ತು.

ಸಂಸದ ಅನಂತ್‌ನ ಆರ್ಭಟಕ್ಕೆ ಥರಗುಟ್ಟುವ ಶಾಂತ್ಹೆಗ್ಡೆ ತನ್ನ ಆಸ್ಪತ್ರೆಯ ವೈದ್ಯರನ್ನ[illegible] ಬಲಿ ಪಡೆದಿರುವುದು ದುರಂತ! ಹೊಡೆತ ತಿಂದ ವೈದ್ಯರು-ಹೊಡೆದ ಸಂಸದ ಮತ್ತು[illegible] ಆಸ್ಪತ್ರೆ ಆಡಳಿತ ಮಂಡಳಿಯವರೆಲ್ಲರೂ ಹವ್ಯಕ ಬಂಧುಗಳು. ಈ ಬ್ರಾಹ್ಮಣ ಬಡಿದಾಟವೀಗ[illegible] ನೈಚ್ಯಾನುಸಂಧಾನದಲ್ಲಿ ಮುಗಿದಿದೆ. ಆಸ್ಪತ್ರೆ-ಸಂಸದ ಮತ್ತು ವೈದ್ಯರ ವಿಶ್ವಾಸಾರ್ಹ[illegible] ಮಣ್ಣು ಪಾಲಾಗಿದೆ!



ಡ್ಡಿಯನ್ನೂ ಒಮ್ಮೆ ಉಮೇಶ್ ಮನೆಗೆ ನಳಿನ್ ೂಯ್ದು ನಾಟಕ ಮಾಡಿದ್ದ.

ಇದು ಕೇಸ್‌ನ ವಾಸ್ತವ ಸ್ಥಿತಿ. ಆದರೆ ಜಗಳಗಂಟ ೆಗೆ ಸದ್ರಿ ಕೊಲೆ ತನಿಖೆಯಲ್ಲಿ ಖಾದರ್ ಕೈವಾಡದ ನವಾಗಿದೆ. ಕಳೆದ ರವಿವಾರ (ಜನವರಿ 1) ತನ್ನ ಾಲಕರಿಂದ ಒಂದಿಷ್ಟು ಚೆಡ್ಡಿಗಳು, ಇನ್ನೊಂದಿಷ್ಟು ಿಗರು; ಮತ್ತೊಂದಿಷ್ಟು ಹಿಂದೂ ಹಿತರಕ್ಷಣಾ ್‌ನವರನ್ನು ಸೇರಿಸಿಕೊಂಡು ಕಾರ್ತಿಕ್‌ರಾಜ್ ಮನೆ ಳದಿಂದಲೇ ನಳಿನ್ ಕೊಣಾಜೆ ಪೊಲೀಸ್ ಠಾಣೆಯತ್ತ ವಣಿಗೆ ಹೋಗಿದ್ದಾನೆ. ಠಾಣೆಯೆದುರು ಜಮೆಯಾದ ಹಿಂಬಾಲಕರ ಸಣ್ಣ ಗುಂಪು ಕಂಡಿದ್ದೇ ನಳಿನ್‌ಗೆ ಡ್ಡ ಭಾಷಣ ಬಿಗಿವ ಹುಕ್ಕಿ ಬಂದಿದೆ. ಎರಡು ಗಳಾದರೂ ಕಾರ್ತಿಕ್‌ರಾಜ್ ಕೊಲೆಗಾರರ ಯಲಾಗಿಲ್ಲ; ಇದರಲ್ಲಿ ಸ್ಥಳೀಯ ಶಾಸಕರ ಕೈವಾಡವಿದೆ. ಲದಲ್ಲಿ ಹಿಂದೂಗಳಿಗೆ ನೆಮ್ಮದಿಯಿಲ್ಲ ಎಂಬರ್ಥದ ಬಿಟ್ಟ ನಳಿನ್‌ನ ಹಿಂಬಾಲಕರ ಚಪ್ಪಾಳೆ ಹೆಚ್ಚಾದಂತೆ ಗೆ ಮೇಲಿನ ಹಿಡಿತವೇ ಕಡಿಮೆ ಆಗಿಹೋಗಿದೆ!

ನಳಿನ್‌ನ ಪೊಕ್ಕು ವೀರಾವೇಶ ಜೋರಾಗಿದೆ. ರ್ತಿಕ್‌ರಾಜ್‌ನ ಕೊಲೆ ಮಾಡಿದವರ ಬಂಧನಕ್ಕೆ 10 ಕಾಲಾವಕಾಶ ಪೊಲೀಸ್ ಇಲಾಖೆಗೆ ಕೊಡುತ್ತಿದ್ದೇವೆ.... ೋಪಿಗಳನ್ನು ಈ ಗಡುವಲ್ಲಿ ಹಿಡಿಯದಿದ್ದರೆ ದಕ್ಷಿಣ ಕ್ಕೆ ಬೆಂಕಿ ಹಾಕ್ತೇವೆ... ಅದು ನಮ್ಮಿಂದ ಸಾಧ್ಯವಿದೆ...!!" ು ನಳಿನ್ ಪಕ್ಕಾ ಬೀದಿ ರೌಡಿಯಂತೆ ಹಾರಾಡಿದ್ದಾನೆ. ಸಂಸದನಾಗಿ ಕೊಲೆ ತನಿಖೆ ಸರಿಯಾದ ದಾರಿಯಲ್ಲಿ ಯುವಂತೆ ಮಾಡುವ ಅವಕಾಶ ನಳಿನ್‌ಗೆ ಹಲವಿದೆ; ದ್ರದಲ್ಲಿ ಆತನದೇ 'ಹಿಂದೂ ಸರ್ಕಾರ್' ಅಸ್ತಿತ್ವದಲ್ಲಿದೆ. ಲ್ಲ ಬಳಸಿಕೊಳ್ಳೋದು ಬಿಟ್ಟು ಸಾರ್ವಜನಿಕವಾಗಿ ಗೆ ಬೆಂಕಿ ಹಾಕುವ ಚಿತಾವಣೆಯ ಮಾತು ಆತ ದ್ದಾನೆ. ಅದೂ ಪೊಲೀಸ್ ಸ್ಟೇಷನ್ ಎದುರೇ ರಾಡಿದ್ದಾನೆ. ಅಲ್ಲಿಗೆ ನಳಿನ್ ತಾನು ಪ್ರತಿನಿಧಿಸುವ ಗೆ ಬೆಂಕಿ ಹಾಕುವ 'ದೇಶಪ್ರೇಮಿ' ಹಿಂದೂವಾದಿ ುದು ಪಕ್ಕಾ ಆಗಿಹೋಗಿದೆ!!

ಸಂಸದನಾಗಿದ್ದುಕೊಂಡು ಕ್ರಿಮಿನಲ್ ಮಾತುಗಾರಿಕೆ ದ ನಳಿನ್‌ನ ಸಮಾಜಘಾತುಕ ಬುದ್ಧಿ ಬಗ್ಗೆ ವ್ಯಾಪಕ -ಟಿಪ್ಪಣಿ ಬಾಣಗಳು ದಶದಿಕ್ಕಿನಿಂದ ಹಾರಿಬಂತು. ಒಂಚೂರು ಕಂಗಾಲಾದ ನಳಿನ್ ತನ್ನ ಯೋಚನೆ ಯದ್ದಲ್ಲ... ಮಾತಿನ ಓಘ ಹಾಗಿತ್ತು, ಕ್ಷಮಿಸಿ ಎಂದು ದ್ದಾನೆ. ಆದರೆ ನಳಿನ್‌ನ ಅಸಲಿ ಗುಣ-ಸ್ವಭಾವ ವರು ಆತನದು ಬಾಯ್ತಪ್ಪಿದ ಮಾತಲ್ಲ; ಬುದ್ಧಿಪೂರ್ವಕ ಕ ಎಂದೇ ವ್ಯಾಖ್ಯಾನಿಸುತ್ತಿದ್ದಾರೆ. ಹಿಂದೊಮ್ಮೆ ಆತ ರದೇ ಭಂಡಾಟ ಪುತ್ತೂರು ಪೊಲೀಸ್ ಠಾಣೆ ಎದುರು ರಾತ್ರಿಯೇ ನಡೆಸಿದ್ದ; ಆಗಾತನಿಗೆ ಸ್ಥಳೀಯ ಚೆಡ್ಡಿ ಿಯಾಗಿದ್ದ ಮಲ್ಲಿಕಾ ಪ್ರಸಾದ್ ಭಂಡಾರಿ, ಆಕೆಯ ಂಥ ಮಸಲತ್ತಿನ ಮಾತುಗಾರ ಪತಿ ಡಾ. ಪ್ರಸಾದ್ ಾರಿ ಸಾಥ್ ಕೊಟ್ಟಿದ್ದರು. ನಳಿನ್‌ನ ಇತಿಹಾಸ-ಗೋಳ ಗಮನಿಸಿದರೆ ಆತನ ಒಳಮನಸ್ಸಿನಲ್ಲಿ ದಕ್ಷಿಣ ಕ್ಕೆ ಕಿಚ್ಚು ಹಚ್ಚಿ ಚಂದ ನೋಡುವ ತುರಿಕೆಯಿರುವುದು ಆಗುತ್ತದೆ!! ಎಂಪಿಗಿರಿ ಬಲದೊಂದಿಗೆ ಬೀದಿರಂಪ ದಿ ಮೈಲೇಜ್ ಪಡೆಯುವ ಚಟ ನಳಿನ್‌ಗೆ ಕಾಯಂ ಹೋಗಿರುವುದು ಆತನ ಗೆಲ್ಲಿಸಿದ ದಕ್ಷಿಣ ಕನ್ನಡ ದೌರ್ಭಾಗ್ಯವೇ ಸರಿ!

ಉತ್ತರ ಕನ್ನಡದಲ್ಲಾಗುತ್ತಿರುವ ಬಿಜೆಪಿ ಸಂಸದ ಅನಂತಕುಮಾರ್ ಹೆಗಡೆಯ ಗುದುಮುರಿಗೆ ಆಘಾತ ಮತ್ತೂ ಘನಘೋರವಾಗಿದೆ! ಆತ ಎದುರು ಸಿಕ್ಕ ಯಾರಿಗೆ ಬೇಕಿದ್ದರೂ ಹೊಡೆದು ಮೋಕಳಿಕ್ ಆಗಬಲ್ಲ ಹಸಿಹಸೀ ಹರಾಮಿ ಗುಣ-ಸ್ವಭಾವದ ಸಂಸದ ಸಾಹೇಬನೆಂದೇ ಜಿಲ್ಲೆಯಲ್ಲಿ ಕುಖ್ಯಾತನಾಗಿ ಹೋಗಿದ್ದಾನೆ. ಅನಂತನದು ಒಂಥರಾ ಅಂಡರ್‌ವರ್ಲ್ಡ್ ಡಾನ್ ಶೈಲಿ. ಎಲ್ಲರೂ ಆತನ ಎದುರು ವಿಧೇಯರಾಗಿ ನಿಲ್ಲಬೇಕು. ಆತನ ಇಚ್ಚೆಯನರಿತು ಹೆಜ್ಜೆ ಹಾಕಬೇಕು; ಆಜ್ಞೆ ತಕ್ಷಣ ಪಾಲಿಸಬೇಕು ಇಲ್ಲದಿದ್ದರೆ ಗ್ರಹಚಾರ ಕೆಡುತ್ತದೆ. ಆತ ಸ್ವ-ಪಕ್ಷದ ಜಿಲ್ಲಾಧ್ಯಕ್ಷನೇ ಆಗಿರಲಿ, ಸಹವರ್ತಿ ಶಾಸಕನೇ ಆಗಿರಲಿ, ಸಾಮಾನ್ಯ ಕಾರ್ಯಕರ್ತನೇ ಇರಲಿ ಅಥವಾ ಅಧಿಕಾರಿ, ವೈದ್ಯ ಯಾರೇ ಆಗಿರಲಿ





ಅನಂತ್‌ನ ಪಿತ್ಥ ಕೆರಳಿತೆಂದರೆ ಅವರ ಮುಖ-ಮೂತಿ ಪಾಕೀಟಾಗುವುದು ಖಾತ್ರಿ!!!

ಅನಂತನ ಒಂದೂವರೆ ದಶಕದ ಸಂಸದಗಿರಿ ಪರ್ವದಲ್ಲಿ ಆತನಿಂದ ಹೊಡೆಸಿಕೊಂಡು ರಕ್ತ ಸುರಿಸಿದವರು, ಒದೆಸಿಕೊಂಡು ನೋವು ಮಾಡಿಕೊಂಡವರು, ಕಪಾಳಮೋಕ್ಷ ಮಾಡಿಸಿಕೊಂಡವರ ದೊಡ್ಡದೊಂದು ಪಟ್ಟಿಯೇ ಇದೆ! ಜಾತ್ಯತೀತರೆಂದರೆ, ಅಪ್ಪನಿಲ್ಲದೆ ಹುಟ್ಟಿದ ಬೇವರ್ಸಿಗಳು ಎಂದು ಬೊಗಳುವ ಈ ಹಿಂದೂ ಮುಂದಾಳು ತನ್ನ ಸಂಸ್ಕಾರ-ಸಂಸ್ಕೃತಿ ಅದೆಂಥ ಗಲೀಜು ಗಟಾರವೆಂಬುದನ್ನು ಹಲವು ಬಾರಿ ಸಾಬೀತುಮಾಡಿಕೊಂಡಿದ್ದಾನೆ. ಸಾಬರನ್ನು ಬೈಯ್ಯುವುದೇ ಎಂಪಿಗಿರಿ ಕರ್ತವ್ಯ ಎಂದುಕೊಂಡಿರುವ ಅನಂತ ದೇಶಭಕ್ತಿ ಪ್ರಾಮಾಣಿಕತೆ ಅರಿಯಬೇಕೆಂದರೆ, ಆತನ ಮತ್ತಿಘಟ್ಟದ ಅರಣ್ಯ ಕಬಳಿಸಿ ನಿಂತ ಅಡಿಕೆ ತೋಟ, ಐಷಾರಾಮಿ ಜೀವನ, ಮೊನ್ನೆಯಷ್ಟೇ ಗೃಹಪ್ರವೇಶವಾದ ಸಿರ್ಸಿಯ ಬಂಗಲೆ, ಬೋಗಸ್ ಬ್ಯಾಂಕ್ ಸಾಲ, ಹೆಂಡತಿ ಯಜಮಾನಿಕೆಯ ಕದಂಬ ಚಾರಿಟೇಬಲ್ ಟ್ರಸ್ಟ್‌ಗಳನ್ನೊಮ್ಮೆ ಸುತ್ತು ಹೊಡೆದು ಬರಬೇಕು; ಅಷ್ಟು ಪರಿಶುದ್ಧ ಪಾರದರ್ಶಕ, ಪ್ರಾಮಾಣಿಕ ಉತ್ತರ ಕನ್ನಡದ ಸಂಸದ!!

ಅನಂತನ ಪೂರ್ವಾಶ್ರಮದ ಗರಡಿಯೇ ಗೂಂಡಾಗಿರಿಯದು. ಜಾತಿಯಲ್ಲಿ ಬ್ರಾಹ್ಮಣನಾದರೂ ಈತ ಪ್ರವೃತ್ತಿಯಲ್ಲಿ ಖತರ್‌ನಾಕ್ ಕ್ಷತ್ರಿಯ. ಹಿಂದೂ ಜಾಗರಣಾ ವೇದಿಕೆ ಘಂಟರ್‌ನಾಗಿ ಅನಂತ ಮಾಡಿದ ಹಿಂಸಾಕಾಂಡ ಹೇಳತೀರದು. ಆಗ ಸಾಬಿಯೊಬ್ಬನಿಗೆ ಇರಿದು ಕೊಂದ ಕೇಸ್‌ನ ಹೀರೋ ಅನಂತನಾಗಿದ್ದ; ಆತನ ಅಕೌಂಟ್‌ನಲ್ಲಿ ಕ್ರಿಮಿನಲ್ ಕಮ್ಯುನಲ್ ಕೇಸ್ ಎಷ್ಟಿತ್ತೆಂದು ಬಹುಶಃ ಆತನಿಗೇ ಗೊತ್ತಿರಲಿಲ್ಲ, ಎಂಪಿಯಾದ ನಂತರ ಒಂದೊಂದೇ ಕೇಸಲ್ಲಿ ಮುಕ್ತಿ ಕಾಣುತ್ತ ಬಂದ ಅನಂತ ಒರಿಜಿನಲ್ ಪುಂಡಾಟ ಮಾತ್ರ ನಿಲ್ಲಿಸಲೇ ಇಲ್ಲ! ಭಟ್ಕಳ 1990ರ ದಶಕದಲ್ಲಿ ಸತತ ಒಂದು ವರ್ಷ ಹೊತ್ತಿ ಉರಿಯಲು ಅನಂತನ ಕೊಡುಗೆ ಅಪಾರ.

ಭಟ್ಕಳವನ್ನು 'ಕರ್ಮ' ಕ್ಷೇತ್ರ ಮಾಡಿಕೊಂಡು ಭೂಗತ ಮತಾಂಧ ಕಾರ್ಯಾಚರಣೆ ನಡೆಸುತ್ತಿದ್ದಾಗ ಆತನಿಗೆ ಆಶ್ರಯ ಕೊಟ್ಟಿದ್ದು ಡಾ. ಚಿತ್ತರಂಜನ್ ಎಂಬ ಹಿಂದೂ ಮುಂದಾಳು. ಆತನನ್ನು ಭಟ್ಕಳ ಶಾಸಕನ ಮಾಡಲು ಸದ್ರಿ ಅನಂತ ಅದೆಷ್ಟು ರಕ್ತ ಹರಿಸಿದ್ದನೋ, ಅದೆಷ್ಟು ಬೆಂಕಿ ಹಚ್ಚಿದ್ದನೋ? ಡಾ. ರಂಜನ್‌ರೇ ಮುಂದಾಗಿ ನಿಂತು ಅನಂತನಿಗೆ ರಾಜಕೀಯ ದೀಕ್ಷೆ ಕೊಟ್ಟು ಹತರಾಗಿ ಹೋದರು. ಬಿಜೆಪಿಯೇ ಕೇಂದ್ರದಲ್ಲಿ ಅಧಿಕಾರದಲ್ಲಿದ್ದರೂ, ಅನಂತ ಸತತವಾಗಿ ಪಾರ್ಲಿಮೆಂಟಿಗೆ ಗೆದ್ದು ಹೋದರೂ ಡಾ. ರಂಜನ್ ಕೊಲೆ ರಹಸ್ಯ ಬೇಧಿಸಲು ಸಿಬಿಐನಿಂದಲೂ ಆಗಲೇ ಇಲ್ಲ. ಅದೊಂದು ಪತ್ತೆಯಾಗದ 'ಸಿ'-ರಿಪೋರ್ಟ್ ಕೇಸಾಗಿ ಕಾಲಗರ್ಭ ಸೇರಿಹೋಗಿದೆ. ಆದರೆ ಡಾ. ರಂಜನ್‌ರ ಪ್ರಥಮ ಪುಣ್ಯತಿಥಿಯಿಂದ ಸತತ ನಾಲ್ಕೈದು ತಿಥಿಗಳಂದು




ಭಟ್ಕಳದ ಗೋಡೆಗಳ ಮೇಲೊಂದು 'ಮಹತ್ವದ ಪೋಸ್ಟರ್' ರಾರಾಜಿಸಿತ್ತು. ಅದರಲ್ಲಿ ಏನಿರುತ್ತಿತ್ತು ಗೊತ್ತಾ? "ಡಾ. ಚಿತ್ತರಂಜನ್ ಕೊಲೆಗಾರ- ಅನಂತಕುಮಾರ್ ಹೆಗಡೆ-ಎಂಪಿ" ಎಂದಿರುತ್ತಿತ್ತು! ಇವತ್ತಿಗೂ ಈ ಪೋಸ್ಟರ್ ಮತ್ತು ರಂಜನ್ ಹತ್ಯೆ ರಹಸ್ಯ ನಿಗೂಢವಾಗೇ ಇದೆ. ಮಜಾ ಎಂದರೆ, ವಿರೋಧ ಪಕ್ಷದವರೂ ಈ ಬಗ್ಗೆ ಬುದ್ಧಿಪೂರ್ವಕವಾಗೇ ತಲೆ ಕೆಡಿಸಿಕೊಳ್ಳುತ್ತಿಲ್ಲ!! ಡಾ. ರಂಜನ್‌ರ ಮುದಿ ತಂದೆಯೂ ಅನಂತನ ಅನೈತಿಕ-ಅವಾಂತರದ ಬಗ್ಗೆ ಅಲವತ್ತುಕೊಂಡೇ ಹೋದದ್ದು ದುರಂತವೇ ಸರಿ!!

ತನ್ನ ಎದುರಾಳಿಗಳಿಗೆ ಹೊಡೆದು-ಬಡಿದು-ಹಲ್ಲೆ ಮಾಡಿ- ಬೆದರಿಕೆ ಹಾಕಿಯೇ ನಿಯಂತ್ರಿಸುವ ಭಯಾನಕ ತಂತ್ರಗಾರಿಕೆ ಅನಂತ್ ಲಾಗಾಯ್ತಿನಿಂದಲೂ ಪಾಲಿಸಿಕೊಂಡು ಬಂದಿದ್ದಾನೆ. ಯಾರಿಗಾದರೂ ಹೊಡೆದು ರಕ್ತ ಹರಿಸದಿದ್ದರೆ ಆತನಿಗೆ ಉಂಡ ಅನ್ನ ಅರಗುವುದೇ ಇಲ್ಲ. ಆತನಿಂದ ಬಾರಿಸಿಕೊಂಡ ಬಡಪಾಯಿ ಸಾರ್ವಜನಿಕರು ಹೆದರಿ ಹೊರಗೆಲ್ಲೂ ಹೇಳಿದ್ದೇ ಕಮ್ಮಿ. ಕಂಡವರೂ ದೊಡ್ಡ ಸುದ್ದಿ ಮಾಡಲಿಲ್ಲ. ಆದರೆ ಅನಂತ ಮೊದಲ ಬಾರಿ ಸಂಸದನಾದ ಕೆಲವೇ ಕೆಲವು ದಿನದಲ್ಲಿ ಅಂದು ಜಿಲ್ಲಾ ಬಿಜೆಪಿ ಅಧ್ಯಕ್ಷನಾಗಿದ್ದ, ಇಂದಿನ ಯಲ್ಲಾಪುರದ ಕಾಂಗ್ರೆಸ್ ಶಾಸಕ ಶಿವರಾಮ ಹೆಬ್ಬಾರ್‌ಗೆ ಕಪಾಳ ಮೋಕ್ಷ ಮಾಡಿ ಪ್ರಸಿದ್ಧನಾಗಿದ್ದ.

ಅಂದು ಆತನ ಎದುರು ಸೋತಿದ್ದ ಜೆಡಿಎಸ್ ಅಭ್ಯರ್ಥಿಯೂ ಈಗ ಗತಿಯಿಲ್ಲದೆ ಅನಂತನ ಪಾದಕ್ಕೆ ಬಿದ್ದಿರುವ ಜಿಲ್ಲಾ ಕಾಂಗ್ರೆಸ್ ವಕ್ತಾರನೂ ಆಗಿರುವ ಪ್ರಮೋದ್ ಹೆಗಡೆಗೂ ಭೀತಿ ಮೂಡಿಸಿದ್ದ. ಕಾನಳ್ಳಿ ಎಂಬ ಇಂಜಿನಿಯರ್ ಸರಿಯಾಗಿ ಪಾಲು ಕೊಡುವುದಿಲ್ಲವೆಂದು ಒದ್ದಿದ್ದ ಅನಂತ್ ಕಾರವಾರದ ಬಿಜೆಪಿ ಲೀಡರ್ ಬಿರ್ಕೋಡಿಕರ್ ಎಂಬ ಚಾರ್ಟರ್ಡ್ ಅಕೌಂಟೆಂಟ್‌ಗೆ ರಕ್ತ ಬರುವಂತೆ ಹಲ್ಲೆ ಮಾಡಿದ್ದ ಮುಂಡಗೋಡಿನಲ್ಲಿ ಎದುರಾಳಿ-ಮಾಜಿ-ಶಾಸಕ ವಿ.ಎಸ್. ಪಾಟೀಲನ ಹಿಂಬಾಲಕನೊಬ್ಬನಿಗೆ ಥಳಿಸಿದ್ದ. ಬಿಜೆಪಿಯ ಹಲವು ಪಾರ್ಟಿ ಮೀಟಿಂಗ್‌ಗಳಲ್ಲಿ ಅನಂತ ಕುರ್ಚಿ-ಟೇಬಲ್ ಎತ್ತಿ ಎಸೆದು ರ್‍ಯಾಂಬೋ ಕಾಳಗ ಮಾಡಿ ಸುದ್ದಿಯಾಗಿದ್ದ. ಒಂದು ಕಾಲದಲ್ಲಿ ಅನಂತನ ಶಿಷ್ಯನಾಗಿದ್ದ, ಈಗ ವೈರಿಯಾಗಿರುವ ಮಾಜಿ ಮಂತ್ರಿ ಶಿವಾನಂದ ನಾಯ್ಕ್ ಮತ್ತು ಶಿರಸಿ ಶಾಸಕ ಕಮ್ ಆಜನ್ಮ ಸ್ವ-ಜಾತಿ ಶತ್ರು ಕಾಗೇರಿ ಹೆಗಡೆಗಳಿಗೆ ಅನಂತನ ಮುಷ್ಠಿ ಕಾಳಗದ ಭಯ ಇವತ್ತಿಗೂ ಕಾಡುತ್ತಲೇ ಇದೆ. ಕಾಗೇರಿ-ಅನಂತ್ಮಾಣಿಯ ಕ್ರಿಮಿನಲ್ ಕೇಸ್-ಪೊಲೀಸ್ ಕೇಸ್‌ನ ಬೇನಾಮಿ ಸಮರ ಈಗಲೂ ಚಾಲ್ತಿಯಲ್ಲಿದೆ!!

ತಾನು ಸಂಸದಗಿರಿಗೆ ಸ್ಪರ್ಧಿಸಿದಾಗ ಶಿವರಾಮ್ ಹೆಬ್ಬಾರ್ ತನಗೆ ಬಿಜೆಪಿ ಟಿಕೆಟ್ ಸಿಗಲಿಲ್ಲ ಎಂಬ ಅಸೂಯೆಯಿಂದ ಸೋಲಿಗೆ ಸೆಣಸಿದ್ದನೆಂಬ ಸಿಟ್ಟಿಂದ ಆತನ ಕೆನ್ನೆಗೆ ಬಾರಿಸುವ ಮೂಲಕ ಸಂಸದಗಿರಿಯ ಮಲ್ಲಯುದ್ಧದ ಬೋಣಿಗೆ ಮಾಡಿದ್ದ ಅನಂತ್ ಕಳೆದ ಸೋಮವಾರ (2.1.17) ತಡರಾತ್ರಿ ಇಬ್ಬರು ವೈದ್ಯರು ಮತ್ತು ಒಬ್ಬ ಆಸ್ಪತ್ರೆ ಸಿಬ್ಬಂದಿಗೆ ಮುಖ-ಮುಸುಡೆನ್ನದೆ ಮನಸೋ ಇಚ್ಛೆ ಹೊಡೆದು ಗಾಯ ಮಾಡಿ ರಕ್ತ ಹರಿಸಿ ಕೇಕೆ ಹಾಕಿದ್ದಾನೆ. ಅದು ರಾತ್ರಿ ಸುಮಾರು 11ರ ಸಮಯ. ಶಿರಸಿಯ ಹುಸಿ ಹೈಟೆಕ್ ಆಸ್ಪತ್ರೆ ಎನ್ನಲಾದ ಟಿಎಸ್‌ಎಸ್ ಆಸ್ಪತ್ರೆಗೆ ತನ್ನ ಮೂರ್‍ನಾಲ್ಕು ಸಹಚರರೊಂದಿಗೆ ಅನಂತ್ ನುಗ್ಗಿದ್ದಾನೆ. ಅಲ್ಲಿದ್ದ ತನ್ನ ತಾಯಿಯನ್ನು ವೈದ್ಯರು

⇨12



ಸಂಸದ ಅನಂತನ ಮುಷ್ಟಿ ಕಾಳಗ.....

ಕುಷ್ಟಗಿ: ಸೂಡಿ ವಕೀಲರ 'ಜೆಡಿಎಸ್' ಕೊಸರಾಟ



ನಾಗಪ್ಪ ಸೂಡಿ



ಅಮರೇಗೌಡ ಬಯ್ಯಾಪುರ



ದೊಡ್ಡನಗೌಡ



ಕೆ.ಶರಣಪ್ಪ

ಕುಷ್ಟಗಿ ತಾಲೂಕಿಗೆ ಈಗ ರಾಜಕೀಯ ಜ್ವರವೇರಿದೆ. 2018ರ ಎಮ್ಮೆಲ್ಲೆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಅಮರೇಗೌಡ ಬಯ್ಯಾಪೂರ, ಬಿಜೆಪಿಯಿಂದ ಕೊರಡಕೇರಾ ದೊಡ್ಡನಗೌಡ ತಮ್ಮ ರಾಜಕೀಯ ಶಕ್ತಿ ಪ್ರದರ್ಶನಕ್ಕೆ ಸಜ್ಜಾಗಿದ್ದಾರೆ. ಜೆಡಿಎಸ್‌ನಿಂದ ಯಾರು ಸ್ಪರ್ಧಿಸಲಿದ್ದಾರೆ ಎಂಬುದಿನ್ನೂ ಯಕ್ಷಪ್ರಶ್ನೆಯಾಗಿ ಕಾಡುತ್ತಿದೆ. ಕುಷ್ಟಗಿಯಲ್ಲಿ ಕಾಂಗ್ರೆಸ್ ತನ್ನದೇ ಆದ ಪ್ರಭಾವ ಹೊಂದಿದೆ. ಈಗಲೂ ಆ ಪ್ರಭಾವ ಮುಕ್ಕಾಗದೆ ಉಳಿದುಕೊಂಡಿದೆ. ಯಾಕೆಂದರೆ ಕಾಂಗ್ರೆಸ್ ಪಕ್ಷದಿಂದ ಹನುಮಗೌಡ ಪಾಟೀಲ್ ಕೊರಡಕೇರಾರವರು ಶಕ್ತಿಯುತ ರಾಜಕೀಯ ಮಾಡಿದ್ದರು. ಹನುಮಗೌಡ ಕೋರಡಕೇರಾ ನಾಲ್ಕು ಸಾರಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಎರಡು ಸಾರಿ ಶಾಸಕರಾಗಿ ಆಯ್ಕೆಯಾಗಿ ಎರಡು ಸಾರಿ ಸೋಲು ಉಂಡಿದ್ದರು. ಹಾಗೆಯೇ ಅಮರೇಗೌಡ ಮತ್ತು ಮಾಜಿ ಶಾಸಕ ಹಸನಸಾಬ ದೋಟಿಹಾಳ ತಲಾ ಎರಡು ಸಾರಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಒಂದು ಸೋಲು, ಒಂದು ಗೆಲುವು ಕಂಡಿದ್ದಾರೆ. ಕಾಂಗ್ರೆಸ್ ವಿರುದ್ಧ ಇಲ್ಲಿ ರಾಜಕೀಯ ಮಾಡಿದವರೆಂದರೆ ಕೆ.ಶರಣಪ್ಪ ವಕೀಲರು ಮಾತ್ರ. 40 ವರ್ಷ ಜನತಾ ಪರಿವಾರದ ಮುಖಂಡರಾಗಿ, 1994ರಲ್ಲಿ ಶಾಸಕರಾಗಿ ಆಯ್ಕೆಯಾಗಿ ಎಚ್‌ಕೆಡಿಪಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. 40 ವರ್ಷಗಳ ಈ ಜನತಾ ಪರಿವಾರದ ನಂಟಿಗೆ ವಿದಾಯ ಹೇಳಿ ಇತ್ತೀಚೆಗೆ ಯಡಿಯೂರಪ್ಪ ಉಪಸ್ಥಿತಿಯಲ್ಲಿ ಬಿಜೆಪಿ ಸೇರಿಕೊಂಡಿದ್ದರು. ಈ ನಡುವೆ ಜೆಡಿಎಸ್‌ಗೆ ಹೊಸ ಶಕ್ತಿ ತುಂಬುವ ಸಲುವಾಗಿ ವೃತ್ತಿಯಲ್ಲಿ ವಕೀಲರೂ, ತಾಲೂಕಿನ ಬಹುಸಂಖ್ಯಾತ ಪಂಚಮಸಾಲಿ ಜಾತಿಯ ಅಖಿಲ ಭಾರತ ಕೂಡಲಸಂಗಮ ಪೀಠದ ತಾಲೂಕು ಅಧ್ಯಕ್ಷರಾದ ಸೂಡಿ ವಕೀಲರು ಈ ಸಲ ಜೆಡಿಎಸ್‌ನಿಂದ ಸ್ಪರ್ಧಿಸುವ ಉಮೇದಿನಲ್ಲಿದ್ದಾರೆ.

ಸೂಡಿ ವಕೀಲರ ಹಿಸ್ಟರಿ ಗೊತ್ತಾ?

ಕುಷ್ಟಗಿ ತಾಲೂಕಿನ ಯರಗೇರಾ ಗ್ರಾಮದವರಾದ ಸೂಡಿ ವಕೀಲರು 1980ರ ದಶಕದಲ್ಲಿ ಜಯಪ್ರಕಾಶ ನಾರಾಯಣರ ತತ್ವಸಿದ್ಧಾಂತಗಳಿಗೆ ಮಾರುಹೋಗಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಜೊತೆಗೂಡಿ ಜನತಾ ಪಕ್ಷಕ್ಕಾಗಿ ದುಡಿಯಲು ಶುರು ಮಾಡಿದವರು. ಉತ್ತರ ಕರ್ನಾಟಕ ಭಾಗದಲ್ಲಿ ಪಕ್ಷ ಸಂಘಟಿಸಲು ದೇವೇಗೌಡರಿಗೆ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿದ್ದರು. 1989 ಮತ್ತು 1994ರಲ್ಲಿ ಕೆ.ಶರಣಪ್ಪನವರ ಪರವಾಗಿ ದುಡಿದು ಅವರನ್ನು ಶಾಸಕರನ್ನಾಗಿ ಮಾಡಲೂ ಶ್ರಮಿಸಿದ್ದುಂಟು. ಶರಣಪ್ಪನವರೊಂದಿಗೆ ಭಿನ್ನಾಭಿಪ್ರಾಯ ಉಂಟಾಗಿ 2004 ಮತ್ತು 2008ರಲ್ಲಿ ಬಿಜೆಪಿಯ ದೊಡ್ಡನಗೌಡನ ಪರವಾಗಿ ಕೆಲಸ ಮಾಡಿ ಆತ ಶಾಸಕನಾಗಲು ಸಾಥ್ ಕೊಟ್ಟಿದ್ದರು. ಹೀಗೆ ತಮ್ಮ ರಾಜಕೀಯ ಬದುಕಿನುದ್ದಕ್ಕೂ ಬೇರೆಯವರ ಗೆಲುವುಗಳಿಗೆ ಹೆಗಲು ಕೊಡುತ್ತಲೇ ಬಂದ ಸೂಡಿ ವಕೀಲರು 2013ರಲ್ಲಿ ಮಾಜಿ ಮಂತ್ರಿ ಶ್ರೀರಾಮುಲು ಕಟ್ಟಿದ ಬಿಎಸ್‌ಆರ್ ಪಕ್ಷಕ್ಕೂ ತಾಲೂಕು ಅಧ್ಯಕ್ಷನಾಗಿ ದುಡಿದಿದ್ದರು. ಆ ಚುನಾವಣೆಯಲ್ಲಿ ಬಿಎಸ್‌ಆರ್ ಅಭ್ಯರ್ಥಿ ರಾಜಶೇಖರ ಗೋನಾಳ 17 ಸಾವಿರ ಮತ ಪಡೆಯುವಲ್ಲಿ ಸೂಡಿ ವಕೀಲರ ಪಾತ್ರವೂ ಉಂಟು.

ಹೀಗೆ ತಾಲೂಕಿನಲ್ಲಿ 30 ವರ್ಷಗಳಿಂದ ರಾಜಕೀಯ ರಂಗದಲ್ಲಿದ್ದೂ ಅಧಿಕಾರ ಏರುವವರಿಗೆ ಮೆಟ್ಟಿಲಾದರೆ ಹೊರತು ತಾನೇ ಅಧಿಕಾರ ಏರಲೇ ಇಲ್ಲ. ಹೀಗಾಗಿ ಈ ಸಲ ಜೆಡಿಎಸ್ ಪಕ್ಷದ ಅಭ್ಯರ್ಥಿಯಾಗಲು ಅವರು ತಯಾರಿ ನಡೆಸಿದ್ದು ದೇವೇಗೌಡ ಮತ್ತು ಕುಮಾರಸ್ವಾಮಿಯವರೊಂದಿಗೆ ಸಂಪರ್ಕದಲ್ಲಿದ್ದಾರೆ. ಕುಷ್ಟಗಿ ತಾಲೂಕಿನಲ್ಲಿ 30,000ದಷ್ಟಿರುವ ಪಂಚಮಸಾಲಿಗರ ನಾಯಕನೆಂದು ಬಿಂಬಿಸಿಕೊಂಡು, ಆರು ಬಾರಿ ವಿಧಾನಸಭಾ ಚುನಾವಣೆಯಲ್ಲಿ ಜನತಾ ಪರಿವಾರದಿಂದ ಸೋತು ಸುಣ್ಣವಾದ ಕೆ.ಶರಣಪ್ಪ ಈಗ ಬಿಜೆಪಿ ಸೇರಿಕೊಂಡು ದೊಡ್ಡನಗೌಡ ಪಾಟೀಲನನ್ನು ಗೆಲ್ಲಿಸಲು ಟೊಂಕ ಕಟ್ಟಿ ನಿಂತಿರುವ ಸಂದರ್ಭದಲ್ಲಿಯೇ ನಾಗಪ್ಪ ಸೂಡಿ ವಕೀಲರು ಪಂಚಮಸಾಲಿಗರ ಮತಗಳ ಮೇಲೆ ಕಣ್ಣಿಟ್ಟು ಜೆಡಿಎಸ್ ಅಭ್ಯರ್ಥಿಯಾಗಲು ಸೆಣಸುತ್ತಿರೋದು ಜಾತಿ ಸಮೀಕರಣವನ್ನು ಜಟಿಲವಾಗಿಸುತ್ತಿದೆ. ಮೊನ್ನೆ ಕೊಪ್ಪಳ ಜಿಲ್ಲೆಯ ಕೋಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತನ ಕುಟುಂಬಕ್ಕೆ ಸಾಂತ್ವನ ಹೇಳಿ, 50,000 ರೂ. ನೆರವು ನೀಡಲು ಬಂದಿದ್ದ ಕುಮಾರಣ್ಣನ ಮುಂದೆ ಜೆಡಿಎಸ್ ಟಿಕೆಟ್‌ಗಾಗಿ ಸೂಡಿ ವಕೀಲರು ಬೇಡಿಕೆ ಇಟ್ಟದ್ದು ತಾಲೂಕಿನಲ್ಲಿ ಭಾರೀ ಚರ್ಚೆಯಾಗುತ್ತಿದೆ.

ಸೂಡಿ ಸೆಣಸಾಟ ಸಲೀಸಿಲ್ಲ

ಹಾಗೊಮ್ಮೆ ಸೂಡಿ ವಕೀಲರಿಗೆ ಜೆಡಿಎಸ್ ಟಿಕೆಟ್ ಸಿಕ್ಕರೂ ಕಾಂಗ್ರೆಸ್ ಅಮರೇಗೌಡ ಬಯ್ಯಾಪುರ ಮತ್ತು ಬಿಜೆಪಿ ದೊಡ್ಡನಗೌಡನ ವಿರುದ್ಧದ ಸೆಣೆಸಾಟ ಸಲೀಸಿಲ್ಲ. ಕುಷ್ಟಗಿಯಲ್ಲಿ ಕುರುಬರ ಮತಗಳು 40 ಸಾವಿರಕ್ಕೂ ಅಧಿಕವಿದ್ದು ಇವುಗಳ ಪಾಲಿಗೆ ಕೊರಡಕೇರಿಯ ಪಾಟೀಲ ಫ್ಯಾಮಿಲಿಯೇ ಫೈನಲ್ಲು. ಆ ಕುಟುಂಬದ ದೊಡ್ಡನಗೌಡ ಪಾಟೀಲ ಗೆದ್ದು ಮೆರೆದಾಡುತ್ತಿರುವುದಕ್ಕೆ ಅವನ ಜಾತಿಮತಗಳೇ ಕಾರಣ. ಹಾಲಿ ಶಾಸಕ ದೊಡ್ಡನಗೌಡ ಪಾಟೀಲನಿಗೆ ಈ ಸಲ ತನ್ನ ಜಾತಿ ರಾಜಕೀಯದ ಜೊತೆಗೆ ಪ್ರಭಾವಿ ಲಿಂಗಾಯತ ಜಾತಿಯ ಮಾಜಿ ಶಾಸಕ ಕೆ.ಶರಣಪ್ಪ ವಕೀಲರೂ ಸಾಥ್ ನೀಡಿರುವುದು ಪ್ಲಸ್ ಪಾಯಿಂಟ್. ಇತ್ತ ಲಿಂಗಸೂರಿಗೆ ಮೂರು ಬಾರಿ ಶಾಸಕನಾಗಿ, ಧರ್ಮಸಿಂಗ ಅವಧಿಯಲ್ಲಿ ಸಚಿವನಾಗಿ ಮೆರೆದ ಅಮರೇಗೌಡ 2008ರಲ್ಲಿ ಲಿಂಗಸೂರು ಮೀಸಲು ಕ್ಷೇತ್ರವಾದ ಕಾರಣಕ್ಕೆ ಕುಷ್ಟಗಿಯತ್ತ ಮುಖ ಮಾಡಿದವರು. 2008ರಲ್ಲಿ ಕಾಂಗ್ರೆಸ್ ಟಿಕೆಟ್ ಪಡೆದುಕೊಂಡ ಕೇವಲ 20 ದಿನಗಳ ಅಂತರದಲ್ಲಿ ಚುನಾವಣೆ ಎದುರಿಸಿ ಗೆದ್ದದ್ದು ಬೈಯಾಪೂರನ ಚುನಾವಣಾ ರಣತಂತ್ರಕ್ಕೆ ಸಾಕ್ಷಿ. ಇಂಥಾ ಬಯ್ಯಾಪೂರನೂ ಕಳೆದ 2013ರ ಸೋಲಿನ ಮುಯ್ಯಿ ತೀರಿಸಿಕೊಳ್ಳಲು ಸ್ಕೆಚ್ ಮಡಗಿಕೊಂಡು ಕೂತಿದ್ದಾನೆ.

ಇಂತವರ ನಡುವೆ, ಕಳೆದ ಜಿ.ಪಂ ಚುನಾವಣೆಯಲ್ಲಿ ಹನುಮಸಾಗರ ಕ್ಷೇತ್ರದಿಂದ ಸ್ಪರ್ಧಿಸಿ ಸೋತು, 50 ಲಕ್ಷ ಕಳೆದುಕೊಂಡು ಬರಿಗೈ ದಾಸನಂತಾಗಿರುವ ಸೂಡಿ ವಕೀಲ ಅದ್ಹೇಗೆ ಸ್ಪರ್ಧೆ ಒಡ್ಡುಬಲ್ಲರು ಎಂಬುದೇ ಸದ್ಯದ ಮಿಲಿಯನ್ ಡಾಲರ್ ಪ್ರಶ್ನೆ. ಈ ಪ್ರಶ್ನೆ ಸ್ವತಃ ದೇವೇಗೌಡರು ಮತ್ತು ಎಚ್ಡಿ ಕುಮಾರಸ್ವಾಮಿಯನ್ನೂ ಕಾಡುತ್ತಿರೋದರಿಂದ ಟಿಕೆಟ್ ಎತ್ತ ಕದಲಾಡುತ್ತೋ ಕಾದುನೋಡಬೇಕು.

■ ಸ.ಶರಣಪ್ಪ ಪಾಟೀಲ ಕರಮುಡಿ


11 ⇦ ಅನಂತ್-ನಳಿನ್

ಗಂಭೀರವಾಗಿ ಪರಿಗಣಿಸಿಲ್ಲ; ಸರಿಯಾಗಿ ಚಿಕಿತ್ಸೆ ಕೊಡುತ್ತಿಲ್ಲ ಎಂಬ ಆಕ್ರೋಶದಿಂದಲೇ ಬಂದಿದ್ದ.


ಒಳಹೊಕ್ಕವನೇ ನೇರವಾಗಿ ಡ್ಯೂಟಿ ಡಾಕ್ಟರ್ ಬಾಲಚಂದ್ರ ಭಟ್‌ನನ್ನು ಕರೆದು ಗದರಿದ್ದಾನೆ. ಮೂಳೆ ತಜ್ಞ ಡಾ. ಮಧುಕೇಶ್ವರ್‌ನ ಕರೆಸಿದ್ದಾನೆ. ಯಾರು ನನ್ನ ತಾಯಿಯನ್ನು ನೋಡಿಕೊಳ್ತಿರೋದು? ಎಂದು ಗದರಿದ್ದಾನೆ. ಮಧುಕೇಶ್ವರ್ ತಾನೆಂದು ಹೇಳಿದ್ದಾರೆ. "ಹೀಗಾ ನೋಡೋದು... ಅವಳು ನನ್ನ ತಾಯಿ. ನಾನು ಈ ಜಿಲ್ಲೆಯ ಮೆಂಬರ್ ಆಫ್ ಪಾರ್ಲಿಮೆಂಟ್... ಇನ್ನೂ ಆಕೆಯನ್ನು ಸ್ಟ್ರೆಚರ್‌ನಿಂದ ತೆಗಿಲೇಇಲ್ವಲ್ಲಾ...." ಎನ್ನುತ್ತ ಮಧುಕೇಶ್ವರ್‌ಗೆ ಬಾರಿಸಿದ್ದಾನೆ. ಆತನ ತುಟಿ ಹರಿದು ರಕ್ತ ಜಿನುಗಿದೆ. ಅಲ್ಲೇ ಇದ್ದ ಡಾ. ಬಾಲಚಂದ್ರ ಮೇಲೇರಿ ಹೋದ ಅನಂತ್ ಆತನ ಗಂಟಲಿನ ಮೇಲೆ ಕುತ್ತಿಗೆ ಮೇಲೆಲ್ಲ ಹೊಡೆದಿದ್ದಾನೆ. ಕೊರಳಪಟ್ಟಿ ಹಿಡಿದು ಬಾರಿಸಿದ್ದಾನೆ. ಕುತ್ತಿಗೆ ಮೇಲೆ ಗಾಯವಾಗಿ ಬಾಲಚಂದ್ರ ಭಟ್ ಒದ್ದಾಡಿದ್ದಾನೆ. ಇದನ್ನು ನೋಡಿ ತಪ್ಪಿಸಲು ಬಂದ ರಾಹುಲ್ ಎಂಬ ಸಿಬ್ಬಂದಿಗೂ ಅನಂತ್ ಥಳಿಸಿದ್ದಾನೆ. ನರ್ಸ್‌ಗಳು ಪರಿಪರಿಯಾಗಿ ಬೇಡಿಕೊಂಡರೂ ಅನಂತ್ ಡಾಕ್ಟರ್‌ಗಳ ಥಳಿಸೋದು ನಿಲ್ಲಿಸಲಿಲ್ಲ, ಮಧ್ಯ ಬಂದ ನರ್ಸ್‌ಗಳನ್ನು ಅನಂತನ ಹಿಂಬಾಲಕರು ಎಳೆದು ದೂರ ತಳ್ಳಿದ್ದಾರೆ.

ಅನಂತನ ಜತೆ ಆತನ ಅನಾದಿಕಾಲದ ಗುದುಮುರಿಗೆ ಗೆಳೆಯನೂ ಶಿರಸಿ ತಾ.ಪಂ ಸದಸ್ಯನೂ ಆದ ಎಸಳೆ ಕೃಷ್ಣ ರಿತೇಶ್ ಎಂಬ ಕಲ್ಲು ಗಣಿ ದೊರೆ ಮುಂತಾದವರಿದ್ದರು. ಇವರೂ ಗುರುನ ಖುಷಿಗೊಳಿಸಲು ವೈದ್ಯರಿಗೆ ಸಮಾ ತದುಕಿದ್ದಾರೆ. ಇಷ್ಟಕ್ಕೂ ಆಗಿದ್ದಾದರೂ ಏನು? ಕೆಲವು ದಿನಗಳ ಹಿಂದೆ ಅನಂತನ ಹೊಸ ಬಂಗ್ಲೆಯ ಗೃಹಪ್ರವೇಶವಾಗಿತ್ತು, ಅದೊಂದು ಭರ್ಜರಿ ಸಮಾರಂಭ. ಬಡವರು ತಮ್ಮ ಮನೆಯ ಮದುವೆ ಸಮಾರಂಭಕ್ಕೆ ತಮ್ಮದೇ ಹಣ 25 ಸಾವಿರಕ್ಕಿಂತ ಹೆಚ್ಚು ಸಿಗದೇ ಒದ್ದಾಡುತ್ತಿದ್ದಾರೆ. ಬ್ಯಾಂಕ್‌ನ ಎದುರು ದಿನಗಟ್ಟಲೆ ಕ್ಯೂ ನಿಲ್ಲುತ್ತಿದ್ದಾರೆ. ಮೋದಿ ಮಾಮನಿಗೆ ಶಾಪ ಹಾಕುತ್ತಿದ್ದಾರೆ. ಆದರೆ ನೋಟುಬ್ಯಾನ್ ಮಾಡಿದ ಪಿಎಂ ಮೋದಿಯ ಪಕ್ಷದ ಸಂಸದ ಅನಂತನ ಮನೆ ಒಕ್ಕಲು ಸಮಾರಂಭ ವಿಜೃಂಭಣೆಯಿಂದಲೇ ನಡೆದಿದೆ. ಅಂದರೆ ಸಂಸದ ಸಾಹೇಬರಿಗೆ ಯಥೇಚ್ಛವಾಗೇ ಹಣ ಸಿಕ್ಕಿದೆಯೆಂದಾಯ್ತು.

ಅದಿರಲಿ, ಈ ಮನೆ ಪ್ರವೇಶ ಸಮಾರಂಭದ ಗಡಿಬಿಡಿಯಲ್ಲಿ ಸಂಸದ ಅನಂತನ ತಾಯಿ ಬಿದ್ದು ಕಾಲಿನ ಮೂಳೆ ಮುರಿತವಾಗಿತ್ತು, ನೋವು ಹೆಚ್ಚಾದಾಗ ಆ ವಯೋವೃದ್ಧ ತಾಯಿಯನ್ನು ಸಂಸದರ ಸಹೋದರ 2.1.17ರ 9 ಗಂಟೆ ಹೊತ್ತಿಗೆ ಟಿಎಸ್‌ಎಸ್ ಆಸ್ಪತ್ರೆಗೆ ಕರೆ ತಂದಿದ್ದಾರೆ. ಆಕೆಗೆ ಅಲ್ಲಿಯ ವೈದ್ಯರು ಎಕ್ಸರೇ ತೆಗೆದಿದ್ದಾರೆ. ಆಪರೇಷನ್ ಆಗಬೇಕು ಎಂದಿದ್ದಾರೆ ಡಾ. ಮಧುಕೇಶ್ವರ್. ಅಷ್ಟರಲ್ಲಿ ಅನಂತನ ಸಹೋದರ ತಮ್ಮ ಫ್ಯಾಮಿಲಿ ಡಾಕ್ಟರ್‌ರನ್ನು ಭೇಟಿಯಾಗಿ ಬರ್ತೇನೆ; ನಾವು ಮಂಗಳೂರಿಗೆ ತಾಯಿಯನ್ನು ಕರಕೊಂಡು ಹೋಗ್ತೇವೆ ಎಂದಿದ್ದಾನೆ. ಎಲ್ಲೋ ಇದ್ದ ಅಣ್ಣನಿಗೆ ಟಿಎಸ್‌ಎಸ್‌ನಲ್ಲಿ ಸರಿಯಾಗಿ ಕೇರ್ ತಗೋತಿಲ್ಲ ಎಂದಿದ್ದಾನೆ. ಅಣ್ಣ ಅನಂತನಿಗೆ ಪಿತ್ಥ ನೆತ್ತಿಗೇರಿದೆ.



ತಾಯಿ ಇನ್ನೂ ಸ್ಟ್ರೆಚರ್‌ನಲ್ಲೇ ಇರೋದು ಕಂಡು ಕೆಂಡಾಮಂಡಲ ಆಗಿದ್ದಾನೆ. ಯಾಕೆ ರೂಮಿಗೆ ಶಿಫ್ಟ್ ಮಾಡಿಲ್ಲವೆಂದು ರೇಗಾಡಿ ಕಾಳಗ ಮಾಡಿದ್ದಾನೆ. ಇಲ್ಲಿ ಎರಡು ಅಭಿಪ್ರಾಯವಿದೆ. ಯಾರೂ ಸರಿಯಾಗಿ ಬಾಯಿ ಬಿಡುತ್ತಿಲ್ಲ. ಪೆಟ್ಟು ತಿಂದ ವೈದ್ಯರಂತೂ ಹೆದರಿ ಹೈರಾಣಾಗಿದ್ದಾರೆ. ಪೊಲೀಸ್ ಕಂಪ್ಲೇಂಟು ಕೊಡುವುದಕ್ಕೂ ಮುಂದಾಗುತ್ತಿಲ್ಲ! ಸಂಸದರ ಸಹೋದರ ತಾಯಿಯನ್ನು ಮಂಗಳೂರಿಗೆ ಕರೆದೊಯ್ಯುವುದಾಗಿ ಹೇಳಿದ್ದರಿಂದ ವೈದ್ಯ ಆಕೆಯ ಬಗ್ಗೆ ಹೆಚ್ಚು ಕಾಳಜಿ ವಹಿಸಲಿಲ್ಲವಂತೆ; ಅಡ್ಮಿಟ್ ಮಾಡಿಕೊಳ್ಳಲಿಲ್ಲವಂತೆ. ಇನ್ನೊಂದು ಮೂಲದ ಪ್ರಕಾರ ಟಿಎಸ್‌ಎಸ್‌ನ ವೈದ್ಯರಲ್ಲಿ ಹಲವರಿಗೆ ವೈದ್ಯಕೀಯದ ಎಥಿಕ್ ಗೊತ್ತಿಲ್ಲ; ಹಣಕ್ಕಾಗಿ ಹಪಹಪಿಸುತ್ತಾರೆ. ಹೊಣೆಗೇಡಿಗಳಂತೆ ಹಾರಾಡುತ್ತಾರೆ. ಅಸಹಾಯಕ ರೋಗಿಗಳು ಮತ್ತವರ ಸಂಬಂಧಿಗಳನ್ನು ಸತಾಯಿಸುತ್ತಾರೆ. ಇಂತ ನಿಷ್ಕಾಳಜಿಯಿಂದಾಗಿಯೇ ಹಲವು ಹೆಣ ಇಲ್ಲಿ ಬಿದ್ದಿದೆ ಎಂಬ ಆಕ್ರೋಶ ಶಿರಸಿ ಸೀಮೆಯ ಜನರಲ್ಲಿದೆ. ಈ ದೂರು ಸಂಸದ ಸಾಹೇಬರ ಕಿವಿಗೂ ಬಿದ್ದಿದೆ; ಆತನ ಸಹಚರರೂ ಪ್ರಚೋದಿಸಿದ್ದಾರೆ. ಅನಂತನ ತಾಯಿಯನ್ನು ಸ್ಟ್ರೆಚರ್‌ನಲ್ಲೇ ಬಿಟ್ಟು ಮೂಳೆ ವೈದ್ಯ ಬೇರೆ ಆಪರೇಷನ್‌ಗೆ



ಹೋಗಿದ್ದನಂತೆ.

ಈ ತರಹದ ಸಾರ್ವಜನಿಕ ಅಸಮಾಧಾನ-ಆಕ್ರೋಶ ಸಂಸದನ ಮೂಲಕ ಪ್ರಕಟವಾಗಿದೆ ಎನ್ನುವವರೂ ಇದ್ದಾರೆ. ಆದರೆ ಸಂಸದನಂಥ ಹೊಣೆಗಾರಿಕೆ- ಘನತೆಯ ಸ್ಥಾನದಲ್ಲಿರುವ ಅನಂತ ಗೂಂಡಾಗಿರಿಗೆ ಇಳಿದಿದ್ದು ಅಕ್ಷಮ್ಯವೇ ಸರಿ. ಎಡವಟ್ಟು ವೈದ್ಯರನ್ನು ಹಣಿಯಲು ಸಂಸದ ಅನಂತುಗೆ ಹಲವು ಅವಕಾಶ- ಅನೇಕ ಅಸ್ತ್ರಗಳಿದ್ದವು. ಇದೆಲ್ಲ ಬದಿಗೆ ಸರಿಸಿ ಅನಾಗರಿಕ ಬೀದಿ ರೌಡಿಯಂತೆ ಸಂಸದ ಅನಂತ ಹೆಗಡೆ ಅನಾಹುತ ಮಾಡಿದ್ದಾನೆ.

ಇದು ಅನಂತನ ಸಂಸ್ಕೃತಿ; ಹುಟ್ಟುಗುಣ. ಅದು ಚಟ್ಟ ಹತ್ತಿದಾಗಲೇ ಹೋಗೋದು! ಟಿಎಸ್‌ಎಸ್ ಆಸ್ಪತ್ರೆಯಲ್ಲಿ ಆಗಿರುವ ಈ ಭಾನ್ಗಡಿಯಿಂದ ಅದರ ಅಧ್ಯಕ್ಷ ಶಾಂತಾರಾಮ ಹೆಗಡೆ ನಿದ್ದೆಗೆಡುವಂತಾಗಿದೆ, ಪಾಪ. ಆ ಆಸ್ಪತ್ರೆಯೇ ಶಾಂತಣ್ಣನ ಪಾಪದ ಕೂಸು. ತೋಟಿಗರ ಪ್ರೋತ್ಸಾಹಧನ ಅಕ್ರಮವಾಗಿ ಕಬಳಿಸಿ ಕಟ್ಟಿದ ಆಸ್ಪತ್ರೆಯದು. ಆ ಆಸ್ಪತ್ರೆ ಇತ್ತ ತೋಟಿಗರದೂ ಆಗಿಲ್ಲ; ಅತ್ತ ಟಿಎಸ್‌ಎಸ್ ಸಂಸ್ಥೆಗೂ ಸೇರಿಲ್ಲ, ಅದು ಶಾಂತ ಹೆಗಡೆ ಗ್ಯಾಂಗಿನ ನಕಲಿ ಟಿಎಸ್‌ಎಸ್‌ನ ಸೊತ್ತಾಗಿದೆ. ಶಾಂತನ ಖಾಸಗಿ ಟ್ರಸ್ಟ್‌ನ ಕೈವಶವಾಗಿದೆ. ಈ ದುಬಾರಿ-ಅವ್ಯವಸ್ಥೆ-ಅವಾಂತರದ ಆಸ್ಪತ್ರೆಯಿಂದ ಬಡ ತೋಟಿಗರಿಗೇನೂ ಲಾಭ ಇಲ್ಲ. ಮೊದಲೇ ವಿವಾದಕ್ಕೆ ತುತ್ತಾಗಿರುವ ಈ ಆಸ್ಪತ್ರೆಯಲ್ಲಾಗಿರುವ 'ಅವಘಡ'ದಿಂದ ಶಾಂತ ಹೆಗಡೆ ಇಮೇಜಿಗೆ ಹೊಡೆತ ಬಿದ್ದಿದೆ. ಹಾಗಾಗಿ ಆತ ಡ್ಯಾಮೇಜ್ ಕಂಟ್ರೋಲ್‌ಗೆ ಈಗ ಸಂತ್ರಸ್ತ ವೈದ್ಯರು ಮತ್ತು ಸೈತಾನ ಸಂಸದನ ನಡುವೆ ರಾಜಿ ಪಂಚಾಯ್ತಿಕೆ ಮಾಡಿ ಸಗಣಿ ಸಾರಿಸಿದ್ದಾರೆ. ಯಾವುದಕ್ಕೂ ಇರಲಿ ಎಂದು ಎರಡೂ ಕಡೆಯವರು ಒಂದೊಂದು ದೂರಿನ ಪಿಟಿಷನ್ ಪೊಲೀಸರಿಗೆ ಕೊಟ್ಟಿದ್ದಾರಷ್ಟೆ; ಕಂಪ್ಲೇಟು ಕೊಟ್ಟಿಲ್ಲ. ಅನಂತನ "ಡಿಶುಂ.... ಡಿಶುಂ" ಚರಿತ್ರೆ ಬಲ್ಲ ವೈದ್ಯರು ಎಲ್ಲ ಮುಚ್ಚಿಕೊಂಡು ಕೂತಿದ್ದಾರೆ. ಅನಂತು ಅಟ್ಟಹಾಸದಿಂದ ಕೇಕೆ ಹಾಕುತ್ತಿದ್ದಾನೆ. ಅನಂತನ ಪರಾಕ್ರಮ ಆಸ್ಪತ್ರೆಯ ಸಿಸಿ ಕ್ಯಾಮರಾದಲ್ಲಿ ದಾಖಲಾಗಿದೆ. ಅದರಲ್ಲಿ ಅನಂತನ ಹಿಂದೂ ಸಂಸ್ಕೃತಿ-ಸಜ್ಜನಿಕೆ-ನಾಗರಿಕತೆ ಮತ್ತು ದೇಶಭಕ್ತಿಯೆಲ್ಲ ದಾಖಲಾಗಿದೆ!! ಜನ ಇದೆಲ್ಲ ನೋಡಿ ಕ್ಯಾಕರಿಸಿ ಉಗಿಯುತ್ತಿದ್ದಾರೆ.

ಕೊನೆಯ ಮಾತು

"ಊರಿಗೆಲ್ಲ ಬುದ್ಧಿ ಹೇಳಿ ಒಲೇಲಿ ಉಚ್ಚೆ ಹೋಯ್ದಿದ್ದನಂತೆ" ಎಂಬಂತಾಗಿದೆ ಸ್ವಯಂಘೋಷಿತ ದೇಶೋದ್ಧಾರಕ ಮೋದಿ ಪಾರ್ಟಿಯ ಸಂಸದದ್ವಯರ ಕತೆ! ಅನಂತ್ ಮತ್ತು ನಳಿನ್ ಎಂಪಿ ಆಗಲಿಕ್ಕಲ್ಲ, ಗ್ರಾಮ ಪಂಚಾಯ್ತಿ ಮೆಂಬರಿಕೆಗೂ ಯೋಗ್ಯತೆ ಇಲ್ಲದ ಸಮಾಜಘಾತುಕ ಕ್ರಿಮಿಗಳು ಎಂಬುದನ್ನು ಅವರೇ ಸಾಬೀತು ಮಾಡಿಕೊಂಡಿದ್ದಾರೆ. ಇದೇನೂ ಆ ಸಂಸದರ ಮೊದಲ ತಪ್ಪೇನಲ್ಲ. ಇದು ನಿತ್ಯ ನೂತನ ಕಿರಿಕ್ ಸಾರ್ವಜನಿಕ ಪೀಡೆ. ದುರಂತವೆಂದರೆ, ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಈ ಪ್ರಜಾಪೀಡಕರ ಒದ್ದು ಒಳಗೆ ಹಾಕುವ ದಮ್ಮೇ ಇಲ್ಲದಾಗಿದೆ! ಅನಂತ್-ನಳಿನ್ ಮೇಲೆ ಸ್ವಯಂಪ್ರೇರಿತ ಕೇಸು ಹಾಕುವ ತಾಕತ್ತು ಗೃಹಮಂತ್ರಿ ಪರಮ್‌ಗೆ ಬಂದೀತಾ? ಈ ರೌಡಿ ಶಾಸಕರಿಗೆ ಮೂಗುದಾರ ಹಾಕುವ ನೈತಿಕತೆ ರಾಜ್ಯ ಬಿಜೆಪಿ ದೊರೆ ಯಡ್ಡಿಗಿದೆಯಾ? ಅನಂತ್-ನಳಿನ್ ಬಿಜೆಪಿಗೆ ಕೀರ್ತಿ ತರುತ್ತಿದ್ದಾರೆ. ಉ.ಕ ಮತ್ತು ದ.ಕ.ದ ಜನ ಜನರು ಇಂಥ ನಿರ್ಲಜ್ಜ ಪುಂಡರ ಸಂಸದರಾಗಿ ಮಾಡಿಕೊಂಡ ತಪ್ಪಿಗೆ ಹಣೆ-ಹಣೆ ಚಚ್ಚಿಕೊಳ್ಳುತ್ತಿದ್ದಾರೆ!

■ ವರದಿಗಾರ

ಆತ್ಮಹೀನ ಆಡಳಿತ: ಸ್ನೇಹಪೂರ್ವಕ ಫ್ಯಾಸಿಸಂ

ಆ ಓಲಗದ ಸದ್ದು ಯಾವ ನೋವನ್ನು, ಯಾರ ಸಾವನ್ನು, ಎಷ್ಟು ಹೃದಯಗಳ ಆಕ್ರಂದನವನ್ನು ಸೂಚಿಸುತ್ತಿದೆ?... ಭ್ರಷ್ಟನಾದವನು ಆ ಸದ್ದನ್ನು ದೂರ ಇಡುತ್ತಾನೆ. ತನ್ನ ಕಿವಿಗಳನ್ನು ಮುಚ್ಚಿಕೊಂಡು ನೆಮ್ಮದಿಯಾಗಿರುತ್ತಾನೆ.
- ಪಿ.ಲಂಕೇಶ್

ಇಂದು ಪ್ರತಿಯೊಂದು ಆವಿಷ್ಕಾರವನ್ನು ಹರ್ಷೋದ್ಗಾರದೊಂದಿಗೆ ಸ್ವಾಗತಿಸಲಾಗುತ್ತದೆ ಇದು ಶೀಘ್ರದಲ್ಲಿಯೇ ಭಯದ ಆಕ್ರಂದನವಾಗಿ ಪರಿವರ್ತನೆಯಾಗುತ್ತದೆ. - ಬ್ರೆಕ್ಟ್

ಡಿಸೆಂಬರ್ 31ರ ಸಂಜೆಯಂದು ಪ್ರಧಾನಿ ಮೋದಿ ದೇಶವನ್ನು ಉದ್ದೇಶಿಸಿ ಮಾತನಾಡುತ್ತಾರೆಂದು ಮಾಧ್ಯಮಗಳು ಪ್ರಕಟಿಸಿದಾಗ ದೇಶದ ಬಹುತೇಕ ಜನತೆ ಕಳೆದ 50 ದಿನಗಳ ಅನಾಣ್ಯೀಕರಣದ ಯಾತನಾ ದಿನಗಳ ನಂತರ ಮತ್ತೊಮ್ಮೆ ಹೊಸದೇನನ್ನು ಹೇಳುತ್ತಾರೆಂದು ಕಾತುರದಿಂದ ಕಾದಿದ್ದು ನಿಜ. ಆರಂಭದಲ್ಲಿ ಎದೆ ಬಡಿದುಕೊಂಡು ಹೇಳಿದ ಅನಾಣ್ಯೀಕರಣದ ಮೂಲಕ ಭಯೋತ್ಪಾದನೆ ಮತ್ತು ಕಾಳಧನದ ನಿಗ್ರಹದ ಕುರಿತಾದ ಎಲ್ಲಾ ಜುಮ್ಲಾಗಳು ಸಂಪೂರ್ಣ ಮಕಾಡೆ ಮಲಗಿ ದೇಶದ ಜನ ಈ ಆರ್ಥಿಕ ತುರ್ತುಪರಿಸ್ಥಿತಿಯಿಂದ ತತ್ತರಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಈ ಸರ್ವಾಧಿಕಾರಿ ಮೋದಿಯ ಹೊಸ ಪ್ರಹಸನವನ್ನು ನೋಡಲು ಕಾದಿದ್ದರು.

ಆದರೆ ತನ್ನ ಭಕ್ತರನ್ನೂ ಒಳಗೊಂಡಂತೆ ಎಲ್ಲರನ್ನೂ ನಿರಾಶೆಗೊಳಿಸಿದ ಮೋದಿ ಸುಳ್ಳುಗಳ ಸರಮಾಲೆಯ ಮೂಲಕ ಖೋಟಾ ನಾಯಕತ್ವದ ಪೋಸುಗಳನ್ನು ಕೊಡುತ್ತಾ ಹೆಚ್ಚೂಕಡಿಮೆ ಒಂದು ಮಿನಿ ಬಜೆಟ್ ಅನ್ನು ತಿಕ್ಕಾಟಗಳ ಮೂಲಕ ಹೇಳುತ್ತಿದ್ದಾಗ ಸ್ವತಃ ಮೋದಿಯವರಿಗೇ ತಮ್ಮ ಮಾತುಗಳಲ್ಲಿ ನಂಬಿಕೆ ಇರಲಿಲ್ಲ. ತನ್ನ ಬಿಡಾಡಿ ಶೈಲಿಯ ಅಂಧಾ ರಾಜಕಾರಣ ಮತ್ತು ಸ್ವಪ್ರತಿಷ್ಠೆ ಸರ್ವಾಧಿಕಾರಿ ವ್ಯಕ್ತಿತ್ವದ ಮೂಲಕ ದೇಶವನ್ನು ಹೆಚ್ಚೂಕಡಿಮೆ ಹಳ್ಳ ಹಿಡಿಸಿ ಪ್ರಜ್ಞಾಪೂರ್ವಕವಾಗಿ ಅಪ್ರಜ್ಞಾಪೂರ್ವಕನಂತೆ ವರ್ತಿಸಿದ್ದು ಹಾಸ್ಯಾಸ್ಪದವಾಗಿತ್ತು. ಆದರೆ ಈ ಸಂದರ್ಭದಲ್ಲಿ ಕಲ್ಯಾಣ ಯೋಜನೆಗಳನ್ನು ಅಂಕಿಅಂಶಗಳ ಮೂಲಕ ಸತ್ತದ ಮೇಲೆ ಹೊಡೆದಂತೆ ಉದುರಿಸುತ್ತಾ ಹೋದರು. ಇದು ಸಹ ಸಂಪೂರ್ಣ ಖೋಟಾ ಎಂದು ಜನರಿಗೆ ಗೊತ್ತಾಗಲು ತಡವಾಗಲಿಲ್ಲ.

ಮೋದಿಯವರ ಈ ಹಸಿ ಸುಳ್ಳುಗಳನ್ನು 'ಬಿಸಿನೆಸ್ ವರ್ಲ್ಡ್' ಪತ್ರಿಕೆಯಲ್ಲಿ ಅಂಕಿಅಂಶಗಳ ಮೂಲಕ ವರದಿ ಮಾಡಿತು. ಅದರ ಸಾರಾಂಶ ಮತ್ತು ಮೋದಿ ಡಿಸೆಂಬರ್ 31ರಂದು ಹೇಳಿದ ಸುಳ್ಳುಗಳು ಮತ್ತು ವಾಸ್ತವ ಸಂಗತಿಗಳು ಹೀಗಿವೆ:


ಗರ್ಭಿಣಿ ಮಹಿಳೆಯರಿಗೆ ಹಣಕಾಸಿನ ನೆರವು

ಮೋದಿಯ ಜುಮ್ಲಾ: ನಾವು ಗರ್ಭಿಣಿ ಮಹಿಳೆಯರಿಗೆ ಹಣಕಾಸಿನ ನೆರವನ್ನು ನೀಡಲು ರಾಷ್ಟ್ರೀಯ ಯೋಜನೆಯನ್ನು ರೂಪಿಸಿದ್ದೇವೆ. 6000 ರೂ.ಗಳನ್ನು ಆಸ್ಪತ್ರೆಗಳಲ್ಲಿ ಹೆರಿಗೆಯಾಗುವ, ಗರ್ಭಿಣಿ ಮಹಿಳೆಯರ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲಾಗುವುದು.

ವಾಸ್ತವ ಸಂಗತಿ: ಹಿಂದಿನ ಯುಪಿಎ ಸರ್ಕಾರದ ಸಂದರ್ಭದಲ್ಲಿ ರಾಷ್ಟ್ರೀಯ ಆಹಾರ ಭದ್ರತೆ ಸುರಕ್ಷ ಆಕ್ಟ್ 2013 (NFSA)ನ ಅಡಿಯಲ್ಲಿ ಸಾರ್ವತ್ರಿಕವಾಗಿ ಗರ್ಭಿಣಿ ಮಹಿಳೆಯರಿಗೆ ಕನಿಷ್ಠ ರೂ. 6000ಗಳನ್ನು ಒದಗಿಸುವುದು ಸರ್ಕಾರದ ಕಾನೂನುಬದ್ಧ ಹೊಣೆ ಎಂದು ಅನುಮೋದಿಸಲಾಗಿದೆ. ಇದರ ಜೊತೆಜೊತೆಗೆ ಇಂದಿರಾ ಗಾಂಧಿ ಮಾತೃತ್ವ ಸಹಯೋಗ ಯೋಜನೆ (IGMSY) ಸಹ 2013ರಿಂದ ಚಾಲನೆಯಲ್ಲಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ತನ್ನ ಹಿಂದಿನ ಸರ್ಕಾರದ ಈ ಕಲ್ಯಾಣ ಯೋಜನೆಯನ್ನು ಕಳೆದ ಎರಡು ವರ್ಷಗಳಿಂದ ಮುಂದುವರೆಸಿಕೊಂಡು ಹೋಗುತ್ತಿದೆ. ಪ್ರಾರಂಭದಲ್ಲಿ 53 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಕೇವಲ 4000 ರೂ.ಗಳನ್ನು ಪ್ರಾಯೋಗಿಕವಾಗಿ ಕೊಡಲಾಗುತ್ತಿದೆ.

ಆದರೆ ಅನೇಕ ಹೊಸ ನಿರ್ಬಂಧನೆಗಳನ್ನು ವಿಧಿಸಿದೆ. ಮೊದಲನೆಯದಾಗಿ ಇದನ್ನು ಆಯ್ದ ಕೆಲವೇ ಜಿಲ್ಲೆಗಳಲ್ಲಿ ಮುಂದುವರೆಸುತ್ತಿದೆ. ಎರಡನೆಯದಾಗಿ ಇದನ್ನು ಸಾರ್ವತ್ರಿಕ ಎಂದು ಪರಿಗಣಿಸದೆ ಶೇಕಡಾ 20 ಪ್ರಮಾಣಕ್ಕಿಂತಲೂ ಕಡಿಮೆ ಗರ್ಭಿಣಿ ಮಹಿಳೆಯರಿಗೆ ಮಾತ್ರ ಸೀಮಿತಗೊಳಿಸಿದೆ. ಮೂರನೆಯದಾಗಿ ಆಸ್ಪತ್ರೆಗಳಲ್ಲಿ ಹೆರಿಗೆಯಾಗುವವರಿಗೆ ಮಾತ್ರ ಈ ಸೌಲಭ್ಯವನ್ನು ನೀಡಲಾಗುತ್ತದೆ. ಆದರೆ ಗ್ರಾಮೀಣ ಭಾಗಗಳಲ್ಲಿ ಯಾವುದೇ ಆರೋಗ್ಯ ಮತ್ತು ಸರ್ಕಾರಿ ಆಸ್ಪತ್ರೆಗಳ ಸೌಲಭ್ಯಗಳಿಲ್ಲದ ಅಸಂಖ್ಯಾತ ಮಹಿಳೆಯರು ಈ ಅವಕಾಶದಿಂದ ವಂಚಿತರಾಗುತ್ತಾರೆ.

ಒಂದುವೇಳೆ ಮೋದಿ ಸರ್ಕಾರವು ಸಾರ್ವತ್ರಿಕವಾಗಿ ಎಲ್ಲಾ ಗರ್ಭಿಣಿ ಮಹಿಳೆಯರಿಗೆ ಈ ಸೌಲಭ್ಯವನ್ನು ನೀಡಿದರೆ ಪ್ರತಿ ವರ್ಷ ರೂ. 15000 ಕೋಟಿ ಖರ್ಚಾಗಲಿದೆ.



ಆದರೆ ಸರ್ಕಾರವು ಆರೋಗ್ಯ ವಲಯಕ್ಕೆ ಮೀಸಲಿಡುವ ಬಜೆಟ್ ಹಣದಲ್ಲಿ ಈ ಖರ್ಚನ್ನು ಒಳಗೊಂಡಿದೆಯೇ ಎನ್ನುವುದು ಖಾತ್ರಿಯಿಲ್ಲ.

ಕಿಸಾನ್ ಕ್ರೆಡಿಟ್ ಕಾರ್ಡ್ ಬದಲಾಗಿ ರೂಪೇ ಕಾರ್ಡ್

ಮೋದಿಯ ಜುಮ್ಲಾ: ಈಗಾಗಲೇ ಕಿಸಾನ್ ಕಾರ್ಡ್ ಹೊಂದಿರುವ ರೈತರಿಗೆ ಮೂರು ತಿಂಗಳೊಳಗೆ ರೂಪೇ ಡೆಬಿಟ್ ಕಾರ್ಡ್ ಕೊಡಲಾಗುವುದು. 1998ರಲ್ಲಿ ಜಾರಿಗೊಂಡ ಈ ಯೋಜನೆಯಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್ ಹೊಂದಿರುವವರು ಬ್ಯಾಂಕುಗಳಿಗೆ ಹೋಗುವುದು ಅನಿವಾರ್ಯವಾಗಿತ್ತು. ಈಗ ರೂಪೇ ಡೆಬಿಟ್ ಕಾರ್ಡ್ ಬಳಸಿಕೊಂಡು ದೇಶದ ಯಾವುದೇ ಭಾಗದಲ್ಲಿಯೂ ಉಪಯೋಗಿಸಬಹುದು.

ವಾಸ್ತವ ಸಂಗತಿ: ಕಿಸಾನ್ ಕ್ರೆಡಿಟ್ ಕಾರ್ಡ್‌ನ ಬದಲಾಗಿ ರೂಪೇ ಕಾರ್ಡ್ ಅನ್ನು 2012ರಿಂದಲೇ ವಿತರಿಸಲಾಗುತ್ತಿದೆ. ಆದರೆ ಇದನ್ನು ಕಡ್ಡಾಯಗೊಳಿಸಿರಲಿಲ್ಲ. ನವೆಂಬರ 2012ರಂದು ಆಗಿನ ಯುಪಿಎ ಸರ್ಕಾರದ ಹಣಕಾಸಿನ ಮಂತ್ರಿಯು ಕಿಸಾನ್ ಕಾರ್ಡ್ ಹೊಂದಿರುವ ರೈತರಿಗೆ 19 ಬ್ಯಾಂಕುಗಳು ರೂಪೇ ಕಾರ್ಡ್ ಕೊಡುತ್ತವೆ ಎಂದು ಘೋಷಿಸಿದ್ದರು. 2013-14 ಕಾಲದಲ್ಲಿ 56.6 ಲಕ್ಷ ರೂಪೇ ಕಾರ್ಡ್ ವಿತರಿಸಲಾಗಿದೆ.

ಸಣ್ಣ ಉದ್ಯಮಗಳಿಗೆ ನೀಡಿದ ಸಾಲವನ್ನು ಸರ್ಕಾರವು ಭರಿಸುತ್ತದೆ

ಮೋದಿಯ ಜುಮ್ಲಾ: ಬ್ಯಾಂಕುಗಳು ಸಣ್ಣ ಉದ್ಯಮಗಳಿಗೆ ನೀಡಿದ ಸಾಲವನ್ನು ಟ್ರಸ್ಟ್‌ನ ಮೂಲಕ ಸರ್ಕಾರವು ಭರಿಸುತ್ತದೆ. ಮೊದಲು ಕೇವಲ ಬ್ಯಾಂಕ್ ಸಾಲವನ್ನು ಮಾತ್ರ ಪರಿಗಣಿಸಲಾಗುತ್ತಿತ್ತು. ಈಗ 'ಬ್ಯಾಂಕೇತರ ಹಣಕಾಸು ಮಂಡಳಿ' (Non Banking Financial Company (NBFC) ಗಳು ನೀಡಿದ ಸಾಲವನ್ನೂ ಪರಿಗಣಿಸಲಾಗುತ್ತದೆ.

ವಾಸ್ತವ ಸಂಗತಿ: ಸಣ್ಣ ಮತ್ತು ಅತಿಸಣ್ಣ ಉದ್ಯಮಗಳಿಗೆ 2000 ಇಸವಿಯಿಂದಲೂ ಸರ್ಕಾರವು 'ಸಾಲ ಖಾತರಿ ನಿಧಿ ಟ್ರಸ್ಟು' ನಡೆಸುತ್ತಿದೆ. ಆಗಿನಿಂದಲೂ 'ಪ್ರಾದೇಶಿಕ ಗ್ರಾಮೀಣ ಬ್ಯಾಂಕು'ಗಳು ಮತ್ತು ಹಣಕಾಸು ಸಂಸ್ಥೆಗಳ ಮೂಲಕ 50 ಲಕ್ಷ ಮೊತ್ತದ ಸಾಲವನ್ನು ಮತ್ತು 'ಕಮರ್ಷಿಯಲ್ ಬ್ಯಾಂಕು'ಗಳ ಮೂಲಕ 1 ಕೋಟಿ ಮೊತ್ತದ ಸಾಲವನ್ನು ಕೊಡಲಾಗುತ್ತಿತ್ತು. 50 ಲಕ್ಷ ಮೊತ್ತದ ಸಾಲ ತೆಗೆದುಕೊಂಡ ಸಾಲಗಾರರಿಗೆ ಶೇಕಡಾ 85 ಪ್ರಮಾಣದಲ್ಲಿ ಸರ್ಕಾರವು ಭದ್ರತೆ ಒದಗಿಸುತ್ತಿತ್ತು. 50 ಲಕ್ಷ ಮೇಲ್ಪಟ್ಟ ಮೊತ್ತದ ಸಾಲ ತೆಗೆದುಕೊಂಡವರಿಗೆ ಶೇಕಡಾ 50 ಪ್ರಮಾಣದಲ್ಲಿ ಭದ್ರತೆ ಒದಗಿಸುತ್ತಿತ್ತು. ಮೇ 2016ರವರೆಗೆ 23,986 ಕೋಟಿ ಮೊತ್ತದ ಸಾಲಕ್ಕೆ ಭದ್ರತೆಯನ್ನು ಒದಗಿಸಲಾಗಿದೆ.

ಸಣ್ಣ ಮತ್ತು ಅತಿಸಣ್ಣ ಉದ್ಯಮಗಳಿಗೆ ಸಾಲ

ಮೋದಿಯ ಜುಮ್ಲಾ: ಸಣ್ಣ ಉದ್ಯಮಗಳಿಗೆ ಸಾಲದ ಮಿತಿಯನ್ನು ವಾರ್ಷಿಕ ವಹಿವಾಟಿನ 20% ರಷ್ಟು ಪ್ರಮಾಣದಿಂದ ವಾರ್ಷಿಕ ವಹಿವಾಟಿನ ಶೇಕಡಾ 25ರಷ್ಟು ಪ್ರಮಾಣಕ್ಕೆ ಏರಿಸಲು ಸೂಚಿಸಲಾಗಿದೆ. ಡಿಜಿಟಲ್ ಮೂಲಕ ವ್ಯವಹಾರ ನಡೆಸುವ ಉದ್ಯಮಗಳಿಗೆ ವಾರ್ಷಿಕ ವಹಿವಾಟಿನ ಶೇಕಡಾ 30 ಪ್ರಮಾಣದಲ್ಲಿ ಸಾಲ ನೀಡಲು ತೀರ್ಮಾನಿಸಲಾಗಿದೆ.

ವಾಸ್ತವ ಸಂಗತಿ: ಆಗಸ್ಟ್ 2015ರಂದು ಆರ್‌ಬಿಐ 'ಹೆಚ್ಚುವರಿ ನಿರ್ವಹಣಾ ಬಂಡವಾಳ' ಮಿತಿಯನ್ನು ನಿಗದಿಪಡಿಸಲು ಬ್ಯಾಂಕುಗಳಿಗೆ ಸೂಚಿಸಿತು. ಅನಾಣ್ಯೀಕರಣದ ನಂತರ ಡಿಸೆಂಬರ್ 29ರಂದು ಆರ್‌ಬಿಐ 'ಹೆಚ್ಚುವರಿ ನಿರ್ವಹಣಾ ಬಂಡವಾಳ' ಮಿತಿಯನ್ನು ತಾತ್ಕಾಲಿವಾಗಿ ಮಾರ್ಚ್ 2017ರವರೆಗೆ ಮಾತ್ರ ಬಳಸಿಕೊಳ್ಳಲು ಬ್ಯಾಂಕುಗಳಿಗೆ ಸೂಚಿಸಿದೆ. ಇದು ಒಂದು ಬಾರಿ ಮಾತ್ರ ಮಾರ್ಚ 2017ರ ನಂತರ 'ಹೊಸ ನಿರ್ವಹಣಾ ಬಂಡವಾಳ ನಿಗದಿ ಅವರ್ತ' ನೀತಿಗಳ ಅನುಸಾರ ಜಾರಿಯಾಗುತ್ತವೆ ಎಂದು ಹೇಳಿದೆ. ಡಿಜಿಟಲ್ ವಹಿವಾಟಿಗೆ ಕುರಿತಂತೆ ಆರ್‌ಬಿಐ ಇನ್ನೂ ಯಾವುದೇ ಆದೇಶ ಹೊರಡಿಸಿಲ್ಲ.

ಸಹಕಾರಿ ಬ್ಯಾಂಕುಗಳು ಮತ್ತು ಸೊಸೈಟಿಗಳಿಗೆ ನಬಾರ್ಡ್ ಬೆಂಬಲ

ಮೋದಿಯ ಜುಮ್ಲಾ: ನಬಾರ್ಡ್‌ಗೆ 21,000 ಕೋಟಿ ನಿಧಿಯನ್ನು ಕಲ್ಪಿಸಲಾಗಿದೆ. ಈಗ ಸರ್ಕಾರವು ಹೆಚ್ಚುವರಿಯಾಗಿ 20,000 ಕೋಟಿಯನ್ನು ಕೂಡಿಸುತ್ತಿದೆ. ಸಹಕಾರಿ ಬ್ಯಾಂಕುಗಳು ಮತ್ತು ಸೊಸೈಟಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವುದರ ಮೂಲಕ ನಬಾರ್ಡ್ ನಷ್ಟ ಅನುಭವಿಸುತ್ತಿತ್ತು. ಈಗ ಈ ನಷ್ಟವನ್ನು ಕೇಂದ್ರ ಸರ್ಕಾರ ಭರಿಸುತ್ತಿದೆ.

ವಾಸ್ತವ ಸಂಗತಿ: ಜಿಲ್ಲಾ ಸಹಕಾರಿ ಕೇಂದ್ರೀಯ ಬ್ಯಾಂಕುಗಳಿಗೆ ಬೆಳೆ ಸಾಲದ ಮಂಜೂರಾತಿ ಮತ್ತು ವಿತರಣೆಗೆ ಸುಮಾರು 35,000 ಕೋಟಿ ಮೊತ್ತ (ಪ್ರತಿ ವಾರ 10,000 ಕೋಟಿ) ಬೇಕಾಗುತ್ತದೆ ಎಂದು ನವೆಂಬರ್ 22ರಂದು ಆರ್‌ಬಿಐ ಅಂದಾಜಿಸಿತ್ತು. ಇದನ್ನು ವಿತರಿಸಲು ತನ್ನ ಹಣ ಸಾಲದ ಮಿತಿಯನ್ನು 23,000 ಕೋಟಿಯವರೆಗೆ ಬಳಸಿಕೊಳ್ಳಲು ನಬಾರ್ಡ್‌ಗೆ ಆದೇಶ ನೀಡಿತ್ತು.

2015-16ರಲ್ಲಿ ರಾಜ್ಯ ಸಹಕಾರಿ ಬ್ಯಾಂಕುಗಳಿಗೆ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ (RRBs), ಜಿಲ್ಲಾ ಸಹಕಾರಿ ಕೇಂದ್ರೀಯ ಬ್ಯಾಂಕುಗಳಿಗೆ (DCCBs) ಅಲ್ಪಾವಧಿ ಹೊಸ ಹಣಕಾಸು ಖಾತೆಯ ಅಡಿಯಲ್ಲಿ 71,497 ಕೋಟಿ ಸಾಲದ ಮಿತಿಗೆ ನಬಾರ್ಡ್ ಅನುಮೋದನೆ ನೀಡಿತ್ತು. ದೀರ್ಘಾವಧಿ ಹೊಸ ಹಣಕಾಸು ವಿತರಣೆಯ ಮಿತಿಯನ್ನು 48000 ಕೋಟಿಗೆ ನಿಗದಿಗೊಳಿಸಿತ್ತು.

ಮುದ್ರ

ಮೋದಿಯ ಜುಮ್ಲಾ: 'ಮುದ್ರ' ಯೋಜನೆಯ ಬೆಳವಣಿಗೆ ಉತ್ತೇಜನಕಾರಿಯಾಗಿದೆ. ಕಳೆದ ವರ್ಷ 3.5 ಕೋಟಿ ಜನರು ಇದರ ಫಲಾನುಭವಿಗಳಾಗಿದ್ದಾರೆ. ಇದನ್ನು ದುಪ್ಪಟ್ಟುಗೊಳಿಸಲು ಸರ್ಕಾರ ಉದ್ದೇಶಿಸಿದೆ. ದಲಿತರಿಗೆ, ಆದಿವಾಸಿಗಳಿಗೆ, ಹಿಂದುಳಿದ ವರ್ಗಗಳಿಗೆ ಮತ್ತು ಮಹಿಳೆಯರಿಗೆ ಆದ್ಯತೆ ನೀಡಲು ಬಯಸಿದೆ. ಗರ್ಭಿಣಿ ಮಹಿಳೆಯರಿಗೆ ಹೊಸ ಯೋಜನೆ ರೂಪಿಸುತ್ತಿದ್ದೇವೆ.

ವಾಸ್ತವ ಸಂಗತಿ: ಈ ಮುದ್ರ ಯೋಜನೆಯನ್ನು 2015ರಲ್ಲಿ ಜಾರಿಗೊಳಿಸಲಾಯಿತು. ಈ ಹಣಕಾಸು ವರ್ಷದಲ್ಲಿ (2015-16) ಮುದ್ರ ಯೋಜನೆಯಿಂದ 2.1 ಕೋಟಿ ಜನರು ಫಲಾನುಭವಿಗಳಾಗಿದ್ದಾರೆ.

ಅತಿಸಣ್ಣ ಉಳಿತಾಯ ಇಲಾಖೆಯು ಆಗಸ್ಟ್ 2016ರಲ್ಲಿ ಸಿದ್ಧಪಡಿಸಿದ ವರದಿಯಲ್ಲಿ "ಬ್ಯಾಂಕುಗಳು ಮತ್ತು 'ಬ್ಯಾಂಕೇತರ ಹಣಕಾಸು ಮಂಡಳಿ' (Non Banking Financial Company (NBFC) ಗಳು ದೊಡ್ಡದಾದ ಸಾಲ ಕ್ಷೇತ್ರಗಳನ್ನು ಬೆಳೆಸಿವೆ. ಆದರೆ ಇದರಲ್ಲಿ ಸಣ್ಣ ಪ್ರಮಾಣದ ಸಾಲವು ಮೊದಲ ಬಾರಿಗೆ ಸಾಲ ಪಡೆಯುವವರಿಗೆ ಇರುವಂತಹ 'ಹೊಸ ಮುದ್ರ ಸಾಲ'ಗಳು ರೂಪದಲ್ಲಿವೆ.

ಹಣಕಾಸು ಸಚಿವಾಲಯವು ಸಂಸತ್ತಿಗೆ ನೀಡಿದ ಮಾಹಿತಿಯ ಅನುಸಾರ 'ಮುದ್ರ ಲಿಮಿಟೆಡ್' 2015-16ರ ಅವಧಿಗೆ ಬ್ಯಾಂಕೇತರ ಹಣಕಾಸು ಮಂಡಳಿ' (Non Banking Financial Company (NBFC) - ಅತಿ ಸಣ್ಣ ಹಣಕಾಸು ಸಂಸ್ಥೆ (MFIs) ಗಳಿಗೆ ಕೇವಲ 32.87 ಬಿಲಿಯನ್ ಮೊತ್ತವನ್ನು ನೀಡಿದೆ.

ನಗರ ಗೃಹ ಫಲಾನುಭವಗಳು

ಮೋದಿ ಜುಮ್ಲಾ: 'ಪ್ರಧಾನ ಮಂತ್ರಿ ಆವಾಸ್ ಯೋಜನೆ'ಯ ಅಡಿಯಲ್ಲಿ ಎರಡು ಮಧ್ಯಮ ಆದಾಯ ಹಂತಗಳನ್ನು ರೂಪಿಸಲಾಗಿದೆ. 2017ರಲ್ಲಿ ತೆಗೆದುಕೊಳ್ಳುವ 9 ಲಕ್ಷದವರೆಗಿನ ಸಾಲಕ್ಕೆ 4% ಬಡ್ಡಿಯ ಆರ್ಥಿಕ ಸಹಾಯ ಸಿಗುತ್ತದೆ. 12 ಲಕ್ಷದವರೆಗಿನ ಸಾಲಕ್ಕೆ 3% ಬಡ್ಡಿಯ ಆರ್ಥಿಕ ಸಹಾಯ ಸಿಗುತ್ತದೆ.

ವಾಸ್ತವ ಸಂಗತಿ: ಯುಪಿಎ ಸರ್ಕಾರದ 'ಇಂದಿರಾ ಆವಾಸ್ ಯೋಜನೆ'ಯನ್ನು ಹೆಸರು ಬದಲಾಯಿಸಿ ಅದರ ಎನ್‌ಡಿಎ ನಕಲು ರೂಪವೇ ಈ 'ಪ್ರಧಾನ ಮಂತ್ರಿ ಆವಾಸ್ ಯೋಜನೆ'. ಎಲ್ಲರಿಗೂ ಮನೆ ನಿರ್ಮಾಣ ಎನ್ನುವ ಸರ್ಕಾರದ ಸಂಕಲ್ಪದ ಅಡಿಯಲ್ಲಿ 2022ರ ಒಳಗೆ 20 ಮಿಲಿಯನ್ ಮನೆಗಳನ್ನು ನಿರ್ಮಿಸಲು ಅಂದಿನ ಯುಪಿಎ ಸರ್ಕಾರ ಈ ಯೋಜನೆಯನ್ನು ರೂಪಿಸಿತ್ತು. ಆದರ ತೆಳುವಾದ ರೇಖಾಚಿತ್ರದ ನಕಲಿ ಅವತಾರವೇ ಈ 'ಪ್ರಧಾನ ಮಂತ್ರಿ ಆವಾಸ್ ಯೋಜನೆ'. 6 ಲಕ್ಷ ಮೊತ್ತದ ಸಾಲದವರೆಗೂ ಶೇಕಡಾ 6.5 ರಷ್ಟು ಪ್ರಮಾಣದ ಬಡ್ಡಿ ಸಬ್ಸಿಡಿ ಇರುವ ಈ ಯೋಜನೆಯಲ್ಲಿ ಅನೇಕ ನಿಬಂಧನೆಗಳಿವೆ. 3 ಲಕ್ಷದ ವರೆಗಿನ ವಾರ್ಷಿಕ ಆದಾಯ ಹೊಂದಿರುವ ಕುಟುಂಬ/ವ್ಯಕ್ತಿಗೆ 30 ಚದುರಮೀಟರ್ ಮನೆಯನ್ನು 3 ಲಕ್ಷದಿಂದ 6 ಲಕ್ಷದೊಳಗಿನ ವಾರ್ಷಿಕ ಆದಾಯವಿರುವ ಕುಟುಂಬ/ವ್ಯಕ್ತಿಗೆ 60 ಚದುರ ಮೀಟರ್ ಮನೆಯನ್ನು ಕಟ್ಟಿಕೊಳ್ಳಲು ಅನುಮತಿ ನೀಡಲಾಗಿದೆ. ಏಪ್ರಿಲ್ 2015- ಡಿಸೆಂಬರ್ 2016ರವರೆಗೆ 6,700 ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಇದುವರೆಗೂ ಕೇಂದ್ರ ಸರ್ಕಾರವು ತನ್ನ ಪಾಲಿನ 18,800 ಕೋಟಿಯಲ್ಲಿ ಕೇವಲ 4,270 ಕೋಟಿ ಬಿಡುಗಡೆ ಮಾಡಿದೆ.

ಗ್ರಾಮೀಣ ಗೃಹ ಫಲಾನುಭವಗಳು

ಮೋದಿ ಜುಮ್ಲಾ: ಬಡವರಿಗಾಗಿ 'ಪ್ರಧಾನ ಮಂತ್ರಿ ಆವಾಸ್ ಯೋಜನೆ'ಯ ಅಡಿಯಲ್ಲಿ ಗ್ರಾಮೀಣ ಭಾಗದಲ್ಲಿ ಶೇಕಡಾ 33 ಪ್ರಮಾಣದಲ್ಲಿ ಏರಿಸಲು ನಿರ್ಧರಿಸಲಾಗಿದೆ.

ವಾಸ್ತವ ಸಂಗತಿ: ಈ ಹಣಕಾಸಿನ ವರ್ಷದಲ್ಲಿ (2016-17) ಮೇಲಿನ ಯೋಜನೆಯಡಿ ಗ್ರಾಮೀಣ ಅಭಿವೃದ್ಧಿ ಸಚಿವಾಲಯವು 3.2 ಮಿಲಿಯನ್ ಮನೆಗಳನ್ನು ನಿರ್ಮಿಸಲು ಗುರಿಯನ್ನು ಪ್ರಕಟಿಸಿತ್ತು. ಆದರೆ ಇಲ್ಲಿಯವರೆಗೆ ಕೇವಲ 30 ಮನೆಗಳು ಸಂಪೂರ್ಣಗೊಂಡಿವೆ.

ಉಪಸಂಹಾರ

ಹಣದ ನಗದು ವಹಿವಾಟು ಹೆಚ್ಚಿದಷ್ಟೂ ಹಣದುಬ್ಬರವೂ ಹೆಚ್ಚುತ್ತದೆ ಎಂದು ಮೋದಿ ತಮ್ಮ ಅಂದಿನ ಭಾಷಣದಲ್ಲಿ ನಗದುರಹಿತ ವಹಿವಾಟನ್ನು ಸಮರ್ಥಿಸಿಕೊಂಡಿದ್ದರು. ಆದರೆ ಇದು ಹಸೀ ಸುಳ್ಳು ಎಂದು ಇತರೇ ದೇಶಗಳ ಅಂಕಿಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ. ಜಿಡಿಪಿಯ ಶೇಕಡಾ 3 ಪ್ರಮಾಣದಲ್ಲಿ ನಗದು ವಹಿವಾಟಿರುವ ಬ್ರೆಜಿಲ್‌ನಲ್ಲಿ ಹಣದುಬ್ಬರದ ಪ್ರಮಾಣ ಶೇಕಡಾ 7. ಜಿಡಿಪಿಯ ಶೇಕಡಾ 10.5 ಪ್ರಮಾಣದಲ್ಲಿ ನಗದು ವಹಿವಾಟು ಇರುವ ಸ್ವಿಜರ್‌ಲೆಂಡಿನಲ್ಲಿ ಹಣದುಬ್ಬರದ ಪ್ರಮಾಣ 0.37.

ಜಿಡಿಪಿಯ ಶೇಕಡಾ 11.8 ಪ್ರಮಾಣದಲ್ಲಿ ನಗದು ವಹಿವಾಟು ಇರುವ ಇಂಡಿಯಾದಲ್ಲಿ ಹಣದುಬ್ಬರ ಶೇಕಡಾ 9.5. ಅಂದರೆ ಬ್ರೆಜಿಲ್‌ನಲ್ಲಿ ನಗದು ವಹಿವಾಟು ಕಡಿಮೆ ಇದೆ ಆದರೆ ಹಣದುಬ್ಬರ ಜಾಸ್ತಿ ಇದೆ. ಸ್ವಿಸ್ ದೇಶದಲ್ಲಿ ಹಣದ ವಹಿವಾಟಿನ ಪ್ರಮಾಣ ಜಾಸ್ತಿ ಇದೆ ಆದರೆ ಹಣದುಬ್ಬರ ಇಳಿಮುಖವಾಗಿದೆ ಮತ್ತು ಋಣಾತ್ಮಕವಾಗಿದೆ.

ಈ ಮೋದಿಯ ಆಡಳಿತದಲ್ಲಿ ಬಂಡವಾಳಶಾಹಿಗಳ ಬೋರ್ಡ್‌ರೂಂನ ಖಾಸಗಿ ಆಡಳಿತ ಮತ್ತು ರಾಜ್ಯದ ಸರ್ಕಾರಿ ಆಡಳಿತ ವಿಲೀನಗೊಂಡು ಬಂಡವಾಳಶಾಹಿಗಳ ಖಾಸಗಿ ಸಾಮ್ರಾಜ್ಯ ಈ ಮೋದಿಯೆಂಬ ಚಾನಲ್‌ನ ಮೂಲಕ ಸ್ಥಾಪಿತಗೊಳ್ಳುತ್ತಿದೆ. ಇದಕ್ಕಾಗಿಯೇ ಈ ಕಾರ್ಪೋರೇಟ್ ವಲಯ ಮೋದಿ ಎನ್ನುವ ಚಾನಲ್ ಮೂಲಕ 2014ರ ಚುನಾವಣೆಯಲ್ಲಿ ಕೋಟಿಗಟ್ಟಲೆ ಹಣವನ್ನು ಹರಿಸಿದ್ದು. ಮೂವತ್ತರ ದಶಕದಲ್ಲಿ ಯುರೋಪಿನಲ್ಲಿ ಈ ಬಗೆಯ ಇದೀ ಖಾಸಗೀಕರಣದ ಪ್ರಕ್ರಿಯೆಯನ್ನೇ ಫ್ಯಾಸಿಸ್ಟರು ಅಧಿಕೃತವಾಗಿ 'ಫ್ಯಾಸಿಸಂ' ಎಂದೇ ಹೆಮ್ಮೆಯಿಂದ ಕರೆದರು. ಮೂವತ್ತರ ದಶಕದಲ್ಲಿ ಮುಸಲೋನಿ ಮತ್ತು ಹಿಟ್ಲರ್ ಮಾಡಿದ್ದು ಇದನ್ನೇ. ಇಟಲಿ ಮತ್ತು ಜರ್ಮನಿಯಲ್ಲಿ ಒಂದು ಬಗೆಯ ಸಮೂಹ ಸನ್ನಿಯನ್ನೇ ಸೃಷ್ಟಿಸಿದರು. ಇಂದು ಮೋದಿ ಅದೇ ಬಗೆಯ ಸಮೂಹಸನ್ನಿಯನ್ನು ಇಂಡಿಯಾದಲ್ಲಿ ಸೃಷ್ಟಿಸಿದ್ದಾರೆ.

■ ಬಿ. ಶ್ರೀಪಾದ ಭಟ್

ಕಪ್ಪು ರಾಕ್ಷಸರ ಹಾವಳಿ



ದೊಡ್ಡವರಿಗಾಗಿ ಮಕ್ಕಳ ಕಥೆ

ಒಂದಾನೊಂದು ಕಾಲದಲ್ಲಿ ಪಾಪತಿ ಮತ್ತು ನಮೋಮತಿ ಎಂಬ ರಾಜ, ರಾಣಿಯರು ಇದ್ದರು. ಇಬ್ಬರಿಗೂ ಒಂದು ಕೆಟ್ಟ ಬುದ್ಧಿ ಇತ್ತು. ಅದೇನೆಂದರೆ ಹೆಚ್ಚು ಹೆಚ್ಚು ಹಣ, ಒಡವೆ, ಚಿನ್ನ, ವಜ್ರ, ವೈಢೂರ್ಯಗಳನ್ನು ಗಳಿಸಬೇಕೆಂಬ ದುರಾಸೆ. ಎಷ್ಟೇ ಇದ್ದರೂ ಇನ್ನಷ್ಟು ಬೇಕು ಎಂದು ಅವರಿಬ್ಬರು ಕನಸು ಕಾಣುತ್ತಿದ್ದರು. ಆದ್ದರಿಂದ ಅವರಿಬ್ಬರು ಒಂದು ದಿನ ರಾಜ್ಯದ ಎಲ್ಲಾ ಶ್ರೀಮಂತರು, ಜಮೀನುದಾರರು, ವ್ಯಾಪಾರಿಗಳು, ಪೂಜಾರಿಗಳು ಮತ್ತು ಮಂತ್ರಿಗಳ ಸಭೆ ಕರೆದರು. ಸಭೆಯಲ್ಲಿ ಪಾಪತಿ ರಾಜ ಎಲ್ಲರನ್ನು ಕುರಿತು ಹೀಗೆ ಹೇಳಿದ: "ಗೌರವಾನ್ವಿತ ಗಣ್ಯರೆ! ಈ ಸಭೆಯ ಉದ್ದೇಶ ನಮ್ಮ ರಾಜ್ಯವನ್ನು ವಿಸ್ತರಿಸುವುದಕ್ಕಾಗಿ ನಾವು ಮಾಡಬೇಕಾದ ಸಿದ್ಧತೆಗಳ ಬಗ್ಗೆ ಚರ್ಚಿಸಲು. ನೆರೆ ರಾಜ್ಯಗಳು ನಮಗೆ ಕಪ್ಪ-ಕಾಣಿಕೆಗಳನ್ನು ನೀಡದೆ, ಬರಬೇಕಾದ ಹಣ, ತೆರಿಗೆಯನ್ನು ಕೊಡದೆ ನಮ್ಮ ವಿರುದ್ಧ ಸೆಟೆದು ನಿಂತಿದ್ದಾರೆ. ಯಾವ, ಯಾವ ರಾಜ್ಯಗಳು ನಮ್ಮ ವಿರುದ್ಧ ಇದ್ದಾವೊ ಆ ರಾಜ್ಯಗಳ ಮೇಲೆ ನಾವು ಆಕ್ರಮಣ ಮಾಡಿ ಅಲ್ಲಿರುವ ಹಣ, ಸಂಪತ್ತು, ಐಶ್ವರ್ಯವನ್ನು ನಮ್ಮ ರಾಜ್ಯಕ್ಕೆ ಸಾಗಿಸಬೇಕು. ಇದಕ್ಕೆಲ್ಲಾ ನಿಮ್ಮ ಸಹಕಾರ ಬೇಕಾಗಿರುವುದರಿಂದ ಈ ಸಭೆಗೆ ನಿಮ್ಮನ್ನೆಲ್ಲಾ ಕರೆದಿದ್ದೇನೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು ತಿಳಿಸಬೇಕು?"

ಸಭೆಗೆ ಬಂದವರೆಲ್ಲರೂ ಒಕ್ಕೊರಲಿನಿಂದ ಕೇಳಿದರು, "ನೆರೆ ರಾಜ್ಯಗಳ ಮೇಲೆ ಆಕ್ರಮಣ ಮಾಡುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ ನಿಮಗೆ ಸಹಕಾರ ನೀಡುವುದರಿಂದ ನಮಗೇನು ಲಾಭ? ನಮ್ಮಿಂದ ಹಣ, ಸಾಮಗ್ರಿಗಳನ್ನು ಪಡೆದು, ಯುದ್ಧ ಮಾಡುತ್ತೀರಿ. ಬದಲಾಗಿ ನಮಗೇನು ನೀವು ಕೊಡುತ್ತೀರಿ?" ಅದಕ್ಕೆ ಉತ್ತರವಾಗಿ ನಮೋಮತಿ ರಾಣಿ, "ಅದರ ಬಗ್ಗೆ ಸಂಶಯ ಬೇಡ. ಬಂದ ಹಣ, ಸಂಪತ್ತು, ವಜ್ರ, ವೈಢೂರ್ಯಗಳಲ್ಲಿ ನಿಮಗೂ ಒಂದು ಪಾಲು ಕೊಡುತ್ತೇವೆ. ನೀವು ಎಷ್ಟು ಖರ್ಚು ಮಾಡುತ್ತೀರೊ ಅದರ ಎರಡು ಪಟ್ಟು ಲಾಭ ಬರುವ ಹಾಗೆ ನಾವು ನೋಡಿಕೊಳ್ಳುತ್ತೇವೆ" ಎಂದು ಭರವಸೆ ನೀಡಿದಳು. ರಾಣಿ ನೀಡಿದ ಭರವಸೆಗೆ ಸಭೆಯಲ್ಲಿರುವವರೆಲ್ಲರೂ ಸಮ್ಮತಿಸಿ ಯುದ್ಧಕ್ಕೆ ಸಹಾಯ ಮಾಡಲು ಒಪ್ಪಿದರು.

ಪಾಪತಿ ರಾಜ ತನ್ನ ಅಪಾರ ಸಂಖ್ಯೆಯ ಸೈನಿಕರನ್ನು ಕರೆದುಕೊಂಡು ನೆರೆ ರಾಜ್ಯಗಳ ಮೇಲೆ ಆಕ್ರಮಣ ಮಾಡಿ, ಅಲ್ಲಿ ಸಿಕ್ಕ ಹಣ, ಸಂಪತ್ತು, ಅಪಾರ ರಾಶಿಯ ವಜ್ರ, ವೈಢೂರ್ಯ, ಚಿನ್ನ, ಬೆಳ್ಳಿನಾಣ್ಯಗಳನ್ನೆಲ್ಲಾ ಸೂರೆ ಮಾಡಿದ. ತನ್ನ ರಾಜ್ಯಕ್ಕೆ ವಾಪಾಸು ಬಂದಮೇಲೆ ಕೊಟ್ಟ ಮಾತಿನಂತೆ ಶ್ರೀಮಂತರಿಗೆ, ವ್ಯಾಪಾರಿಗಳಿಗೆ, ಪೂಜಾರಿಗಳಿಗೆ ಮತ್ತು ಜಮೀನುದಾರರಿಗೆ ಸೂರೆ ಮಾಡಿದ ಸಂಪತ್ತಿನಲ್ಲಿ ಒಂದು ಪಾಲನ್ನು ನೀಡಿದ. ಎಲ್ಲರಿಗೂ ಅತ್ಯಂತ ಸಂತೋಷವಾಯಿತು. ಎಲ್ಲರೂ ತಮ್ಮ, ತಮ್ಮ ಪಾಲನ್ನು ತೆಗೆದುಕೊಂಡು ಮನೆಗೆ ಹೋದರು.

ಆದರೆ ಮನೆಗೆ ಹೋದ ಮೇಲೆ ಒಂದು ಸಮಸ್ಯೆ ಎದುರಾಯಿತು. ಇಷ್ಟೊಂದು ವಜ್ರ, ವೈಢೂರ್ಯ, ಚಿನ್ನ, ಬೆಳ್ಳಿ, ನಾಣ್ಯಗಳನ್ನು ಎಲ್ಲಿ ಇಡೋದು? ಕಳ್ಳರು, ದರೋಡೆಕೋರರಿಂದ ಇಷ್ಟೊಂದು ಸಂಪತ್ತನ್ನು ಸುರಕ್ಷಿತವಾಗಿ ಎಲ್ಲಿ ಬಚ್ಚಿಡೋದು? ಹಾಗಾಗಿ ಯಾರ ಕಣ್ಣಿಗೂ ಕಾಣದಂತೆ ತಮ್ಮ ಪಾಲಿಗೆ ಬಂದಿದ್ದ ವಜ್ರ, ವೈಢೂರ್ಯ, ಚಿನ್ನ, ಬೆಳ್ಳಿಯನ್ನು ತಮ್ಮತಮ್ಮ ಮನೆಯ ನೆಲಮಾಳಿಗೆಯಲ್ಲಿ ಬಚ್ಚಿಟ್ಟರು. ಪಾಪತಿ ಮತ್ತು ನಮೋಮತಿಗೂ ಇದೇ ಸಮಸ್ಯೆ ಎದುರಾಯಿತು. ಅವರು ಕೂಡ ಎಲ್ಲವನ್ನು ಯಾರಿಗೂ ಗೊತ್ತಾಗದ ಹಾಗೆ ಅರಮನೆಯ ರಹಸ್ಯ ಕೋಣೆಯಲ್ಲಿ ಬಚ್ಚಿಟ್ಟರು.

ಅನೇಕ ದಿನಗಳು ಕಳೆದವು. ನೆಲಮಾಳಿಗೆ ಮತ್ತು ಅರಮನೆಯ ರಹಸ್ಯ ಕೋಣೆಯಲ್ಲಿ ಬಚ್ಚಿಟ್ಟಿದ್ದ ಚಿನ್ನ, ವಜ್ರ, ವೈಢೂರ್ಯಗಳಿಗೆ ಉಸಿರಾಡಲು ಆಗದೆ, ಪ್ರಾಣಹೋಗುವ ದುಸ್ಥಿತಿ ಬಂತು. ಎಷ್ಟು ದಿನ ಅಂತ ಕಗ್ಗತ್ತಲ ಕೋಣೆಯಲ್ಲಿ ಇರೋದು? ಹೇಗಾದರು ಈ ಜಾಗದಿಂದ ತಪ್ಪಿಸಿಕೊಂಡು ಹೋಗಬೇಕೆಂದು ಅವು ನಿರ್ಧರಿಸಿದವು. ಹಿಂಸೆಯನ್ನು ತಾಳಲಾರದೆ ಅವುಗಳೆಲ್ಲಾ ಕಪ್ಪು ರಾಕ್ಷಸಗಳಾಗಿ ಬದಲಾಗಿ, ಕತ್ತಲ ಕೋಣೆಯಿಂದ ತಪ್ಪಿಸಿಕೊಂಡು ಹೊರಬಂದವು. ತಮ್ಮನ್ನು ಈ ದುಸ್ಥಿತಿಗೆ ತಂದಿಟ್ಟವರ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ಕಟಕಟ ಹಲ್ಲು ಕಡಿದವು. ಒಂದೊಂದಾಗಿ ರಾಜ್ಯದ ಎಲ್ಲಾ ಶ್ರೀಮಂತರು, ಜಮೀನುದಾರರು, ಪೂಜಾರಿಗಳು, ವ್ಯಾಪಾರಿಗಳು ಮತ್ತು ರಾಜರಾಣಿಯರನ್ನು ಅವು ಕಾಡಲು ಶುರು ಮಾಡಿದವು. ದೊಡ್ಡ ದೊಡ್ಡ ವ್ಯಾಪಾರಿಗಳನ್ನು ಅಪಹರಣ ಮಾಡಿ, ತಿನ್ನಲು ಶುರು ಮಾಡಿದವು. ಅರಮನೆಯ ಅಡುಗೆ ಮನೆಯನ್ನು ಸೂರೆ ಮಾಡಿ, ತಿಂದು ತೇಗಿದವು. ಸೈನಿಕರು ಒಬ್ಬೊಬ್ಬರಾಗಿ ಕೊಲ್ಲಲ್ಪಟ್ಟರು. ಪಾಪತಿ, ನಮೋಮತಿಯರ ಏಕೈಕ ರಾಜಕುಮಾರನನ್ನು ಅಪಹರಣ ಮಾಡಿ ಏಳು ಸಮುದ್ರಗಳಾಚೆ ಇರುವ ದ್ವೀಪದಲ್ಲಿ ಇರಿಸಿದವು. ಕಪ್ಪು ರಾಕ್ಷಸರನ್ನು ಈಗ ತಡೆಯಲು ಯಾರಿಂದಲೂ ಸಾಧ್ಯವಾಗಲಿಲ್ಲ, ಅವುಗಳ ಅಟ್ಟಹಾಸ ಎಲ್ಲೇ ಮೀರಿತು.

ಕಪ್ಪು ರಾಕ್ಷಸರ ಕಾಟ ತಡೆಯಲಾರದೆ ಪಾಪತಿ ಮತ್ತು ನಮೋಮತಿ ದೇವರ ಮೊರೆ ಹೊಕ್ಕರು. ದೇವರು ಪ್ರತ್ಯಕ್ಷನಾದಾಗ ರಾಜ-ರಾಣಿಯರಿಬ್ಬರು ತಮ್ಮ ಗೋಳನ್ನು ತೋಡಿಕೊಂಡರು. ಏನಾದರು ಪರಿಹಾರ ಕೊಡಬೇಕೆಂದು ಅಂಗಲಾಚಿದರು. ದೇವರು, "ಪಾಪತಿ, ನಮೋಮತಿ, ನೀವು ನಿಮ್ಮ ಪಾಪದ ಕರ್ಮಗಳನ್ನು ಈ ರೀತಿ ಅನುಭವಿಸುತ್ತಿದ್ದೀರಿ. ಇದರಿಂದ ನಿಮಗೆ ಬಿಡುಗಡೆಯಿಲ್ಲ. ನಾನೇನು ಮಾಡಲಾರೆ" ಎಂದು ಒಂದೇ ಮಾತಿನಲ್ಲಿ ಕಡ್ಡಿ ಮುರಿದ ಹಾಗೆ ಹೇಳಿದ. ರಾಜ-ರಾಣಿಯರಿಗೆ ದೇವರ ಮಾತುಗಳು ಬರ-ಸಿಡಿಲಿನಂತೆ ಬಡಿಯಿತು. ಆದರೂ ದೇವರನ್ನು ಬಿಡಲಿಲ್ಲ. ಅವನ ಕಾಲಿಗೆ ಬಿದ್ದು "ತಪ್ಪಾಯಿತು, ದೇವರೆ. ಏನೋ ದುರಾಸೆಯಿಂದ ಈ ಕೃತ್ಯ ಮಾಡಿದೆವು. ಮತ್ತೆಂದೂ ಇಂತಹ ಕೆಲಸ ಮಾಡುವುದಿಲ್ಲ. ಇದೊಂದು ಸಾರಿ ನಮ್ಮನ್ನು ಉಳಿಸು" ಎಂದು ಬೇಡಿಕೊಂಡರು. ಆಗ ದೇವರು, "ನಿಮ್ಮ ಮಾತುಗಳನ್ನು ಕೇಳಿದರೆ ನಿಮಗೆ ನಿಮ್ಮ ತಪ್ಪಿನ ಅರಿವಾಗಿದೆ ಅಂತ ಅನಿಸುತ್ತದೆ. ಆದರು ನಾನು ಏನೂ ಮಾಡದವನಾಗಿದ್ದೇನೆ. ಆದರೆ ಒಂದು ಪರಿಹಾರವನ್ನು ಸೂಚಿಸಬಲ್ಲೆ. ಅದನ್ನು ನೀವೇ ನಿಭಾಯಿಸಬೇಕು. ಇಲ್ಲಿಂದ ಏಳು ನದಿ, ಏಳು ಬೆಟ್ಟಗಳನ್ನು ದಾಟಿದರೆ ಒಂದು ಕಾಡು ಸಿಗುತ್ತದೆ. ಆ ಕಾಡಿನ ಅಂಚಿನಲ್ಲಿ ಒಬ್ಬ ಬಡ ಸಾಧು ತನ್ನ ಹೆಂಡತಿ ಮಕ್ಕಳ ಜೊತೆಗೆ ವಾಸವಾಗಿದ್ದಾನೆ. ಅವನು ತನ್ನ ತೋಟದಲ್ಲಿ ಕಷ್ಟಪಟ್ಟು ಬಿಳಿ ಬಣ್ಣದ ಮಾಂತ್ರಿಕ ಹಣ್ಣುಗಳನ್ನು ರಾಶಿ, ರಾಶಿ ಬೆಳೆದಿದ್ದಾನೆ. ಆ ಹಣ್ಣುಗಳನ್ನು ನೀನು ತಂದು ನಾನು ಹೇಳುವ ಮಂತ್ರವನ್ನು ಉಚ್ಚರಿಸಿದರೆ ನೀನು ಬಯಸಿದಂ[ತೆ] ಅವು ಬದಲಾಗುತ್ತವೆ. ಅವುಗಳಿಂದ ಈ ಕಪ್ಪು ರಾಕ್ಷಸ[ರ] ಹಾವಳಿಯನ್ನು ತಡೆಯಬಹುದು. ಮತ್ತೊಂದು ವಿಷಯ[:] ನಿನ್ನ ಕೆಲಸವಾದ ಕೂಡಲೇ ಆ ಬಿಳಿ ಹಣ್ಣುಗಳನ್ನು ಆ ಬಡ ಸಾಧುವಿಗೆ ವಾಪಾಸು ಕೊಡುವುದನ್ನು ಮರೆಯಬೇಡ" ಎಂದು ಹೇಳಿ ಆ ದೇವರು ಮಾಯವಾದ.

ಪಾಪತಿ ತನ್ನ ಅಳಿದುಳಿದ ಸೈನಿಕರನ್ನು ಆ ಕಾಡಿಗೆ ಕಳಿಸಿ, ಬಿಳಿ ಹಣ್ಣುಗಳನ್ನು ತರಲು ಆದೇಶಿಸಿದ. ಸೈನಿಕರು ಏಳು ನದಿ, ಏಳು ಬೆಟ್ಟಗಳನ್ನು ದಾಟಿ ಆ ಬಡ ಸಾಧು ಇರುವ ಜಾಗಕ್ಕೆ ಬಂದರು. ಬಂದಾಗ ಆ ಸಾಧು ತನ್ನ ಹೆಂಡತಿ ಮತ್ತು ಮಕ್ಕಳ ಜೊತೆಗೆ ತಾನು ಬೆಳೆದ ಬಿಳಿ ಹಣ್ಣುಗಳನ್ನು ತಿನ್ನುತ್ತಿದ್ದ. ಸೈನಿಕರಲ್ಲಿ ಒಬ್ಬ ಸಾಧುವನ್ನು ಗದರಿಸಿ ತೋಟದ ಹಣ್ಣುಗಳನ್ನು ಅರಮನೆಗೆ ಸಾಗಿಸಲು ಹೇಳಿದ. ಸಾಧು ಹೇಳಿದ, "ದೊರೆ, ನಾನು ಕಷ್ಟಪಟ್ಟು ಈ ಹಣ್ಣುಗಳನ್ನು ಬೆಳೆದಿದ್ದೇನೆ. ಇದೊಂದೆ ನನ್ನ ಕುಟುಂಬದ ಆಸರೆ. ದಯವಿಟ್ಟು ಈ ಹಣ್ಣುಗಳನ್ನು ಕೇಳಬೇಡಿ" ಎಂದು ದೈನ್ಯವಾಗಿ ಬೇಡಿಕೊಂಡ. ಆದರೆ ಆ ಸೈನಿಕರು ಬಡ ಸಾಧುವಿನ ಮಾತು ಕೇಳದೆ, ತಾವೆ ಆ ತೋಟದ ಎಲ್ಲಾ ಹಣ್ಣುಗಳನ್ನು ಕಿತ್ತುಕೊಂಡು ಅರಮನೆಗೆ ತೆಗೆದುಕೊಂಡು ಹೋದರು. ಅವರು ಹೋಗುವ ಮೊದಲು ಬಡ ಸಾಧು ದುಃಖವನ್ನು ತಡೆಯಲಾರದೆ ರಾಜ-ರಾಣಿಯರ ಮೇಲೆ ಶಾಪ ಹಾಕಿದ, "ನನ್ನಂತ ಬಡವರ ಅನ್ನವನ್ನು ಕಸಿದುಕೊಳ್ಳುವ ನೀವು ಹಾಳಾಗಿ ಹೋಗುತ್ತೀರ. ನಿಮಗೆ ಒಳ್ಳೆಯದಾಗುವುದಿಲ್ಲ." ಸೈನಿಕರು ಇವನ ಮಾತು ಕೇಳಿ "ಮೂರ್ಖ ಸಾಧು. ಏನೇನೊ ಬಡ ಬಡಿಸುತ್ತಿದ್ದಾನೆ" ಎಂದು ನಕ್ಕುಬಿಟ್ಟರು.

* * * *

ಅಪಾರಸಂಖ್ಯೆಯ ಬಿಳಿ ಹಣ್ಣುಗಳನ್ನು ನೋಡಿದ ಪಾಪತಿ ಮತ್ತು ನಮೋಮತಿಯರ ಕಣ್ಣುಗಳು ಅರಳಿದವು. ತಡಮಾಡದೆ ದೇವರು ಹೇಳಿಕೊಟ್ಟ ಮಂತ್ರವನ್ನು ಉಚ್ಚರಿಸಿ ಆ ಬಿಳಿ ಹಣ್ಣುಗಳನ್ನು ಸಹಸ್ರಾರು ಸೈನಿಕರನ್ನಾಗಿ ಬದಲಾಯಿಸಿದರು. ನಂತರ ಕಪ್ಪು ರಾಕ್ಷಸರನ್ನು ಸಂಹರಿಸಲು ರಾಜ ಬಿಳಿ ಸೈನಿಕರಿಗೆ ಆದೇಶ ನೀಡಿದ. ಬಿಳಿ ಸೈನಿಕರು ಎಲ್ಲಾ ಕಡೆ ಹೋಗಿ ಕಪ್ಪು ರಾಕ್ಷಸರನ್ನು ಹುಡುಕಿ, ಹುಡುಕಿ ನಾಶ ಮಾಡಿದರು. ಕೆಲವೇ ದಿನಗಳಲ್ಲಿ ರಾಜ್ಯದಲ್ಲಿ ಕಪ್ಪು ರಾಕ್ಷಸರ ಹಾವಳಿ ಕೊನೆಗೊಂಡಿತು. ಈಗ ದೇವರು ಹೇಳಿದಂತೆ ಬಿಳಿ ಸೈನಿಕರನ್ನು ಬಿಳಿ ಹಣ್ಣುಗಳನ್ನಾಗಿ ಬದಲಾಯಿಸಿ ಆ ಬಡ ಸಾಧುವಿಗೆ ವಾಪಾಸು ಕೊಡಬೇಕಾದ ಸರದಿ ಬಂತು. ಆದರೆ ನಮೋಮತಿ ಒಂದು ಕುತಂತ್ರ ಮಾಡಿದಳು. ಬಿಳಿ ಹಣ್ಣುಗಳನ್ನು ಬಡ ಸಾಧುವಿಗೆ ಹಿಂದಿರುಗಿಸದಿರಲು ಪಾಪತಿಯ ಮನವೊಲಿಸಿದಳು. ಇಬ್ಬರು ಸೇರಿ ಮತ್ತೊಮ್ಮೆ ದೇವರು ಹೇಳಿಕೊಟ್ಟ ಮಂತ್ರವನ್ನು ಉಚ್ಚರಿಸಿ ಬಿಳಿ ಸೈನಿಕರನ್ನು ರಾಶಿ, ರಾಶಿ ವಜ್ರ, ವೈಢೂರ್ಯ, ಚಿನ್ನ, ಬೆಳ್ಳಿ ನಾಣ್ಯಗಳನ್ನಾಗಿ ಬದಲಾಯಿಸಿದರು. ಯಾರಿಗೂ ತಿಳಿಯದ ಹಾಗೆ ಅವುಗಳನ್ನೆಲ್ಲಾ ಅರಮನೆಯ ನೆಲಮಾಳಿಗೆಯಲ್ಲಿ ಬಚ್ಚಿಟ್ಟರು.

* * * *

ನೆಲಮಾಳಿಗೆಯಲ್ಲಿರುವ ವಜ್ರ, ವೈಢೂರ್ಯ, ಚಿನ್ನ, ಬೆಳ್ಳಿ ನಾಣ್ಯಗಳಿಗೆ ಈಗ ಉಸಿರು ಕಟ್ಟುವ ಹಾಗಿದೆ, ಪ್ರಾಣ ಹೋಗುವ ದುಸ್ಥಿತಿ ಬಂದಿದೆ. ಹೀಗೆ ಸತ್ತು ಕೊಳೆಯುವ ಮೊದಲು ತಮ್ಮನ್ನು ಈ ದುಸ್ಥಿತಿಗೆ ತಂದ ಪಾಪತಿ ಮತ್ತು ನಮೋಮತಿಯ ಮೇಲೆ ಸೇಡು ತೀರಿಸಿಕೊಳ್ಳಲು ಅವು ನಿಧಾನವಾಗಿ ಕಪ್ಪು ರಾಕ್ಷಸಗಳಾಗಿ ಬದಲಾಗುತ್ತಿವೆ.

■ ಡಾ. ವಿಜಯಕುಮಾರ ಎಂ ಬೋರಟ್ಟಿ

ಆಧುನಿಕ ಶಿಕ್ಷಣದ ಹರಿಕಾರ ಸರ್ ಸಯ್ಯದ್ ಅಹಮದ್ ಖಾನ್



ಸರ್ ಸಯ್ಯದ್ ಅಹಮದ್ ಖಾನ್ (1817-1898) 9ನೇ ಶತಮಾನದ ಭಾರತರತ್ನಗಳಲ್ಲಿ ಒಬ್ಬರಾಗಿದ್ದಾರೆ. ರಂಪರೆಯ ಅತ್ಯುನ್ನತ ಮೌಲ್ಯಗಳೊಂದಿಗೆ ಭಾರತವನ್ನು ಧುನಿಕ ಶಿಕ್ಷಣದ ಪರಿಧಿಗೆ ತಂದ ದ್ರಷ್ಟಾರರಾಗಿದ್ದಾರೆ. ಸ್ಟ್ ಇಂಡಿಯಾ ಕಂಪನಿ ಸರ್ಕಾರ ಮತ್ತು ಬ್ರಿಟಿಷ್ ಂಡಿಯಾ ಸರ್ಕಾರಗಳೆರಡರ ಅನುಭವ ಹೊಂದಿದ ಅವರು ೂಸ ನಾಗರಿಕ ಜಗತ್ತಿನ ಕನಸು ಕಂಡವರಾಗಿದ್ದರು. ಲ್ಲಿಯವರೆಗೆ ಪಾಶ್ಚಿಮಾತ್ಯ ವಿದ್ಯೆ ಹಾಗೂ ಐರೋಪ್ಯ ೇಶಗಳ ದಾರಿಯ ಮೇಲೆ ಭಾರತೀಯರು ಡೆಯುವುದಿಲ್ಲವೋ ಅಲ್ಲಿಯವರೆಗೆ ವಿಶ್ವದಲ್ಲಿ ಸ್ಥಾನಮಾನ ಡೆಯಲಿಕ್ಕಾಗದು ಎಂಬುದು ಅವರ ಎಚ್ಚರಿಕೆಯ ಾತಾಗಿತ್ತು. ಭಾರತೀಯರಿಗೆ ಆಧುನಿಕ ಶಿಕ್ಷಣ ಕೊಡುವುದು ವರ ದೃಢಸಂಕಲ್ಪವಾಗಿತ್ತು. ಅಂತೆಯೆ ಅವರು ರಾಜಕೀಯದ ಡೆಗೆ ಗಮನ ಹರಿಸದೆ ಜೀವನವಿಡೀ ಮಾನವೀಯ ೌಲ್ಯಗಳು ಮತ್ತು ಸರ್ವಜನಾಂಗಗಳನ್ನು ಒಂದುಗೂಡಿಸುತ್ತ ಮೃದ್ಧಿಯ ಕಡೆಗೆ ಒಯ್ಯುವ ಶಿಕ್ಷಣದ ಬಗ್ಗೆ ಸದಾ ಂತಿಸಿದರು. ಆ ಚಿಂತನೆಗಳನ್ನು ಕಾರ್ಯಗತಗೊಳಿಸಿ ಾನವಕುಲಕ್ಕೆ ಮಾದರಿಯಾದರು.

ಧರ್ಮದ ಮೌಲ್ಯಗಳು ಹಾಗೂ ವಿಜ್ಞಾನ ಮತ್ತು ತ್ರಜ್ಞಾನದ- ಆವಿಷ್ಕಾರಗಳ ಸಂಗಮದೊಂದಿಗೆ ಹೊಸ ಸಂಸ್ಕೃತ ಜಗತ್ತಿಗಾಗಿ ಶಿಕ್ಷಣ ನೀತಿಯನ್ನು ರೂಪಿಸುವಲ್ಲಿ ಡೀ ಬದುಕನ್ನು ಸವೆಸಿದರು. ಧಾರ್ಮಿಕ ಮೂಲಭೂತ ದ, ಮೂಢನಂಬಿಕೆಗಳು ಮತ್ತು ಅನ್ಯಮತ ದ್ವೇಷದಿಂದ ದುಕಿನಲ್ಲಿ ಹೊಸದನ್ನು ಸಾಧಿಸಲಿಕ್ಕಾಗದು ಎಂಬುದು ವರ ಅಚಲ ನಿರ್ಧಾರವಾಗಿತ್ತು. ಪಾಶ್ಚಿಮಾತ್ಯ ಶಿಕ್ಷಣ ದಲೇ ಭಾರತೀಯರು ತಮ್ಮ ರಾಜಕೀಯ ಸ್ವಾತಂತ್ರ್ಯ ಡೆಯಲು ಸಾಧ್ಯ ಎಂದು ಅವರು ಹೇಳುವಲ್ಲಿ ಸ್ವಾತಂತ್ರ್ಯವು ನತೆವೆತ್ತ ಆಧುನಿಕ ಬದುಕಿನ ಅವಿಭಾಜ್ಯ ಅಂಗ ಂಬುದರ ಅರಿವಾಗದೆ ಇರದು.

ಹಿಂದೂ ಸಮಾಜ ಸುಧಾರಕ ರಾಜಾರಾಮ ೋಹನರಾಯ ಅವರಂತೆ ಸರ್ ಸಯ್ಯದ್ ಅಹಮದ್ ಾನ್ ಅವರು ಮುಸ್ಲಿಂ ಸಮಾಜದಲ್ಲಿ ಸುಧಾರಣೆಯ ಳಿ ಬೀಸುವಂತೆ ಮಾಡಿದರು. ಆ ಕಾಲದ ಮುಸ್ಲಿಂ ಮುದಾಯ ಹೊಸತನಕ್ಕೆ ತೆರೆದುಕೊಳ್ಳುವ ಸ್ಥಿತಿಯಲ್ಲಿ ರಲಿಲ್ಲ, ಆದರೆ ಖಾನ್ ಅವರು ಮುಸ್ಲಿಮರನ್ನು ೂಢನಂಬಿಕೆಗಳಿಂದ, ನಿರುತ್ಸಾಹದಿಂದ, ಮೊದ್ದುತನದಿಂದ ತ್ತು ಅಜ್ಞಾನದಿಂದ ಹೊರತರಲು ಶ್ರಮಿಸಿದರು. 57ರಲ್ಲಿ ನಡೆದ ಬಂಡಾಯದನಂತರ ಬ್ರಿಟಿಷರು ಮುಸ್ಲಿಂ ಮುದಾಯದ ಮೇಲೆ ಭಾರೀ ಒತ್ತಡ ತಂದು ಅವರನ್ನು ಸಮರ್ಥರನ್ನಾಗಿಸುವ ಯೋಜನೆ ರೂಪಿಸಿದರು. ಈ ರಣದಿಂದಾಗಿ ಮುಸ್ಲಿಮರು ಅವಮಾನಕ್ಕೊಳಗಾಗುತ್ತ ದತನದ ದಾರಿ ಹಿಡಿಯುವಂತಾಯಿತು. ಧಾರ್ಮಿಕ ೂಲಭೂತವಾದಿಗಳಿಂದಾಗಿ ಅವರು ಸರ್ಕಾರಿ ಲೆಕಾಲೇಜು ಶಿಕ್ಷಣ ಪಡೆಯುವುದರಿಂದಲೂ ದೂರ ಳಿಯತೊಡಗಿದರು. ಹಿಂದೂ ಮತ್ತು ಮುಸ್ಲಿಮರನ್ನು ನ್ನು ಎರಡು ಕಣ್ಣುಗಳೆಂದು ಹೇಳುತ್ತಿದ್ದ ಸರ್ ಸಯ್ಯದ್ ಹಮದ್ ಖಾನ್ ಅವರು ಇಬ್ಬರಿಗಾಗಿ 'ಆಂಗ್ಲೋ ಿಯಂಟಲ್ ಕಾಲೇಜ್' ಸ್ಥಾಪಿಸಿದರು. ಶಿಷ್ಯವೇತನದಲ್ಲಿ ಾದ ಹಿಂದೂ ಮತ್ತು ಮುಸ್ಲಿಂ ವಿದ್ಯಾರ್ಥಿಗಳು ಸಮಾನ ರ್ಹತೆಯನ್ನು ಪಡೆದರು.

ಸಮಾಜಸೇವೆ ಅವರ ನರನಾಡಿಗಳಲ್ಲಿ ಮನೆ ಮಾಡಿತ್ತು ತ್ತು 44ನೇ ವಯಸ್ಸಿನಲ್ಲಿ ಪತ್ನಿ ನಿಧನರಾದ ನಂತರ ರುಮದುವೆಯಾಗದೆ ಇಬ್ಬರು ಪುತ್ರರು ಮತ್ತು ಒಬ್ಬ ುತ್ರಿಯನ್ನು ಪೋಷಣ ಮಾಡಿದರು. 38 ವರ್ಷಗಳ ಸರ್ಕಾರಿ ಸೇವೆಯಲ್ಲಿದ್ದು ಬಿಡುವಿನ ವೇಳೆಯನ್ನು ಕ್ಷ ಹಾಗೂ ಸಾಮಾಜಿಕ ಕಾರ್ಯಗಳಿಗೆ ಮೀಸಲಿಟ್ಟರು. ಕ್ಷಣಿಕ ಸುಧಾರಣೆಯ ಬಗ್ಗೆ ಆಳವಾಗಿ ಚಿಂತಿಸಿ ಜನೆಗಳನ್ನು ಸಿದ್ಧಪಡಿಸಿದರು.

"ಇಂಗ್ಲೆಂಡಿನಲ್ಲಿ ನಾಗರಿಕತೆ ಬೆಳೆಯಲು ಕಾರಣವೇನೆಂದರೆ ಅಲ್ಲಿ ಎಲ್ಲ ಕಲೆಗಳು ಹಾಗೂ ವಿಜ್ಞಾನ ದೇಶದ ಆಡುವ ಭಾಷೆಯಲ್ಲೇ ಕಂಡುಬರುವುದಾಗಿದೆ. ಯಾರು ಭಾರತದ ಪರಿಸ್ಥಿತಿಯನ್ನು ಸುಧಾರಣೆ ಮಾಡಲು ಈ ಕಾರ್ಯದಲ್ಲಿ ತಮ್ಮನ್ನು ತಾವೇ ತೊಡಗಿಸಿ ಕೊಂಡಿರುವರೋ ಅವರು ಕಲೆ ಹಾಗೂ ವಿಜ್ಞಾನವನ್ನು ತಮ್ಮದೇ ಆದ ಭಾಷೆಗಳಿಗೆ ಭಾಷಾಂತರಿಸಿದರೆ ಮಾತ್ರ ಇದು ಸಾಧ್ಯವಾಗುವುದು. ಹೀಗೆಂದು ನಾನು ಬೃಹತ್ ಅಕ್ಷರಗಳಲ್ಲಿ ಹಿಮಾಲಯದ ಮೇಲೆ ಮುಂದಿನ ಜನಾಂಗ ನೆನಪಿಡಲೆಂದು ಬರೆಯಬೇಕಾಗಿದೆ" ಎಂದು ಅವರು ಹೇಳುವಲ್ಲಿ ದೇಸೀ ಭಾಷೆಗಳ ಮಹತ್ವದ ಬಗ್ಗೆ ಅವರಿಗಿರುವ ಕಾಳಜಿಯು ಎದ್ದು ಕಾಣುತ್ತದೆ.


ಆದರೆ 1870ರ ವೇಳೆಗಾಗಲೇ ಹಿಂದೂ ಮೂಲಭೂತವಾದಿಗಳು ಬಾಬು ಶಿವಪ್ರಸಾದ ಸಾಹಿಬ್ ನೇತೃತ್ವದಲ್ಲಿ ಉರ್ದು ಭಾಷೆ ಹಾಗೂ ಪರ್ಶಿಯನ್ ಲಿಪಿ ವಿರುದ್ಧ ಮಾತನಾಡುತ್ತ ಇವು ಮುಸ್ಲಿಮರ ಪೂರ್ವಾರ್ಜಿತ



ಆಸ್ತಿಯ ಹಾಗೆ ಇವೆ ಅಪಪ್ರಚಾರ ಮಾಡತೊಡಗಿದರು. ಹಿಂದೂ ಮುಸ್ಲಿಂ ಎನ್ನದೆ ಭಾರತವಾಸಿಗಳಿಗೆ ಕಲ್ಯಾಣ ಬಯಸುವ ಖಾನ್ ಅವರು ಇಂಥ ಅಹಿತಕರ ಚಟುವಟಿಕೆಗಳಿಂದಾಗಿ ದುಃಖ ಅನುಭವಿಸಿದರು. ಶಿಕ್ಷಣದಲ್ಲಿ ಮುಸ್ಲಿಮರು ಹಿಂದೂಗಳಿಗಿಂತ ಹಿಂದುಳಿದವರಾಗಿದ್ದರು. ಹಳೆಯ ವಿಚಾರಗಳನ್ನು ಬಿಟ್ಟು ಹೊಸತನಕ್ಕೆ ತುಡಿಯುವ ಮನಸ್ಥಿತಿಯನ್ನು ಹೊಂದಿರದ ಕಾರಣ ಅವರು ತಮ್ಮದೇ ಆದ ರೀತಿಯಲ್ಲಿ ಸುಧಾರಣೆ ಹೊಂದಲು ಅಸಮರ್ಥರಾಗಿದ್ದರು. ಇಂಥ ಸಂದರ್ಭದಲ್ಲಿ ಹಿಂದು ಮುಸ್ಲಿಂ ಮಧ್ಯೆ ಭೇದಭಾವ ಉಂಟುಮಾಡುವ ಷಡ್ಯಂತ್ರಗಳು ಅವರಿಗೆ ಆಘಾತವನ್ನುಂಟುಮಾಡಿದವು.

ಮಾತೃಭಾಷೆಯ ಜೊತೆ ಇಂಗ್ಲಿಷ್ ಶಿಕ್ಷಣ ಕೊಡುವ ಬಗ್ಗೆ ಅವರು ಬ್ರಿಟಿಷ್ ಸರ್ಕಾರಕ್ಕೆ ಒತ್ತಾಯಿಸಿದರು. ಭಾರತೀಯರಿಗೆ ಕೇವಲ ಜೀವನ ಸಾಗಿಸಲು ಬೇಕಾದ ಶಿಕ್ಷಣ ನೀಡುತ್ತಿದ್ದ ಬ್ರಿಟಿಷ್ ಶಿಕ್ಷಣ ನೀತಿಯನ್ನು ಅವರು ಟೀಕಿಸಿದರು. ಶಿಕ್ಷಣದ ಗುರಿ ಹಾಗೂ ಉದ್ದೇಶ ಬುದ್ಧಿಶಕ್ತಿ ಜಾಗೃತಗೊಳಿಸುವಂಥದ್ದಿರಬೇಕು. ಅಲ್ಲದೆ ಸರ್ವತೋಮುಖವಾದ ನೈತಿಕ ವ್ಯಕ್ತಿತ್ವವನ್ನು ಹೊಂದಲು ಪೂರಕವಾಗಿರಬೇಕು ಎಂಬುದು ಅವರ ದಿಟ್ಟ ನಿಲುವಾಗಿತ್ತು. ಈ ಹಿನ್ನೆಲೆಯಲ್ಲೇ ಅವರು ಮುರಾದಾಬಾದಿನಲ್ಲಿ 1859ರಲ್ಲೇ ಮದರಸಾ ಸ್ಥಾಪಿಸಿ ಹೊಸತನಕ್ಕೆ ನಾಂದಿ ಹಾಡಿದರು.

ಪಾಶ್ಚಿಮಾತ್ಯ ಜಗತ್ತಿನ ಸಾಹಿತ್ಯ ಹಾಗೂ ವಿಜ್ಞಾನವನ್ನು



ಪೂರ್ವ ಜಗತ್ತಿನವರಿಗೆ ತಲುಪಿಸುವ ಉದ್ದೇಶದಿಂದ 1863ರಲ್ಲಿ 'ವೈಜ್ಞಾನಿಕ ಸಮಾಜ' ಸ್ಥಾಪಿಸಿದರು. ಅನೇಕ ಹಿಂದೂಗಳು ಮತ್ತು ಮುಸ್ಲಿಮರು ಈ ಕೂಟವನ್ನು ಸೇರಿಕೊಂಡರು. ವೈಜ್ಞಾನಿಕ ಕೂಟವನ್ನು ಸ್ಥಾಪಿಸಿದ ಎರಡೇ ತಿಂಗಳಲ್ಲಿ ಗಾಜಿಪುರದಲ್ಲಿ ಹಿಂದೂ ಮತ್ತು ಮುಸ್ಲಿಮರಿಗಾಗಿ ಒಂದು ಶಾಲೆಯನ್ನು ಸ್ಥಾಪಿಸಿದರು. ಇಂಗ್ಲಿಷ್, ಉರ್ದು, ಪರ್ಶಿಯನ್ ಹೊರತಾಗಿ ಈ ಶಾಲೆ ಸಂಸ್ಕೃತ ಭಾಷೆಯಲ್ಲಿ ಬೋಧನಾ ಕ್ರಮವನ್ನು ನೋಡಿದಾಗ ಸರ್ ಸಯ್ಯದ್ ಅಹಮದ್ ಖಾನ್ ಅವರ ಉದಾತ್ತ ಗುಣದ ಅರಿವಾಗದೆ ಇರದು.


1864ರಲ್ಲಿ ವೈಜ್ಞಾನಿಕ ಕೂಟವನ್ನು ಗಾಜಿಪುರದಿಂದ ಅಲೀಘಡಗೆ ಸ್ಥಳಾಂತರಿಸಲಾಯಿತು. ಭಾಷಾಂತರ, ವಿಜ್ಞಾನ, ಕೃಷಿ ಹಾಗೂ ತಾಂತ್ರಿಕ ಶಿಕ್ಷಣ ಈ ವೈಜ್ಞಾನಿಕ ಕೂಟದ ಸಾಧನೆಗಳಾಗಿವೆ.

1867ರಲ್ಲಿ ಬನಾರಸದಲ್ಲಿ ಕೆಲವು ಪ್ರಮುಖ ಹಿಂದೂ ಮೂಲಭೂತವಾದಿಗಳು ನ್ಯಾಯಾಲಯಗಳಲ್ಲಿ ದೇವನಾಗರಿಲಿಪಿಯಲ್ಲಿ ಹಿಂದಿ ಬಯಸಿ ಪರ್ಶಿಯನ್ ಹಾಗೂ ಉರ್ದು ಭಾಷೆಯನ್ನು ಕೈಬಿಡಬೇಕೆಂದು ಸುಸಂಘಟಿತ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಹಿಂದೂ ಮುಸ್ಲಿಂ ಭೇದಭಾವಕ್ಕೆ ಇದು ನಾಂದಿ ಹಾಡುವುದೆಂಬುದನ್ನು ಖಾನ್ ಅರಿತುಕೊಂಡರು. ಇದರ ನಂತರವೇ ಅಲಹಾಬಾದ್ ಹಿಂದೀ ಭಾಷಾಪರವಾದ ದೊಡ್ಡ ಕೇಂದ್ರವೆಂದು ಬಿಂಬಿಸಲಾಯಿತು. ಭಾಷೆಗೆ ಸಂಬಂಧಿಸಿದ ಹಲವಾರು ವಾದವಿವಾದಗಳು ತಲೆ ಎತ್ತಿದವು.

1869-1870ರಲ್ಲಿ ಸೈಯದ್ ಅಹಮದ್ ಖಾನ್ ಇಂಗ್ಲೆಂಡಿಗೆ ಭೇಟಿ ನೀಡಿದ್ದು ಶಿಕ್ಷಣ ದೃಷ್ಟಿಯಿಂದ ಮಹತ್ವದ್ದಾಗಿದೆ. ಅಲ್ಲಿ ಅವರು ಪಾಶ್ಚಿಮಾತ್ಯ ಶಿಕ್ಷಣ ವ್ಯವಸ್ಥೆಯ ಪೂರ್ಣ ಒಳನೋಟವನ್ನು ಪಡೆದರು. ಮುಸ್ಲಿಮರಲ್ಲಿ ಬೇರೂರಿದ ಧಾರ್ಮಿಕ ಮೂಢನಂಬಿಕೆ, ಅಂಧಶ್ರದ್ಧೆ ಮತ್ತು ಇಂಗ್ಲಿಷ್ ಬಗೆಗಿನ ತಿರಸ್ಕಾರ ಭಾವ ಮುಂತಾದ ಸಮಸ್ಯೆಗಳ ನಿವಾರಣೆಗಾಗಿ ನಿಯತಕಾಲಿಕೆಯೊಂದನ್ನು ಆರಂಭಿಸಿದರು. ಮುಸ್ಲಿಂ ಜನಾಂಗ ಮಧ್ಯಕಾಲೀನ ಸೀಮಿತ ವಿಚಾರಗಳಿಂದ ಹೊರಬಂದು ಕಾಲದ ಸವಾಲುಗಳನ್ನು ಎದುರಿಸುವಂಥ ಶಕ್ತಿಯನ್ನು ಹೊಂದಬೇಕೆಂಬ ಆಶಯ ಅವರದಾಗಿತ್ತು.

1875ನೇ ಮೇ 24ರಂದು ಅಲಿಘಡದಲ್ಲಿ ಮುಸ್ಲಿಂ ಮಹಾವಿದ್ಯಾಲಯ ಸ್ಥಾಪನೆಯಾಯಿತು. ಕಾಲಕ್ಕೆ ತಕ್ಕಂತೆ ಆಧುನೀಕರಣಗೊಂಡ ಶಿಕ್ಷಣ ಸಂಸ್ಥೆ ಇದಾಗಿತ್ತು. ಈ ಶಿಕ್ಷಣ ಸಂಸ್ಥೆಯ ಸ್ಥಾಪನೆಗಾಗಿ ಅವರು ಜೋಳಿಗೆ ಹಿಡಿದು ಭಿಕ್ಷೆಯನ್ನೂ ಬೇಡಿದರು. ತಮ್ಮ ಎಲ್ಲ ಸಂಪತ್ತನ್ನು ಈ ಸಂಸ್ಥೆಗೆ ಹಾಕಿದರು. ಇದು ಪೂರ್ವ ಮತ್ತು ಪಶ್ಚಿಮದ ಮಧ್ಯೆ ಇರುವ ಸೇತುವೆ ಎಂದು ಬಣ್ಣಿಸಿದರು. ಪೌರ್ವಾತ್ಯ ಶಿಕ್ಷಣದ ಮಹತ್ವದೊಂದಿಗೆ ಪಾಶ್ಚಿಮಾತ್ಯ ಶಿಕ್ಷಣ ನೀಡುವುದು ಅವರ ಗುರಿಯಾಗಿತ್ತು, ಅದನ್ನು ಸಾಧಿಸಿ ತೋರಿಸಿದರು. 1898ರಲ್ಲಿ ಸರ್ ಸಯ್ಯದ್ ಅಹಮದ್ ಖಾನ್ ಅವರ ಮರಣದ ವೇಳೆ ಈ ಜಾತ್ಯತೀತ ಮಹಾವಿದ್ಯಾಲಯದಲ್ಲಿ 285 ಮುಸಲ್ಮಾನ ಹಾಗೂ 64 ಹಿಂದೂ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಸಿಬ್ಬಂದಿ ವರ್ಗದಲ್ಲೂ ಹಿಂದೂಗಳಿದ್ದರು.

"ಈ ಮಹಾವಿದ್ಯಾಲಯ ವಿಶ್ವವಿದ್ಯಾಲಯವಾಗಿ ಜಯಗಳಿಸಲಿ. ಇಲ್ಲಿ ಕಲಿತ ಮಕ್ಕಳು ಈ ಭೂಮಿಯ ಉದ್ದಗಲಕ್ಕೆ ಸಹನಶೀಲತೆಯ ವಿಶಾಲ ಮನೋಭಾವನೆ ಹಾಗೂ ಪವಿತ್ರ ನೀತಿಯನ್ನು ಬೋಧಿಸುತ್ತ ಸುವಚನಗಳನ್ನು ಮುಕ್ತ



ಮನಸ್ಸಿನಿಂದ ತಿಳಿಸುತ್ತ ಸಾಗಲಿ" ಎಂದು ಸರ್ ಸಯ್ಯದ್ ಅಹ್ಮದ್ ಖಾನ್ ಅವರು ಈ ಮಹಾವಿದ್ಯಾಲಯದ ಶಂಕುಸ್ಥಾಪನೆ ವೇಳೆ ಹೇಳಿದ್ದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ರಾಜಕೀಯ ಪರಂಪರೆ, ಸಾಮಾಜಿಕ ಆಚರಣೆ, ಧಾರ್ಮಿಕ ನಂಬಿಕೆ ಹಾಗೂ ಬಡತನದಿಂದಾಗಿ ಮುಸ್ಲಿಮರು ಆಧುನಿಕ ಶಿಕ್ಷಣದಿಂದ ದೂರ ಉಳಿದಿದ್ದರು ಎಂಬ ಸತ್ಯವನ್ನು ಅವರು ಮನಗಂಡಿದ್ದರು. ಈ ಸವಾಲುಗಳನ್ನು ಎದುರಿಸುತ್ತಲೇ ಅವರು ಮುಸ್ಲಿಮರಿಗೂ ಆಧುನಿಕ ಶಿಕ್ಷಣ ಕೊಡುವಲ್ಲಿ ಯಶಸ್ವಿಯಾದರು. ಸಾಂಪ್ರದಾಯಿಕ ಕುರಾನ್ ಅರ್ಥೈಸುವಿಕೆಯಿಂದ ಹೊರಬಂದು ಕಾಲದ ಅವಶ್ಯಕತೆಗಳಿಗನುಗುಣವಾದ ವ್ಯಾಖ್ಯಾನದ ಕಡೆಗೆ ಗಮನ ಹರಿಸಿದರು. ವಿವಿಧ ಧರ್ಮಗಳ ತೌಲನಿಕ ಅಧ್ಯಯನ ನಡೆಸಿ ಬುದ್ಧಿಮತ್ತೆಯ ಕ್ಷಿತಿಜವನ್ನು ವಿಸ್ತೀರ್ಣಗೊಳಿಸಲು ಯತ್ನಿಸಿದರು. ಬೈಬಲ್ ಮೇಲೆ ವ್ಯಾಖ್ಯಾನ ಬರೆದ ಮೊದಲ ಭಾರತೀಯರು ಇವರಾಗಿದ್ದಾರೆ. ಧರ್ಮಾಂಧತೆಯನ್ನು ತಿರಸ್ಕರಿಸಿದ ಅವರು ಧರ್ಮದಲ್ಲಿನ ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಮೂಲಕ ಮಾನವಕುಲದ ಸೇವೆಗೈಯ್ಯುವುದರಲ್ಲಿ ತಲ್ಲೀನರಾಗಿದ್ದರು.


ಅವರ ಬದುಕು ಪವಿತ್ರ ಸನ್ಯಾಸಿಯ ಬದುಕಿನಂತಿದೆ. ಅವರು ತಮಗಾಗಿ ಏನನ್ನೂ ಬಯಸಲಿಲ್ಲ. ನವಭಾರತದ ನಿರ್ಮಾಣವೊಂದೇ ಅವರ ಮನದಾಳದ ಬಯಕೆಯಾಗಿತ್ತು. 1857 ಬಂಡಾಯದ ಸಂದರ್ಭದಲ್ಲಿ ಅವರ ತಾಯಿ ಮತ್ತು ಬಂಧು ಬಳಗ ಅನುಭವಿಸಿದ ಯಾತನೆ ಹೇಳಲಸಾಧ್ಯವಾಗಿದೆ. ಆಗರ್ಭ ಶ್ರೀಮಂತ ಮನೆತನದ ಅವರ ತಾಯಿ ಯುದ್ಧ ಸಂದರ್ಭದಲ್ಲಿ ದೆಹಲಿಯ ಅಶ್ವಶಾಲೆಯೊಂದರಲ್ಲಿ ಹುಲ್ಲು ತಿಂದು ನೀರಿಲ್ಲದೆ ಜೀವ ಹಿಡಿದುಕೊಂಡಿದ್ದರು. ಕೊನೆಗೂ ಸಾವು ಅವರನ್ನು ಆವರಿಸಿತು. ಅವರ ಚಿಕ್ಕಪ್ಪ ಹಾಗೂ ಅವರ ಮೂವರು ಮಕ್ಕಳು ಮತ್ತು ಖಾನ್ ಸಹೋದರಸಹೋದರಿಯರು ದಂಗೆಯಲ್ಲಿ ಕೊಲೆಗೀಡಾದರು. ದಂಗೆಯ ಸಂದರ್ಭದಲ್ಲಿ ಅವರು ಸಾಹಸವನ್ನು ಮೆರೆದು ಅನೇಕ ಅಮಾಯಕ ಬ್ರಿಟಿಷ್ ಕುಟುಂಬಗಳನ್ನು ರಕ್ಷಿಸಿದರು. ದಂಗೆಯ ನಂತರ ಅವರ ಮನೆಯೂ ಲೂಟಿಯಾಯಿತು. ಅವರ ಸೇವೆಯನ್ನು ಗುರುತಿಸಿ ಬ್ರಿಟಿಷರು ಅವರಿಗೆ ಜಹಾನಾಬಾದ ತಾಲ್ಲೂಕನ್ನು ಜಹಗೀರ ಆಗಿ ನೀಡಿದರು. ಅದರ ಭೂಬಾಡಿಗೆ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಬರುತ್ತಿತ್ತು. ಆದರೆ ಅವರಿಗೆ ಬಹಳ ನೋವಾಯಿತು. "ನನ್ನ ಮನಸ್ಸಿಗೆ ದುಃಖ ಆದದ್ದು ಜನರಿಗೆ ಒದಗಿಬಂದ ದಾರಿದ್ರ್ಯ, ಬೇಸರ ಹಾಗೂ ನಾಶದಿಂದಾಗಿ. ಎಲ್ಲ ಜನರು ನೋವಿನಿಂದ ಬಳಲುತ್ತಿರುವಾಗ ನಾನು ಈ ಜಹಗೀರನ್ನು ಪಡೆದು ತಾಲೂಕದಾರನಾಗಿ ಹೇಗೆ ಒಪ್ಪಿಕೊಳ್ಳಲಿ. ಅದಕ್ಕಾಗಿ ನಾನು ಅದನ್ನು ಪಡೆದುಕೊಳ್ಳಲು ನಿರಾಕರಿಸಿದೆನು" ಎಂದು ಅವರು ತಿಳಿಸಿದ್ದಾರೆ.

ಇಂಥ ಉದಾತ್ತ ಮಾನವನ ಕುರಿತು ಕೆ.ಎ. ನಿಜಾಮಿ ಅವರು ಬರೆದಿದ್ದಾರೆ. ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದವರು ಈ ಇಂಗ್ಲಿಷ್ ಪುಸ್ತಕವನ್ನು 'ಬಿಲ್ಡರ್ಸ್ ಆಫ್ ಮಾಡರ್ನ್ ಇಂಡಿಯಾ' (ನವಭಾರತದ ನಿರ್ಮಾಪಕರು) ಮಾಲಿಕೆಯಲ್ಲಿ ಪ್ರಕಟಿಸಿದ್ದಾರೆ. ಪ್ರತಿಯೊಬ್ಬ ಭಾರತೀಯ ಓದಲೇಬೇಕಾದ ಈ ಪುಸ್ತಕವನ್ನು ಡಾ. ಶ್ರೀಮತಿ ಟಿ.ಎಚ್. ಕರ್ನಾಟ ಅವರು ಅನುವಾದಿಸುವುದರ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಮಹದುಪಕಾರವನ್ನು ಮಾಡಿದ್ದಾರೆ. ಅನುವಾದ ಕಾರ್ಯದಲ್ಲಿ ಅವರು ತೋರಿಸಿದ ಶ್ರದ್ಧೆ ಅನುಕರಣೀಯವಾಗಿದೆ. ಇದೊಂದು ಮೂಲಗ್ರಂಥ ಎನ್ನುವ ರೀತಿಯಲ್ಲಿ ಅನುವಾದಿಸಿದ್ದಕ್ಕಾಗಿ ಓದುಗರು ಶ್ರೀಮತಿ ಕರ್ನಾಟ ಅವರಿಗೆ ಕೃತಜ್ಞರಾಗಿರುವುದರಲ್ಲಿ ಸಂಶಯವಿಲ್ಲ.

■ ರಂಜಾನ್ ದರ್ಗಾ

ಹಸಿರುಕ್ರಾಂತಿಯ ಅಂತ್ಯ ಮತ್ತು ನಿರುದ್ಯೋಗದ ಆಮದು





50ರ ದಶಕದ ಮಾತು. ಅಂದು ದೇಶಾದ್ಯಂತ ಆಹಾರ ಸಾಮಗ್ರಿಗಳ ತೀವ್ರ ಅಭಾವ ತಲೆದೋರಿದ ಪರಿಣಾಮವಾಗಿ ಭಾರತ ವಿದೇಶಗಳ ಮುಂದೆ ಕೈಯೊಡ್ಡಿ ನಿಲ್ಲುವ ಪರಿಸ್ಥಿತಿ ಬಂದಿತ್ತು. 1955ರಲ್ಲಿ ದಿಲ್ಲಿಯ ಕೆಂಪು ಕೋಟೆಯಿಂದ ಮಾಡಿದ ಭಾಷಣದಲ್ಲಿ ಅಂದಿನ ಪ್ರಧಾನಿ ಜವಾಹರ್‌ಲಾಲ್ ನೆಹರೂ "ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳುವುದೆಂದರೆ ಯಾವುದೇ ದೇಶದ ಮಟ್ಟಿಗೆ ತುಂಬಾ ಅವಮಾನಕರ ಸಂಗತಿ" ಎಂದಿದ್ದರು. ತದನಂತರ ತೆಗೆದು ಕೊಂಡ ಸಕಾರಾತ್ಮಕ ಕ್ರಮಗಳಿಂದಾಗಿ ಮುಂದಿನ ಆರು ದಶಕಗಳ ಅವಧಿಯಲ್ಲಿ ಭಾರತ ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸುವಲ್ಲಿ ಸಫಲವಾಯಿತು. ಆದರೆ ಅತ್ಯಾಶ್ಚರ್ಯಕರವಾಗಿ ಇಂದು ಮತ್ತೆ ಆಹಾರಧಾನ್ಯಗಳ ಆಮದಿನ ಮಾತು ಕೇಳಿಬರಲಾರಂಭಿಸಿದೆ! ಅದೂ ಈ ಬಾರಿ ದೇಶದಲ್ಲಿ ಸಮೃದ್ಧ ಗೋಧಿ ಫಸಲಿನ ನಿರೀಕ್ಷೆ ಇರುವಾಗಲೆ! ಮೋದಿ ಸರ್ಕಾರ ಈಗ ಗೋಧಿ ಮೇಲಿನ ಆಮದು ಸುಂಕವನ್ನು ಶೂನ್ಯಕ್ಕೆ ಇಳಿಸಿದೆ! ಸರ್ಕಾರದ ಈ ನಿರ್ಧಾರ ಅಗ್ಗದ ವಿದೇಶಿ ಗೋಧಿಯ ಒಳಹರಿವಿಗೆ ಮುಕ್ತ ರಹದಾರಿ ಕಲ್ಪಿಸಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಪ್ರಸಕ್ತವಾಗಿ ಶೇಕಡಾ 10ರಷ್ಟಿರುವ ಆಮದು ಸುಂಕವನ್ನು ಸಂಪೂರ್ಣವಾಗಿ ರದ್ದುಗೊಳಿಸುವ ನಿರ್ಧಾರವನ್ನು ಮೊನ್ನೆ ಡಿಸೆಂಬರ್ 8ರಂದು ಲೋಕಸಭೆಯಲ್ಲಿ ಪ್ರಕಟಿಸ ಲಾಗಿದೆ. ಆಹಾರಧಾನ್ಯಗಳನ್ನು ಆಮದು ಮಾಡುವುದೆಂದರೆ ನಿರುದ್ಯೋಗವನ್ನು ಆಮದು ಮಾಡಿದ ಹಾಗೆ. ಸರ್ಕಾರದ ಈ ಕ್ರಮ ಈಗಾಗಲೆ ಸಂಕಷ್ಟದಲ್ಲಿರುವ ರೈತಾಪಿವರ್ಗಕ್ಕೆ, ಅದರಲ್ಲೂ ವಿಶೇಷವಾಗಿ ಸಣ್ಣಪುಟ್ಟ ಹಿಡುವಳಿದಾರರಿಗೆ, ಮರ್ಮಾಘಾತ ನೀಡಲಿದೆ. ವಾಸ್ತವವಾಗಿ ಉತ್ತರ ಭಾರತದಲ್ಲಿಂದು ಗೋಧಿ ಬಿತ್ತನೆ ನಡೆಯುತ್ತಿದ್ದು ಅದೀಗ ಕೆಲವೆ ದಿನಗಳೊಳಗಾಗಿ ಮುಗಿಯುವುದರಲ್ಲಿದೆ. ಉತ್ತಮ ಫಸಲಿನ ನಿರೀಕ್ಷೆಯಲ್ಲಿರುವ ರೈತರ ಪಾಲಿಗೆ ಈ ಆಮದು ಸುಂಕ ರದ್ದತಿಯ ಸುದ್ದಿ ಬರಸಿಡಿಲಿನಂತೆ ಬಂದೆರಗಿದೆ. ಅವರೆಲ್ಲ ಮುಂದೆ ತಮಗೆದುರಾಗಲಿರುವ ಕಷ್ಟನಷ್ಟಗಳನ್ನು ಊಹಿಸಿಯೆ ಕಂಗಾಲಾಗಿದ್ದಾರೆ. ವಿದೇಶಿ ಗೋಧಿಯ ಮೇಲೆ ಅವಲಂಬನೆಯನ್ನು ಹೆಚ್ಚಿಸುವ ಈ ಕ್ರಮದ ಪರಿಣಾಮವಾಗಿ 50ರ ದಶಕದ ಅದೇ ದೈನೇಸಿ ಸ್ಥಿತಿ ಪುನರ್‌ನಿರ್ಮಾಣ ಆಗುವ ಎಲ್ಲಾ



ಸಾಧ್ಯತೆಗಳು ಕಾಣುತ್ತಿವೆ.

ಮೋದಿ ಸರ್ಕಾರದ ಆಟ ಸೆಪ್ಟೆಂಬರ್ ತಿಂಗಳಿನಿಂದಲೆ ಶುರುವಾಗಿದೆ. ಶೇಕಡಾ 25ರಷ್ಟಿದ್ದ ಆಮದು ಸುಂಕವನ್ನು ಮೊನ್ನೆ ಸೆಪ್ಟೆಂಬರ್ ತಿಂಗಳಲ್ಲಿ ಶೇಕಡಾ 10ಕ್ಕೆ ಇಳಿಸಲಾಯಿತು! ಮುಂದಿನ ಎರಡು ತಿಂಗಳ ಅವಧಿಯಲ್ಲಿ ಯಾವುದೇ ಅನಾಹುತ ಸಂಭವಿಸಿರದಿದ್ದರೂ ಇದೀಗ ಸುಂಕವನ್ನು ಏಕಾಏಕಿಯಾಗಿ ಶೇಕಡಾ 10ರಿಂದ ಶೂನ್ಯಕ್ಕಿಳಿಸಲಾಗಿದೆ! ಸುಂಕ 10% ಇದ್ದಾಗ ಆಸ್ಟ್ರೇಲಿಯ ಮತ್ತು ಉಕ್ರೇನ್‌ಗಳಿಂದ 3.5 ಮಿಲಿಯ ಟನ್ ಗೋಧಿಯನ್ನು ಆಮದು ಮಾಡಿಕೊಳ್ಳುವ ಒಪ್ಪಂದ ಆಗಿತ್ತು, ಆ ಪೈಕಿ 2.0 ಮಿ.ಟನ್ ಈಗಾಗಲೆ ಬಂದಿಳಿದಿದೆ. ಏತನ್ಮಧ್ಯೆ ಸುಂಕವನ್ನು ಸಂಪೂರ್ಣ ರದ್ದುಗೊಳಿಸಲು ಯಾವುದೇ ಬಲವತ್ತರ ಕಾರಣಗಳು ಇರಲಿಲ್ಲ.

ಗೋಧಿಯ ಆಂತರಿಕ ಉತ್ಪಾದನೆ ಸುಮಾರು 86.87 ಮಿ.ಟನ್‌ಗಳಷ್ಟಿದೆ. ಸರ್ಕಾರದ ಅಂಕಿಅಂಶಗಳ ಪ್ರಕಾರ ಉತ್ಪಾದನೆ ಸುಮಾರು 93.50 ಮಿ.ಟನ್ ಇರಬೇಕಿತ್ತಂತೆ. ಅಂದರೆ ಉತ್ಪಾದನೆಯಲ್ಲಿ ಸುಮಾರು 6.77 ಮಿ.ಟನ್‌ಗಳಷ್ಟು ಖೋತಾ ಕಂಡುಬಂದಿದೆಯಂತೆ. ಪರಿಸ್ಥಿತಿ ಹೀಗಿದ್ದರೂ ಆಮದು ಮಾಡುವ ಅಗತ್ಯ ಇರಲಿಲ್ಲ, ಏಕೆಂದರೆ ದೇಶದ ಆಂತರಿಕ ಬಳಕೆಗೆ ಬೇಕಾಗಿರುವ ಒಟ್ಟು ಗೋಧಿಯ ಪ್ರಮಾಣ ಸುಮಾರು 87 ಮಿ.ಟನ್ ಎಂದು ಅಂದಾಜಿಸಲಾಗಿದೆ. ಇದರರ್ಥ ಉತ್ಪಾದನೆ ಮತ್ತು ಬಳಕೆಗಳ ಪ್ರಮಾಣ ಹೆಚ್ಚುಕಮ್ಮಿ ಒಂದೇ ರೀತಿ ಇದೆ. ಆಮದಿನ ಅವಶ್ಯಕತೆ ಇಲ್ಲದಿರುವಾಗ ಆಮದು ಮಾಡುವ ನಿರ್ಧಾರವನ್ನು ಏಕೆ ತೆಗೆದುಕೊಳ್ಳಲಾಯಿತು?

ಮೋದಿ ಸರ್ಕಾರ ಗೋಧಿಯ ಚಿಲ್ಲರೆ ಬೆಲೆಗಳಲ್ಲಿ ಏರಿಕೆಯಾಗಿರುವ ಕಾರಣವನ್ನು ನೀಡುತ್ತಿದೆ. ಗೋಧಿಯ ಮಾರುಕಟ್ಟೆ ಬೆಲೆ ಕಿಲೊ ಒಂದಕ್ಕೆ ರೂ. 21.50 ಇದೆಯಾದರೂ ಆಮದುಗಳ ಮುಖಾಂತರ ಬೆಲೆ ಇಳಿಸುವ ನಿರ್ಧಾರಕ್ಕೆ ಯಾವುದೇ ಆರ್ಥಿಕ ತರ್ಕದ ಆಧಾರ ಇಲ್ಲ. ನಿಜ ಸಂಗತಿ ಏನೆಂದರೆ ಪ್ರಸಕ್ತವಾಗಿ ಗೋಧಿಯ ಅಂತಾರಾಷ್ಟ್ರೀಯ ಬೆಲೆಗಳಲ್ಲಿ ಇಳಿಕೆಯಾಗಿದೆ. ಹೀಗಾಗಿ ಭಾರಿ ಲಾಭ ಬಾಚಿಕೊಳ್ಳಲು ಇದೇ ಸೂಕ್ತ ಸಮಯವೆಂಬುದನ್ನು ಅರಿತ ಆಮದು ಕೂಟವೊಂದು ತನ್ನ ವಶೀಲಿಯನ್ನು ಬಳಸಿ ಆಮದು ಸುಂಕವನ್ನು ತೆಗೆದುಹಾಕಿಸಿರುವುದರಲ್ಲಿ ಅನುಮಾನವಿಲ್ಲ.


ಸರ್ಕಾರ ನೀಡುತ್ತಿರುವ ಮತ್ತೊಂದು ಸಮರ್ಥನೆಯೆಂದರೆ ಆಹಾರಧಾನ್ಯಗಳ ದಾಸ್ತಾನು ಪರಿಸ್ಥಿತಿ ಅನಿಶ್ಚಿತವಾಗಿದೆ. ಭಾರತೀಯ ಆಹಾರ ನಿಗಮದಲ್ಲಿ ಡಿಸೆಂಬರ್ 1ರಂದು 16.50 ಮಿ.ಟನ್ ಗೋಧಿ ದಾಸ್ತಾನು ಇತ್ತು. 2007ರಿಂದೀಚೆಗಿನ ಅಂಕಿಅಂಶಗಳನ್ನು ನೋಡಿದಾಗ 2016ರ ಈ ದಾಸ್ತಾನಿನ ಪ್ರಮಾಣ ಕನಿಷ್ಠ ಮಟ್ಟದಲ್ಲಿರುವುದಾಗಿ ತಿಳಿದುಬರುತ್ತದೆ. ಕಳೆದ ವರ್ಷದ 26.88 ಮಿ.ಟನ್‌ಗಳಿಗೆ ಹೋಲಿಸಿದಾಗ ಈ ವರ್ಷದ ದಾಸ್ತಾನು ಕಡಿಮೆ ಎಂದು ಅನಿಸಬಹುದಾದರೂ ಏಪ್ರಿಲ್ 2017ರ ತನಕ ಮಾರುಕಟ್ಟೆಗಳಿಗೆ ಪೂರೈಸಲು ಇಷ್ಟು ಸಾಕು. ಹೇಗೂ ಏಪ್ರಿಲ್‌ನಲ್ಲಿ ಈ ವರ್ಷದ ಫಸಲು ಬರಲಾರಂಭಿಸುತ್ತದೆ.

ವಾಸ್ತವದಲ್ಲಿ ಸರ್ಕಾರ ಕಳೆದ ಕೆಲ ವರ್ಷಗಳಿಂದ ವಿಧವಿಧದ ಯತ್ನಗಳ ಮೂಲಕ ಆಹಾರಧಾನ್ಯಗಳ ಖರೀದಿಯನ್ನು ಕಡಿಮೆ ಮಾಡುತ್ತಾ ಬರುತ್ತಿದೆ! ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಕಾರ್ಯಪ್ರವೃತ್ತವಾದ ಕೇಂದ್ರ ಆಹಾರ ಸಚಿವಾಲಯ ಮಧ್ಯ ಪ್ರದೇಶ, ಛತ್ತೀಸ್‌ಗಢ, ರಾಜಸ್ಥಾನ ಮೊದಲಾದ ರಾಜ್ಯಗಳನ್ನು ಸಂಪರ್ಕಿಸಿ ರೈತರಿಗೆ ಕನಿಷ್ಠ ಬೆಂಬಲ ಬೆಲೆಗಳ ಮೇಲೆ ಹೆಚ್ಚುವರಿ ಬೋನಸ್ ನೀಡಕೂಡದೆಂದು ಮುನ್ನೆಚ್ಚರಿಕೆ ನೀಡಿತ್ತು. ಈ ಆದೇಶವನ್ನು ಮೀರಿದರೆ ಇಡೀ ಖರೀದಿ ಪ್ರಕ್ರಿಯೆಗೆ ಅವುಗಳನ್ನೆ ಹೊಣೆಯಾಗಿಸಲಾಗುವುದೆಂದು ಬೆದರಿಸಿತ್ತು. ಇದರನಂತರ ರಾಜ್ಯಗಳು ರೈತರಿಗೆ ಬೋನಸ್ ವಿತರಿಸುವುದನ್ನು ನಿಲ್ಲಿಸಿವೆ. ಬೋನಸ್ ನೀಡುವುದರ ಅರ್ಥವೇನು? ಹೆಚ್ಚು ಬೆಳೆ ಬೆಳೆಯಲು ಪ್ರೋತ್ಸಾಹ. ಇದರಿಂದ ಸರ್ಕಾರದ ಖರೀದಿ ಪ್ರಮಾಣವೂ ಹೆಚ್ಚುತ್ತದೆ. ಹೀಗಿರುವಾಗ ಬೋನಸ್ ನಿಲ್ಲಿಸುವುದರ ಹಿಂದೆ ಖರೀದಿಯನ್ನು ಕಡಿಮೆ ಮಾಡುವ ಉದ್ದೇಶವಿರುವುದು ಸ್ಪಷ್ಟ. ಇಷ್ಟೇ ಅಲ್ಲ, ಆಹಾರ ನಿಗಮಕ್ಕೆ ಇನ್ನೊಂದು ಆದೇಶ ವನ್ನೂ ನೀಡಲಾಗಿದೆ. ಖರೀದಿ ಮತ್ತು ಮಾರುಕಟ್ಟೆಗಳಲ್ಲಿ ಮಧ್ಯಪ್ರವೇಶ ಮಾಡುವುದನ್ನು ಬಿಟ್ಟು ಅಧಿಕ ಬೆಲೆಗಾಗಿ ಮುಮ್ಮಾರುವಿಕೆ ಪ್ರಕ್ರಿಯೆಗೆ ಬದಲಾಯಿಸಬೇಕು ಎಂದು ಸೂಚಿಸಲಾಗಿದೆ. ಈ ಕುರಿತಂತೆ ಪಂಜಾಬ್, ಹರಿಯಾಣಾಗಳು ನಿರಂತರ ಒತ್ತಡ ಎದುರಿಸುತ್ತಿವೆ.

ವಿಶ್ವ ವಾಣಿಜ್ಯ ಸಂಸ್ಥೆ ಜತೆಗಿನ ಮಾತುಕತೆಗಳಲ್ಲಿ ಭಾರತ ಇದುವರೆಗೆ ತನ್ನ 60 ಕೋಟಿ ರೈತರನ್ನು ರಕ್ಷಿಸುವ ನಿಲುವನ್ನು ತಾಳುತ್ತಾ ಬಂದಿದೆ. ಆದರೆ ತದ್ವಿರುದ್ಧವಾಗಿ ದೇಶದೊಳಗೆ ಮುಕ್ತ ಆಮದನ್ನು ಪ್ರೋತ್ಸಾಹಿಸುವ ಉದಾರೀಕರಣ ನೀತಿಗಳು ಜಾರಿಯಲ್ಲಿವೆ. ಇದಕ್ಕೋಸ್ಕರವೆ ಕೃಷಿವಲಯದಲ್ಲಿ ಸಾರ್ವಜನಿಕ ಹೂಡಿಕೆಯನ್ನು ವ್ಯವಸ್ಥಿತವಾಗಿ ಕಡಿಮೆ ಮಾಡುತ್ತಾ, ರೈತರ ಉತ್ಪನ್ನಗಳಿಗೆ ಸೂಕ್ತ ಬೆಲೆ ನೀಡಲು ನಿರಾಕರಿಸುತ್ತಾ ಅವರನ್ನು ದಾರಿದ್ರ್ಯದ ಸ್ಥಿತಿಯಲ್ಲಿರಿಸಲಾಗಿದೆ. ಮೋದಿ ಸರ್ಕಾರ ಈಗ ಏನು ಮಾಡಿದೆಯೆಂದರೆ ರೈತರಿಗೆ ಉತ್ಪಾದನಾ ವೆಚ್ಚದ ಮೇಲೆ 50% ಲಾಭಾಂಶ (ಸ್ವಾಮಿನಾಥನ್ ಸಮಿತಿಯ ಈ ಸಲಹೆಯನ್ನು ಕಾರ್ಯಗತಗೊಳಿಸುವೆನೆಂದು ಮೋದಿ ಚುನಾವಣಾ ಕಾಲದಲ್ಲಿ ಭರವಸೆ ಕೊಟ್ಟಿದ್ದ) ನೀಡಲು ತನ್ನಿಂದಾಗದು ಎಂದು ಸರ್ವೋಚ್ಚ ನ್ಯಾಯಾಲಯಕ್ಕೆ ತಿಳಿಸಿದೆ.

ಗೋಧಿಯ ಕಥೆ ಹೀಗಿದೆಯಾದರೆ ಇನ್ನಿತರ ಅನೇಕ ಆಹಾರ ವಸ್ತುಗಳ ಕಥೆಯೂ ಭಿನ್ನವಾಗಿಲ್ಲ. ಇತ್ತೀಚಿನ ದಿನಗಳಲ್ಲಿ ಬಟಾಟೆ, ಪಾಮ್ ಎಣ್ಣೆ, ರಿಫೈಂಡ್ ಪಾಮ್ ಎಣ್ಣೆ, ಬೇಳೆಕಾಳುಗಳು, ಖಾದ್ಯ ತೈಲ, ಸೇಬು, ರಬ್ಬರ್, ತೆಂಗು, ರೇಶ್ಮೆ, ಮೀನು, ಅನೇಕ ಹಣ್ಣುಹಂಪಲು ಮತ್ತು ಹಣ್ಣಿನ ರಸಗಳ ಆಮದು ಪ್ರಮಾಣದಲ್ಲಿ ಸಿಕ್ಕಾಪಟ್ಟೆ ಏರಿಕೆಯಾಗಿದೆ. ಇದೆಲ್ಲವೂ ಆಮದು ಸುಂಕಗಳಲ್ಲಿ ನೀಡಲಾದ ರಿಯಾಯಿತಿಗಳ ಫಲವಾಗಿದೆ. ಉದಾಹರಣೆಗೆ ಬಟಾಟೆ ಮೇಲಿನ ಸುಂಕವನ್ನು ಶೇಕಡಾ 30ರಿಂದ 10ಕ್ಕೆ, ಪಾಮ್ ಎಣ್ಣೆ ಮೇಲಿನ ಸುಂಕವನ್ನು ಶೇಕಡಾ 12.5ರಿಂದ 7.5ಕ್ಕೆ, ರಿಫೈಂಡ್ ಪಾಮ್ ಎಣ್ಣೆ ಮೇಲಿನ ಸುಂಕವನ್ನು ಶೇಕಡಾ 20ರಿಂದ 15ಕ್ಕೆ ಇಳಿಸಲಾಗಿದೆ. 'ಕೃಷಿ ಸಂಬಂಧಿತ ವೆಚ್ಚ ಮತ್ತು ಬೆಲೆಗಳ ಆಯೋಗ' ಮತ್ತು ಕೃಷಿ ಸಚಿವಾಲಯಗಳು ಆಮದು ಸುಂಕ ಇಳಿಕೆಯ ವಿಷಯದಲ್ಲಿ ನೀಡಿರುವ ಎಚ್ಚರಿಕೆಯನ್ನು ಗಾಳಿಗೆ ತೂರಲಾಗಿದೆ. ಬೆಲೆಗಳ ನಿಯಂತ್ರಣಕ್ಕೆ ಆಮದು ಅಗತ್ಯವೆಂದು ವಾದಿಸಲಾಗುತ್ತಿದೆ. ಆದರೆ ದೇಶದ ಸಣ್ಣ ಹಿಡುವಳಿದಾರರನ್ನು ಕೇಳುವವರಿಲ್ಲ ವಾಗಿದೆ. ಬೆಳೆದ ಉತ್ಪನ್ನಗಳಿಗೆ ಸೂಕ್ತ ಬೆಲೆ ಸಿಗದ ಕಾರಣ ಅವರೆಲ್ಲ ಬೇಸಾಯ ವೃತ್ತಿಯನ್ನೆ ತ್ಯಜಿಸಬೇಕಾಗಿ ಬಂದಿದೆ. ಅತ್ತ ಮೊಜಾಂಬಿಕ್, ಉಗಾಂಡ, ಇಥಿಯೋಪಿಯ, ಮಯನ್ಮಾರ್, ಬ್ರೆಜಿಲ್ ಮುಂತಾದ ದೇಶಗಳ ಸರಕಾರಗಳು ಭಾರತಕ್ಕೆ ರಫ್ತು ಮಾಡುವ ಸಲುವಾಗಿ ಬೇಳೆಕಾಳು ಬೆಳೆಯು ವಂತೆ ತಮ್ಮ ರೈತರಿಗೆ ಉತ್ತೇಜನ ನೀಡಲಾರಂಭಿಸಿವೆ! 1993–94ರಲ್ಲಾದ ಹಳದಿ ಕ್ರಾಂತಿಯ ಫಲವಾಗಿ ಭಾರತ ಖಾದ್ಯ ತೈಲಗಳಲ್ಲಿ ಸ್ವಯಂಪೂರ್ಣತೆ ಸಾಧಿಸಿತ್ತು. ಆದರೆ ನಂತರದಲ್ಲಿ ಅದನ್ನು ನಾಶಪಡಿಸಲಾಯಿತು. ಇವತ್ತು ದೇಶದ ಒಟ್ಟು ಖಾದ್ಯ ತೈಲ ಅವಶ್ಯಕತೆಯ ಶೇಕಡಾ 60ರಷ್ಟನ್ನು ಸುಮಾರು ರೂ. 70,000 ಕೋಟಿ ವೆಚ್ಚದಲ್ಲಿ ವಿದೇಶಗಳಿಂದ ಖರೀದಿಸಲಾಗುತ್ತಿದೆ! ಇದೀಗ ವಿದೇಶಗಳಿಂದ ಗೋಧಿಯ ಆಮದು ಪ್ರಾರಂಭಿಸಿರುವುದು ಹಸಿರುಕ್ರಾಂತಿಯ ಅಂತ್ಯಕ್ಕೆ ನಾಂದಿ ಹಾಡಲಿದೆ. ಆಹಾರ ಸಾಮಗ್ರಿಗಳ ಮುಕ್ತ ಆಮದು ಹೀಗೇ ಮುಂದುವರಿದರೆ ನಿರುದ್ಯೋಗದಲ್ಲಿ ಹೆಚ್ಚಳ ಆಗುವುದರೊಂದಿಗೆ ಸದ್ಯೋಭವಿಷ್ಯದಲ್ಲಿ ಮತ್ತೊಮ್ಮೆ ಭಿಕ್ಷಾಪಾತ್ರೆ ಒಡ್ಡಬೇಕಾದ ಪರಿಸ್ಥಿತಿ ಬರಬಹುದು.

ಮೂಲ ಲೇಖನ: ದೇವಿಂದರ್ ಶರ್ಮ
ಕನ್ನಡಕ್ಕೆ: ಸುರೇಶ ಭಟ್ ಬಾಕ್ರಬೈಲು
ಕೃಪೆ: *OrissaPOST, 22.12. 2016*



ಯೋಗೇಶ್ ಮಾಸ್ಟರ್


ಪುರಾಣದ ಹೂರಣ


ಅನಾಗರಿಕ ಮತ್ತು ಕ್ರೂರ ಪ್ರಕೃತಿ

ದೇವರು, ಧರ್ಮ, ಆಚಾರ, ವಿಚಾರ, ಅಧ್ಯಾತ್ಮ- ಇತ್ಯಾದಿಗಳ ಬಗ್ಗೆ ಚಿಂತನೆಗಳನ್ನು ನಡೆಸುವವರಿಗೆ ಅಥವಾ ಅವುಗಳನ್ನು ಅಳವಡಿಸಿಕೊಂಡಿರುವ ಜೀವನ ಕ್ರಮವನ್ನು ಹೊಂದಿರುವವರಿಗೆ ನಿಜಕ್ಕೂ ಒಂದು ಮುಖ್ಯವಾದ ವಿಷಯ ತಿಳಿದಿರಲೇಬೇಕು. ಅದು ಪ್ರಕೃತಿ. ಅಂದರೆ ಪ್ರಕೃತಿಯ ರಚನೆ, ಧರ್ಮ ಅಥವಾ ನಿಯಮ ಮತ್ತು ಮೌಲ್ಯ. ಪ್ರಕೃತಿಯ ರಚನೆಯನ್ನು ಅರಿಯುವುದೇ ಜ್ಞಾನ, ಅದರ ನಿಯಮಕ್ಕೆ ಪೂರ್ವಾಗ್ರಹಗಳಿಲ್ಲದೇ ಸರಳವಾಗಿ ಒಳಗಾಗುವುದೇ ಆಚಾರ, ಅದರ ಮೌಲ್ಯವನ್ನು ಗ್ರಹಿಸಿ ತಾವು ಆರೋಪಿಸುವ ಮೌಲ್ಯದೊಂದಿಗೆ ತುಲನೆ ಮಾಡಿಕೊಳ್ಳುವುದೇ ಆತ್ಮಾವಲೋಕನ, ಇನ್ನೂ ಹೇಳುವುದಾದರೆ ಇಡೀ ಪ್ರಕೃತಿಯನ್ನು ಮತ್ತು ಅದರ ವಿದ್ಯಮಾನಗಳನ್ನು ಯಾವ ಗುಣಾರೋಪಗಳನ್ನು ಮಾಡದೇ ಬರಿದೇ ಸಾಕ್ಷೀಕರಿಸಿಕೊಂಡಿರುವುದೇ ಧ್ಯಾನ.

ಪಕ್ಷಪಾತದ ದಯೆ

ಅದೊಂದು ಪ್ರಾಣಿ ದಯಾ ಸಂಘದ ಒಂದು ಶಾಖೆ. ಹೆಸರು ಪೀಪಲ್ ಫಾರ್ ಅನಿಮಲ್. ವನ್ಯಜೀವಿಗಳ ಆಸ್ಪತ್ರೆ ಮತ್ತು ಪುನರ್ವಸತಿ ಗೃಹ. ಅಲ್ಲಿ ಹಾವುಗಳ ಚಿಕಿತ್ಸಾಲಯವೂ ಇದೆ. ಮೇನಕಾ ಗಾಂಧಿ ಅದಕ್ಕೆ ಛೇರ್‌ಪರ್ಸನ್. ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಯ ಪಕ್ಕದಲ್ಲಿದೆ. ಅಲ್ಲಿ ಸಾಕುಪ್ರಾಣಿಗಳ ಸ್ಮಶಾನವಿದೆ. ನಮ್ಮ ನೆಚ್ಚಿನ, ಮುದ್ದಿನ ನಾಯಿ, ಬೆಕ್ಕು, ಕುರಿ, ಕೋಳಿ ಏನೇ ಸತ್ತರೂ ಅದನ್ನು ಅಲ್ಲಿ ಸಮಾಧಿ ಮಾಡಿ ಅದರ ಮೇಲೆ ಸ್ಮಾರಕ ಶಿಲಾಫಲಕವನ್ನು ಸ್ಥಾಪಿಸಿ, ಅದರ ಬಗ್ಗೆ ನಮ್ಮ ಪ್ರೇಮ ಮತ್ತು ವಾತ್ಸಲ್ಯದ ಮಾತುಗಳನ್ನು ಕೊರೆಸಿ ಆಗಾಗ ಹೋಗಿ ನೋಡಿಕೊಂಡು ಬರಬಹುದು. ಇದನ್ನು ಕೇಳಿ ಯಾರಾದರೂ ನೀವು ರೊಕ್ಕವಿಲ್ಲದೇ ಸತ್ತುಹೋಗಿರುವ ನಿಮ್ಮ ನಾಯಿಯನ್ನೋ ಅಥವಾ ಬೆಕ್ಕನ್ನೋ ಎತ್ತಿಕೊಂಡು





ಹೋಗಿಬಿಟ್ಟೀರಾ! ಅದು ಶ್ರೀಮಂತರ ಮುದ್ದಿನ ಪ್ರಾಣಿಗಳಿಗೆ ಮಾತ್ರ. ಇಷ್ಟು ವರ್ಷಗಳ ಕಾಲಕ್ಕೆ ಎಂದು ಸಮಾಧಿ ಕಟ್ಟಿಡಲು ಸಾವಿರಾರು ರೂಪಾಯಿಗಳನ್ನು ಕಟ್ಟಬೇಕು. ಆ ಹಣವನ್ನು ಅವರು ತಮ್ಮ ಪುನರ್ವಸತಿ ಕೇಂದ್ರಕ್ಕೆ ವಿನಿಯೋಗಿಸಿಕೊಳ್ಳುತ್ತಾರೆ. ಅದೂ ಒಂದು ಅವರ ಆರ್ಥಿಕ ಸಂಪನ್ಮೂಲ. ಅದೇನೇ ಇರಲಿ, ನಾನು ಅಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡುತ್ತಿದ್ದ ಮತ್ತು ಮುಂಚೂಣಿಯಲ್ಲಿರುವ ಕೆಲವು ಯುವ ಜನರನ್ನು ಮಾತಾಡಿಸಿದೆ. ಸಂದರ್ಭದಲ್ಲಿ ಸಂದರ್ಶಿಸಿದೆ. ಕೋತಿ, ಗಿಡುಗ, ಹದ್ದು, ಹಾವು, ಕಾಡುಕೋಳಿ ಇತ್ಯಾದಿಗಳು ಯಾವುದೇ ಒಂದು ಅಪಾಯಕ್ಕೆ ಸಿಲುಕಿದರೆ ಕೂಡಲೇ ರಿಸ್ಕ್ಯೂ ದಳದವರು ಅಲ್ಲಿಗೆ ಧಾವಿಸುತ್ತಾರೆ. ಆ ಪ್ರಾಣಿಯನ್ನು ರಕ್ಷಿಸುತ್ತಾರೆ. ಅದನ್ನು ಚಿಕಿತ್ಸಾಲಯಕ್ಕೆ ತಂದು ಉಪಚರಿಸುತ್ತಾರೆ. ಪುನರ್ವಸತಿ ಕೇಂದ್ರದಲ್ಲಿಟ್ಟುಕೊಂಡು ಪೊರೆಯುತ್ತಾರೆ. ಆದರೆ ಬೀದಿ ನಾಯಿಗೆ ಅಥವಾ ಬೆಕ್ಕಿಗೆ ಈ ಸೌಲಭ್ಯ ಅಥವಾ ಸೇವೆ ಇಲ್ಲ, ಏಕೆಂದರೆ ಅದು ವನ್ಯಮೃಗ ಅಲ್ಲವಂತೆ. ಹಾಗಾಗಿ ಅದಕ್ಕೆ ಈ ಪುನರ್ವಸತಿ ಕೇಂದ್ರದಲ್ಲಿ ಸ್ಥಳವಿಲ್ಲವಂತೆ.

ನಾನು ಕೇಳಿದೆ, "ಕಾಡುಕೋಳಿಯನ್ನು ರಕ್ಷಿಸುತ್ತೀರಿ. ಫಾರಂ ಕೋಳಿಗಳು ದಿನದಿನವೂ ಅಸಂಖ್ಯಾತ ಸಂಖ್ಯೆಯಲ್ಲಿ ಸಾಯುತ್ತಿರುತ್ತವೆ. ಅವುಗಳನ್ನು ರಕ್ಷಿಸುವುದಿಲ್ಲವೇ? ಕಾಡುಕೋಳಿ ಮಾಡಿರುವ ಪುಣ್ಯವೇನು? ಫಾರಂಕೋಳಿ ಮಾಡಿರುವ ಪಾಪವೇನು?" ಅದಕ್ಕೆ ಅವರು ಹೇಳಿದ್ದೇನೆಂದರೆ, ಫಾರಂಕೋಳಿಗಳು ಆಹಾರಕ್ಕಾಗಿಯೇ ಬೆಳೆಸುವುದು. ಅಲ್ಲದೇ, ನಮ್ಮ ಕಾರ್ಯದ ಪಾಲಿಗೆ ಅದು ಬರುವುದಿಲ್ಲ, ನಾವು ವನ್ಯಜೀವಿಗಳಿಗೆ ಮಾತ್ರ ಸೀಮಿತವಾಗಿದ್ದೇವೆ." ಇದಪ್ಪಾ ಮನುಷ್ಯನ ವರಸೆ ಅಂದ್ರೆ!

ಫಾರಂ ಕೋಳಿ ಎಂದೇನೋ ಅಂದುಬಿಡುತ್ತೇವೆ. ನಾಟಿ ಕೋಳಿ ಸಾರು ಇಷ್ಟಪಟ್ಟುಬಿಡುತ್ತೇವೆ. ಕಾಡುಕೋಳಿ ಎಂದರೆ ಏನೇನೋ ರಕ್ಷಣೆಗೆ ಯೋಗ್ಯ ಎನ್ನುತ್ತಾರೆ. ಆದರೆ, ಆ

ಎಲ್ಲಾ ಕೋಳಿಗಳಿಗೂ ಜೀವವಿರುತ್ತದೆ. ಅವುಗಳೆಲ್ಲಾ ಮೇಯುತ್ತವೆ. ಪಿಚಿಕೆ ಹಾಕುತ್ತವೆ. ಮೊಟ್ಟೆ ಇಕ್ಕುತ್ತವೆ. ಮರಿ ಮಾಡುತ್ತವೆ. ಕುತ್ತಿಗೆ ಕೊಯ್ಯಲು ಹಿಡಿದಾಗ ಆರ್ತನಾದ ಮಾಡುತ್ತವೆ. ಕುಯ್ದಾಗ ರಕ್ತ ಬರುತ್ತದೆ. ಸಾಯುತ್ತವೆ. ಹಾಗಾದರೆ ದಯೆ ಎಂಬುದನ್ನು ಸೀಮಿತ ಮಾಡುವುದು ಮನುಷ್ಯನ ಯಾವ ಮಾನದಂಡದ್ದು? ಈ ಪ್ರಶ್ನೆಗೆ ಉತ್ತರವನ್ನು ಮುಂದೆ ಕಂಡುಕೊಳ್ಳುವ ಪ್ರಯತ್ನ ಮಾಡೋಣ.

ಗುಣವಾಚಕಗಳು

ಇನ್ನೊಂದು ಪ್ರಕರಣ. ಯಾರೋ ಒಬ್ಬರು ತಮ್ಮ ಮನೆಯಲ್ಲಿ ಮುದ್ದಾಗಿ ಪುಟ್ಟ ಪಕ್ಷಿಯನ್ನು ಸಾಕಿದ್ದು ಅವರ ಕಣ್ಮುಂದೆಯೇ ಒಂದು ಹದ್ದು ಅದನ್ನು ಬೇಟೆಯಾಡಿ ಹೊತ್ತೊಯ್ದದ್ದನ್ನು ನೊಂದುಕೊಂಡು ಫೇಸ್‌ಬುಕ್‌ನಲ್ಲಿ ತಮ್ಮ ಶೋಕಪೂರಿತ ವಾತ್ಸಲ್ಯವನ್ನು ಹಂಚಿಕೊಂಡಿದ್ದರು. ಅದಕ್ಕೆ ಪ್ರತಿಯಾಗಿ ಅನೇಕರು ಕಮೆಂಟ್ ಮಾಡುವಾಗ ಪುಟ್ಟ ಪಕ್ಷಿಗೆ ತಮ್ಮ ದಯೆಯನ್ನೂ ಮತ್ತು ಹದ್ದಿನ ಬಗ್ಗೆ ತಮ್ಮ ಆಕ್ರೋಶವನ್ನೂ ವ್ಯಕ್ತಪಡಿಸಿದ್ದರು. ಕೆಲವರು ಹದ್ದಿಗೆ ಕಟುಕ, ಕ್ರೂರಿ ಎಂಬ ಗುಣವಾಚಕವನ್ನೂ ಬಳಸಿದ್ದರು.

ನ್ಯಾಷನಲ್ ಜಿಯಾಗ್ರಫಿಯಲ್ಲೋ ಅಥವಾ ಅನಿಮಲ್ ಪ್ಲಾನೆಟ್‌ನಲ್ಲೋ ಸಿಂಹವೊಂದು ಹೇಸರಗತ್ತೆಗಳನ್ನೋ, ಕಡವೆ ಅಥವಾ ಜಿಂಕೆಗಳನ್ನೋ ಅಟ್ಟಿಸಿಕೊಂಡು ಹೋಗಿ ಬೇಟೆಯಾಡುವಾಗ ಟಿವಿ ನೋಡುತ್ತಿರುವ ಮಕ್ಕಳು, ಕೆಲವೊಮ್ಮೆ ದೊಡ್ಡವರೂ ಕೂಡ ಪಾಪ ಎಂದು ಬೇಟೆಗೊಳಗಾಗಿ ಆಹಾರವಾಗುವ ಪ್ರಾಣಿಗಳಿಗೆ ತಮ್ಮ ಮರುಕವನ್ನು ಪ್ರದರ್ಶಿಸುತ್ತಾರೆ.

ಸಿಂಹ, ಹುಲಿ, ಚಿರತೆ ಇತ್ಯಾದಿ ಪ್ರಾಣಿಗಳನ್ನು ಕ್ರೂರ ಪ್ರಾಣಿಗಳು ಎಂದು ಪಾಠದಲ್ಲಿ ಓದಿದ್ದೇವೆ. ಆ ಪ್ರಾಣಿಗಳಿಗೆ ಕ್ರೂರ ಎಂಬ ಗುಣವಾಚಕವನ್ನು ಹಚ್ಚಿರುವ ಮನಸ್ಥಿತಿಯವರು ಯಾರು ಮತ್ತು ಏಕೆ ಎಂಬುದನ್ನು ನಾವು ಪ್ರಶ್ನಿಸಬೇಕಾದ ಅಗತ್ಯವಿದೆ. ಬೇಟೆಯಾಡುವಂತಹ ವನ್ಯಜೀವಿಗಳ ಚಟುವಟಿಕೆಗಳನ್ನು, ನೈಸರ್ಗಿಕ ಚಟುವಟಿಕೆಗಳನ್ನು ಕ್ರೌರ್ಯದ ಪಟ್ಟಿಗೆ ಸೇರಿಸುವ ಜನರ ಮನಸ್ಥಿತಿಯ ಬಗ್ಗೆ ಅಚ್ಚರಿ ಎನಿಸುತ್ತದೆ. ಹೋಗಲಿ ನಾವು ಹೀಗೆ ಕಲ್ಪಿಸಿಕೊಳ್ಳೋಣ. ಕಾಡಿನಲ್ಲಿರುವ ಎಲ್ಲಾ ಪ್ರಾಣಿಗಳೂ ಗಿಡಗಳ ಉತ್ಪನ್ನಗಳನ್ನು ಬಳಸುತ್ತಾ, ಒಬ್ಬರಿಗೊಬ್ಬರು ಹಂಚಿಕೊಳ್ಳುತ್ತಾ, ತರಕಾರಿಗಳನ್ನು ಮತ್ತು ಹಣ್ಣುಗಳನ್ನು ಮಾತ್ರವೇ ಸೇವಿಸುತ್ತಿವೆ. ಇದು ಸಾಧ್ಯವೇ? ಕೀಟವನ್ನು ಕಪ್ಪೆ ತಿನ್ನುತ್ತದೆ, ಕಪ್ಪೆಯನ್ನು ಹಾವು ತಿನ್ನುತ್ತದೆ, ಹಾವನ್ನು ಹದ್ದು ತಿನ್ನುತ್ತದೆ; ಇದು ಆಹಾರದ ಸರಪಳಿ. ಈ ಆಹಾರದ ಸರಪಳಿಯು ಸರಳವಾಗಿ ಪ್ರಾಕೃತಿಕವಾಗಿರುವುದು.

ಪುಟ್ಟ ಪಕ್ಷಿಯನ್ನು ಹದ್ದು ಹಿಡಿಯುವುದಾಗಲಿ, ಅದನ್ನು ತಿನ್ನುವುದಾಗಲಿ, ಜಿಂಕೆಯನ್ನು ಹುಲಿಯು ಬೇಟೆಯಾಡುವುದಾಗಲಿ ನೈಸರ್ಗಿಕವಾಗಿ ಸಹಜವಾಗಿರುವುದು. ಮನುಷ್ಯನಾದವನು ತನ್ನ ಭಾವದೊಲುಮೆಯನ್ನು ಬಲಿಯಾಗುವ ಪ್ರಾಣಿಗೆ ಆರೋಪಿಸುತ್ತಾ 'ಅನುಕಂಪ' ಎಂಬುದನ್ನು




ಪ್ರದರ್ಶಿಸುತ್ತಾನೆ. ಮನುಷ್ಯನ ದಯೆ, ಕರುಣೆ, ಅನುಕಂಪ, ಅಂತಃಕರಣ, ಸಹಾನುಭೂತಿ; ಈ ಎಲ್ಲವೂ ಕೂಡಾ ಪ್ರಕೃತಿಯ ನಿಯಮಕ್ಕೆ ಹೊರತಾಗಿರುವುದೇ?

ಮನುಷ್ಯನ ಆಧ್ಯಾತ್ಮದಲ್ಲಿ, ಜೀವನ ದರ್ಶನದಲ್ಲಿ, ಮಾನವತೆಯ ನಿಲುವಿನಲ್ಲಿ ಮತ್ತು ಸಾಮಾಜಿಕ ವಿಶ್ಲೇಷಣೆಯಲ್ಲಿ ಅತ್ಯಂತ ಕ್ಲಿಷ್ಟಕರವಾದಂತಹ ವಿಚಾರ ಇದಾಗಿದೆ. ಯಾವುದನ್ನು ದಯೆ ಎನ್ನುವುದು? ಯಾವುದಕ್ಕೆ ನಾವು ಸಹಾನುಭೂತಿ ತೋರುವುದು? ಅತ್ಯಂತ ಉದಾತ್ತ ಮೌಲ್ಯದಲ್ಲಿ ಕಾಣುವ ಕರುಣೆ ಎಂಬ ಭಾವವನ್ನು ಹೇಗೆ ಅರ್ಥೈಸಿಕೊಳ್ಳುವುದು? ಪ್ರಕೃತಿಯ ಸಹಜತೆಯನ್ನು ಒಪ್ಪುವುದು ಮತ್ತು ಸಾತ್ವಿಕ ಗುಣಗಳನ್ನೂ ಅಳವಡಿಸಿಕೊಳ್ಳುವುದು; ಈ ಎರಡೂ ವೈರುಧ್ಯಗಳನ್ನು ಸಮತೋಲನದಲ್ಲಿ ಕಾಣುವುದು ಸಾಧ್ಯವೇ? ನಿಜ ಹೇಳಬೇಕೆಂದರೆ, ನಾವು ನಾಮಪದಗಳ ಮೂಲಕ ಗುರುತಿಸುವಂತಹ ಯಾವುದೇ ಗುಣಗಳು ಅಥವಾ ಸ್ವಭಾವಗಳು ಪ್ರಕೃತಿಯಲ್ಲಿ ನಿರ್ದಿಷ್ಟ ವಿವರಣೆಗೆ ಸಿಗುವುದೇ ಇಲ್ಲ, ತಮ್ಮ ಪಾಡಿಗೆ ತಾವು ರೂಪುಗೊಳ್ಳುತ್ತಾ ಚಿತ್ರಿತವಾಗುವ ಮೋಡಗಳನ್ನು ನೋಡುತ್ತಾ ವಿವಿಧ ವಯೋಮಾನದವರು, ವಿವಿಧ ಮನಸ್ಥಿತಿಯವರು ವಿವಿಧ ರೀತಿಯ ಚಿತ್ರಣಗಳನ್ನು ವಿವರಿಸುವ ಹಾಗೆಯೇ ಇದೂ ಆಗುತ್ತದೆ.

ಮನಸ್ಸು, ನಿರ್ದಿಷ್ಟ ಅಭಿವ್ಯಕ್ತತೆ, ಭಾಷೆ, ಪದಗಳು, ವಾಕ್ಯ ವಿಶ್ಲೇಷಣೆಗಳು, ವಿವರಣೆಗಳು, ಸ್ಮರಣೆಗಳು; ಇಂತಹ ವಿಶೇಷಣೆಗಳೆಲ್ಲಾ ಮನುಷ್ಯನದಾಗಿದ್ದು, ಆದರಿಂದಾಗಿಯೇ ಮನುಷ್ಯ ಪ್ರಕೃತಿಯಿಂದ ದೂರಾಗುತ್ತಿದ್ದಾನೆ.

ಪದಾಗ್ರಹ ನೋಟ

ಪ್ರಕೃತಿಯ ಅಂತರಂಗವನ್ನು ಪ್ರವೇಶಿಸಲು ಮತ್ತು ನಮ್ಮ ವ್ಯಕ್ತಿಗತ ಇರುವಿಕೆಯನ್ನು ಪ್ರಕೃತಿಯಲ್ಲಿ ಸಹಜವಾಗಿರುವಿಕೆಯಾಗಿ ಅರಿಯಲು ಒಂದು ಪ್ರಯೋಗವನ್ನು ಮಾಡೋಣ. ಈ ಪ್ರಯೋಗ ಅತ್ಯಂತ ಪ್ರಾಕೃತಿಕವಾದದ್ದು. ಪ್ರಕೃತಿಯಲ್ಲಿರುವ ಎಲ್ಲಾ ಜೀವಿಗಳೂ ಸಾಧಾರಣವಾಗಿ ತಮ್ಮ ಇರುವನ್ನು ಹೀಗೆಯೇ ಇರಿಸಿಕೊಂಡಿರುವುದು.



ಈಗ ಈ ಕ್ಷಣವೇ ಓದುವುದನ್ನು ನಿಲ್ಲಿಸಿ ತಲೆ ಎತ್ತಿ ಮುಂದೆ ನೋಡಿ.

ಈಗ ನೀವು ನೋಡಿದ್ದು ಯಾವುದೋ ವಸ್ತುವೋ, ಕ್ರಿಯೆಯೋ, ವ್ಯಕ್ತಿಯೋ ಆಗಿದ್ದು ಅದು ನಿಮಗೆ ಗೊತ್ತಿದೆ. ಅದರ ಬಣ್ಣ ಏನೆಂದು ನಿಮಗೆ ತಿಳಿದಿದೆ. ಅದರ ಹೆಸರು ನಿಮಗೆ ಪರಿಚಯವಿದೆ. ನಾನೀಗ ನನ್ನ ಮನೆಯಲ್ಲಿ ಪತ್ರಿಕೆ ಓದುತ್ತಿದ್ದೇನೆಂದಿಟ್ಟುಕೊಳ್ಳಿ. ತಲೆ ಎತ್ತಿ ನೋಡಿದಾಗ ನನ್ನ ತಾಯಿಯ ಫೋಟೋ ಕಾಣುತ್ತಿದೆ. ಈಗ ಆ ಫೋಟೋ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ. ಆ ಫೋಟೋದಲ್ಲಿರುವವರು ನನ್ನ ತಾಯಿ. ಅವರು ತೀರಿಹೋಗಿದ್ದಾರೆ. ಅವರ ಸ್ಮರಣಾರ್ಥ ನಡೆಸಿದ ಕಾರ್ಯಕ್ರಮವೊಂದರಲ್ಲಿ ಉಪಯೋಗಿಸಿರುವ ಪಟ ಅದು. ಆ ಫೋಟೋ ದೊಡ್ಡದು. ಆ ಫೋಟೋ ತೆಗೆದ ದಿನ ಅವರು ಹಳೆಯ ಮನೆಯಲ್ಲಿದ್ದರು. ಅದೊಂದು ಬೆಳಗ್ಗೆ. ಇನ್ನೂ ಟಿಫನ್ ಮಾಡಿರಲಿಲ್ಲ; ಇತ್ಯಾದಿ ಅನೇಕ ವಿಷಯಗಳು ಸ್ಮರಣೆಗೆ ಬರುವ ಸಾಧ್ಯತೆಗಳಿವೆ. ಈಗ ನನಗಿರುವ ಸವಾಲೆಂದರೆ, ಪತ್ರಿಕೆಯನ್ನು ಓದುತ್ತಿರುವ ನಾನು ಮತ್ತೆ ತಲೆ ಎತ್ತಿ ನೋಡಬೇಕು. ಆದರೆ, ಆ ಫೋಟೋವನ್ನು ಫೋಟೋ ಎಂದು ನನಗೆ ಅನಿಸಬಾರದು. ಅದರಲ್ಲಿರುವುದು ನನ್ನ ತಾಯಿ ಎಂದೂ ನಾನು ಗುರುತಿಸಬಾರದು. ಅದು ಯಾವಾಗಿನದು, ಅದು ಹೇಗಿದೆ ಎಂದೂ ನಾನು ಚಿಂತಿಸಬಾರದು. ನೋಡಬೇಕು. ಬರಿದೇ ನೋಡಬೇಕು.


ಸಂಜೆ ಮುಳುಗುತ್ತಿರುವ ಸೂರ್ಯನನ್ನು ನೋಡುತ್ತೀರಿ. ವಾವ್, ಬ್ಯೂಟಿಫುಲ್ ಎನ್ನುತ್ತೀರಿ. ಅದು ಗುಂಡಗಿದೆ. ಹೊಳೆಯುತ್ತಿದೆ. ಅದು ಕಿತ್ತಳೆಯ ಬಣ್ಣದಿಂದ ಕೂಡಿರುವುದನ್ನು ಗಮನಿಸುತ್ತೀರಿ. ಚದುರಿರುವ ಮೋಡಗಳ ಮೇಲೆ ಹಚ್ಚಿಕೊಂಡಿರುವ ಬಣ್ಣಗಳನ್ನು ನೋಡುತ್ತೀರಿ. ಅದು ಸೂರ್ಯ ಎಂಬ ವಸ್ತು, ಕಿತ್ತಳೆ ಎಂಬ ಬಣ್ಣ, ಊದಾ ಬಣ್ಣದ ಮೋಡಗಳು ಈ ಎಲ್ಲವೂ ಪದಗಳ ಮೂಲಕ ನಾವು ತಿಳಿಯುತ್ತಿದ್ದೇವೆ. ಅರ್ಥೈಸಿಕೊಳ್ಳುತ್ತಿದ್ದೇವೆ. ನಮ್ಮ ನಮ್ಮ ಭಾಷೆ, ಪದಸಂಪತ್ತುಗಳ ಅನುಗುಣವಾಗಿ ಅವುಗಳನ್ನು ನಮಗೆ ಬೋಧಿಸಿಕೊಳ್ಳುತ್ತಿದ್ದೇವೆ. ಈ ಪದಾಗ್ರಹದಿಂದ ಹೊರತಾದ ಒಂದು ಖಾಲಿ ದೃಷ್ಟಿಯಿಂದ ಒಮ್ಮೆ ನೋಡಲು ಮತ್ತು ಅದೇನೆಂದು ಏನನ್ನೂ ಅರಿಯುವ ಯತ್ನ ಮಾಡದೇ ಬರಿದೇ ನೋಡಲು ಪ್ರಯತ್ನಿಸೋಣ. ಅದೊಂದು ವೇಳೆ ಸಾಧ್ಯವಾಗಿಬಿಟ್ಟರೆ, ಎಳೆಯ ಮಗುವಿನ ದೃಷ್ಟಿ ನಮ್ಮದಾಗಿರುವುದು ಅಥವಾ ಪ್ರಕೃತಿಯಲ್ಲಿ ಸಹಜವಾಗಿರುವ ಯಾವುದೇ ಒಂದು ಪ್ರಾಣಿಯ ನೋಡುವಿಕೆ ನಮ್ಮದಾಗಿರುವುದು. ಯಾವುದೇ ಪೂರ್ವಾಗ್ರಹವಿಲ್ಲದ ನೈಸರ್ಗಿಕ ದೃಷ್ಟಿಯಿಂದ ಒಮ್ಮೆಯಾದರೂ ನೋಡುವ ಪ್ರಯತ್ನ ಮಾಡಿ ನೋಡೋಣ. ಅದೊಂದು ಅತ್ಯಂತ ಸವಾಲಿನ ಮತ್ತು ಸುಂದರವಾದಂತಹ ಅನುಭವ. ಆ ಅನುಭವ ನಮ್ಮನ್ನು ಪ್ರಕೃತಿಯ ಮೂಲಕ್ಕೆ ಒಯ್ಯುವುದು.

ಸಾಮಾನ್ಯವಾಗಿ ಮನುಷ್ಯನು ತನ್ನ ವ್ಯಕ್ತಿಗತವಾದಂತಹ ಒಲವು ಮತ್ತು ನಿಲುವುಗಳಿಂದಲೇ ವಿಷಯಗಳನ್ನು ಭಾವಿಸುವುದು ಮತ್ತು ಪರಿಗ್ರಹಿಸುವುದು. ತನಗೆ ಹಿತವಾಗುವ ಅಥವಾ ಅಹಿತವಾಗುವ ಅನುಭವಗಳ ಆಧಾರದಲ್ಲಿ ತೀರ್ಮಾನಗಳನ್ನು ಪ್ರಕಟಿಸುತ್ತಾನೆ. ಆ ತೀರ್ಮಾನಗಳು ಸದಾ ಏಕಮುಖವಾಗಿಯೇ ಇರುತ್ತದೆ. ಹಾಗಾಗಿಯೇ ಪುರಾಣದ ಕಥೆಗಳಲ್ಲಿ ರಾಕ್ಷಸರು ದುಷ್ಟರು, ದೇವತೆಗಳು, ಋಷಿಗಳು ಶಿಷ್ಟರು ಎಂದಾಗಿದ್ದು, ಇದೇ ರೀತಿಯಲ್ಲಿಯೇ ಪುಣ್ಯಕೋಟಿ ಎಂಬ ಹಸುವಿನ ಕಥೆಯೂ ಪೂರ್ವಾಗ್ರಹದಿಂದ ಕೂಡಿರುವುದು. ಏಕಮುಖ ಪರಿಗ್ರಹದಿಂದ ತೀರ್ಮಾನಗಳನ್ನು ಪ್ರಕಟಿಸುವುದು. ಇಂತಹ ಕಥೆಗಳೆಲ್ಲವೂ ಪ್ರಾಕೃತಿಕ ಮೌಲ್ಯಕ್ಕೆ ವಿರುದ್ಧ. ಇನ್ನು ಪಂಚತಂತ್ರದ ಕಥೆಗಳಂತೂ ಬಹುಪಾಲು ಕುತಂತ್ರದ ಕಥೆಗಳೇ ಆಗಿವೆ.

ಇನ್ನು, ಮನುಷ್ಯ ಬಹಳ ಮೌಲ್ಯವೆಂದು ಮಾನ್ಯ ಮಾಡುವ ಸದ್ಗುಣಗಳ ಕಡೆಯಿಂದ ನೋಡಿದರೆ, ಪ್ರಕೃತಿಯ ಸ್ವಾಭಾವಿಕ ನಿಯಮವು ಬಹಳ ಅನಾಗರಿಕವಾಗಿಯೂ ಮತ್ತು ಕ್ರೂರವಾಗಿಯೂ ಕಾಣುತ್ತದೆ.

ಹಾಗಾದರೆ, ಒಳ್ಳೆಯದು, ಕೆಟ್ಟದ್ದು ಎಂಬುದು ಇಲ್ಲವೇ? ಕ್ರೂರ, ಸೌಮ್ಯ, ಕರುಣೆ, ಕಾಠಿಣ್ಯ, ಹಿಂಸೆ, ಅಹಿಂಸೆಗಳು ಎಂಬುವು ಇಲ್ಲವೇ? ಪ್ರಕೃತಿಯ ಮೌಲ್ಯಕ್ಕೂ ಬದ್ಧವಾಗುತ್ತಾ ಮನುಷ್ಯನಿಗೆ ಒದಗಿರುವ ಈ ಗುಣಗಳಿಗೂ ನ್ಯಾಯ ಒದಗಿಸುತ್ತಾ ಕ್ರಮವನ್ನು ರೂಪಿಸಿಕೊಳ್ಳಲು ಸಾಧ್ಯವೇ? ಸಮಾಜ ಮತ್ತು ಪ್ರಕೃತಿ ಈ ಎರಡೂ ಪರಸ್ಪರ ವಿರೋಧವೇ? ದುಷ್ಟ ಸಂಹಾರ, ಶಿಷ್ಟ ರಕ್ಷಣೆಗಳ ಪುಂಖಾನುಪುಂಖ ಕಥೆಗಳಿರುವ ಪುರಾಣಗಳು ಗೊತ್ತೇ? ಮುಂದೆ ನೋಡೋಣ. ■

ವ್ಯಕ್ತಿ ಪೂಜೆ ಹಾಗೂ ಯಾಮಾರಿಸುವಿಕೆಗಳ ಭರಾಟೆಯಲ್ಲಿ ಮೋದಿ ಪರಿವಾರ




ಕಳೆದ ಲೋಕಸಭಾ ಚುನಾವಣೆಗೂ ಮುನ್ನ ಉಡುಪಿಯ ಹೂಡೆ ಎಂಬಲ್ಲಿ ನಡೆದ ಸಮಾರಂಭವೊಂದರಲ್ಲಿ ಹಿರಿಯ ಚಿಂತಕ ಜಿ.ರಾಜಶೇಖರ್ ಅವರು ಸಾಂದರ್ಭಿಕವಾಗಿ ಮಾತನಾಡುತ್ತಾ 'ಯಾರೇನೇ ಮಾಡಿದರೂ ಮೋದಿ ಗೆಲುವನ್ನು ಈ ಬಾರಿ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ'ವೆಂದು ಆಗಿನ ವಾತಾವರಣವನ್ನು ಸೂಕ್ಷ್ಮವಾಗಿ ಗ್ರಹಿಸಿ ಹೇಳಿದ್ದರು. ಆತನಕ ಇದಕ್ಕೆ ತದ್ವಿರುದ್ಧ ಸಂಭವನೀಯತೆಯ ನಿರೀಕ್ಷೆಯಲ್ಲಿದ್ದ ನಾನು ರಾಜಶೇಖರರಂತಹ ಹಿರಿಯರೇ ಹೇಳಿದ ಮೇಲೆ ನನ್ನ ಮನಸ್ಸಿನಲ್ಲಿದ್ದ 'ವಿಷಾದ'ದ ನಿರೀಕ್ಷೆಯನ್ನು ಬದಲಿಸಿಕೊಂಡಿದ್ದೆ. ಮಾತ್ರವಲ್ಲ, ನನ್ನ ಮನಸ್ಸಿನಲ್ಲಿ ಮೋದಿ ಗೆಲ್ಲುವುದಾದರೆ ಆತ ಪೂರ್ಣ ಬಹುಮತದಿಂದ ಭರ್ಜರಿಯಾಗಿಯೇ ಗೆಲ್ಲಲಿ ಎಂಬ ಹೊಸ ಬಯಕೆಯನ್ನು ಕಟ್ಟಿಕೊಂಡೆ. ಕಾರಣ, ಕಾರ್ಯರೂಪಕ್ಕೆ ಬಾರದಂತಹ ಸ್ವಿಸ್ ಬ್ಯಾಂಕ್ ಕಪ್ಪು ಹಣ ವಾಪಾಸ್, ಶತ್ರು ರಾಷ್ಟ್ರಗಳಾದ ಚೀನ-ಪಾಕಿಸ್ತಾನಗಳ ಬಾಲ ಕತ್ತರಿಸುವಿಕೆ, ರಾಮಮಂದಿರ ನಿರ್ಮಾಣ, ಭ್ರಷ್ಟಾಚಾರ ನಿರ್ಮೂಲನೆ ಮೊದಲಾದ ಭ್ರಮೆಗಳ ಗೋಪುರವನ್ನು ಹೊತ್ತ ಭಕ್ತರುಗಳಿಗೆ ಪೂರ್ಣ ಬಹುಮತ ಇಲ್ಲದಿರುವಿಕೆ ಮೊದಲಾದ ನೆವನಗಳು ತಡೆಯಾಗದೇ 'ಸೂಪರ್ ಮ್ಯಾನ್ ಅವತಾರ'ದ ವಾಸ್ತವತೆಯನ್ನು ಅರಿಯುವಂತಾಗಲೀ ಎಂಬುದು ನನ್ನ ಆಶಯವಾಗಿತ್ತು.

ಹೌದು, ವಾಜಪೇಯಿಯವರ ಸರಕಾರ ಗೆದ್ದಿದ್ದೇ ಅಡ್ವಾಣಿಯವರ ರಾಮಜನ್ಮ ಭೂಮಿ ಹೆಸರಿನ ದುರ್ಲಾಭ ಪಡೆದು. ಕೇವಲ 2-3 ಸೀಟು ಗೆಲ್ಲುತ್ತಿದ್ದ ಪಕ್ಷ ಏಕಾಏಕಿ ಈ ಕಾರಣಕ್ಕೆ ಕುರ್ಚಿಯೇರಿತ್ತು. ಆದರೆ ವಾಜಪೇಯಿ ಸರಕಾರ ಬಹುಮತವಿಲ್ಲದಿರುವಿಕೆಯ ನೆಪವೊಡ್ಡಿ ರಾಮಜನ್ಮಭೂಮಿಯನ್ನು ಕೇವಲ ವಿವಾದಕ್ಕಷ್ಟೇ ಸೀಮಿತಗೊಳಿಸಿತ್ತು. ಆದರೆ ಮೋದಿ ವಿಚಾರದಲ್ಲಿ ಅವರ ಭರ್ಜರಿ ಗೆಲುವೇ ಈಗ ತಿರುಗುಬಾಣವಾಗಿಬಿಟ್ಟಿದೆ. ಅಂದರೆ, ವಾಜಪೇಯಿ ಸರಕಾರಕ್ಕಿದ್ದ ಬಹುಮತವಿಲ್ಲದಿರುವಿಕೆಯ 'ಗುರಾಣಿ'ಯನ್ನು ಭರ್ಜರಿ ಓಟು ಕೊಟ್ಟು ಈ ದೇಶದ ಮತದಾರ ಮೋದಿಯಿಂದ ಕಿತ್ತುಕೊಂಡು ಬಿಟ್ಟಿದ್ದ. ಅಂದರೆ ಚುನಾವಣೆಗೂ ಮುನ್ನ ನೀಡಲಾದ ಆಶ್ವಾಸನೆಗಳನ್ನು ಪೂರ್ಣ ಅಲ್ಲದಿದ್ದರೂ ತಕ್ಕಮಟ್ಟಿಗಾದರೂ ಈಡೇರಿಸಲೇಬೇಕಾದ ಅನಿವಾರ್ಯತೆ ಹಾಗು ಹೊಣೆ ಮೋದಿ ಸರಕಾರದ ಮೇಲೆ ಬಿತ್ತು. ಆದರಿದು ಅಂದುಕೊಂಡಷ್ಟು ಸುಲಭವೇ? ಉಹುಂ.

ಪ್ರಧಾನಿಯಾಗುವ ಮೊದಲು ಯಾವುದೋ ಒಂದು ಸಂದರ್ಶನದಲ್ಲಿ ಮೋದಿ ಆಗಿನ ಕಾಂಗ್ರೆಸ್ ಸರಕಾರ ಪಾಕಿಸ್ತಾನದ ಕುರಿತು ತೋರುತ್ತಿರುವ ಮೃದು ಧೋರಣೆಯನ್ನು ತೀವ್ರವಾಗಿ ಹಾಗು ತನ್ನ ಮಾಮೂಲಿಯ ವ್ಯಂಗ್ಯ ಶೈಲಿಯಲ್ಲಿ ತರಾಟೆಗೆ ತೆಗೆದುಕೊಂಡಿದ್ದರು. ಆದರೀಗ ಅವರದ್ದೇ ಸರಕಾರವಿದ್ದಾಗ ಕಳೆದ ವರ್ಷ (2016) ಗಡಿಯಲ್ಲಿ ಅತೀಹೆಚ್ಚು ಯೋಧರ ಹತ್ಯೆ ಹಾಗು ದಾಳಿಗಳಾಗಿದ್ದರೂ ಮೋದಿ ಸರಕಾರ ಇನ್ನೂ ಹುಟ್ಟುಹಬ್ಬ ಮೊದಲಾದ ಶುಭಾಶಯ ವಿನಿಮಯದಲ್ಲೇ ಮುಳುಗಿದೆ. ಅಭಿವೃದ್ಧಿ ವಿಚಾರವೋ ಬರೀ ಬ್ಯಾನರ್, ಪೋಸ್ಟರ್ ಹಾಗು ಜಾಹೀರಾತುಗಳಲ್ಲಷ್ಟೇ ಸೀಮಿತಗೊಂಡಿದೆ. ಮೋದಿ ಹಿಂಬಾಲಕರು ಇಂತಹ ಮುಖ್ಯ ವಿಷಯಗಳನ್ನು ಜನರಿಂದ ಮರೆಮಾಚಲು ತಂತ್ರಗಾರಿಕೆಯಲ್ಲಿ ಮುಳುಗಿದ್ದಾರೆ.

ವ್ಯಕ್ತಿ ಪೂಜೆಗೆ ಉದಾಹರಣೆಯಾಗಿ ಮೋದಿ ಆಪ್ ಮೂಲಕ ನಡೆಸಲಾದ ಇತ್ತೀಚೆಗಿನ ಏಕಪಕ್ಷೀಯ ಸಮೀಕ್ಷೆಗಳು, ಅಮೆರಿಕಾ ಅಧ್ಯಕ್ಷ ಟ್ರಂಪ್‌ಗೂ ಮಿಗಿಲಾಗಿ ಮೋದಿಗೆ ಓಟು ಸಿಗಲೆಂದು 'ಟೈಮ್' ಮುಖಪುಟ ಸ್ಥಾನಕ್ಕಾಗಿ 'ಭಕ್ತ'ರು ನಡೆಸಿದ ಪಡಿಪಾಟಲು, ಮೋದಿಯನ್ನು ವೈಭವೀಕರಿಸುವಂತಹ ಯುನೆಸ್ಕೋ ಆಯ್ಕೆಗಳಂತಹ ಅನೇಕ ಸುಳ್ಳು ಸುಳ್ಳೇ ಸುದ್ದಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಡುವಿಕೆ, ತುಘಲಕ್ ನೀತಿಯಿಂದ ನೂರಾರು ಜನ ಸತ್ತಿದ್ದಕ್ಕೆ ಬಂದ್ ನಡೆದಂತ ದಿನವನ್ನು ಚೆಡ್ಡಿಗಳು 'ಸಂಭ್ರಮದ ದಿವಸ'ವನ್ನಾಗಿಸಿದ್ದು, ವಿರೋಧಿಸುವವರನ್ನು ದೇಶದ್ರೋಹಿಗಳೆಂದು ಬಿಂಬಿಸುವಿಕೆ... ಇಂತವು ಬೇಕಷ್ಟಿವೆ. ಇನ್ನು ಯಾಮಾರಿಸುವಿಕೆಗಳೆಂದರೆ, ಬಿಡಲಾದ ಕಳಪೆ ನೋಟಿನ ಮಹತ್ವಗಳ ಪ್ರಚಾರ, ಬುರುಡೆ ಚಿಪ್‌ಗಳು, ಹೊಸ ನೋಟಿನ ಮೂಲಕ ಮೋದಿಯ ಭಾಷಣ ಕೇಳಿಸುವ ದಗಲಬಾಜಿ ತಂತ್ರಗಳಲ್ಲದೇ ಗಡಿಯಲ್ಲಿ ನಿರಂತರ ಪಾಕ್ ದಾಳಿಗಳು, ಸ್ವಿಸ್ ಬ್ಯಾಂಕ್ ಬುರುಡೆಗಳೂ, ದಲಿತ ಹಾಗು ಅಲ್ಪಸಂಖ್ಯಾತರ ಮೇಲೆ ಹೆಚ್ಚಿದ ದಾಳಿಗಳು ಮೊದಲಾದವುಗಳು ಮಾಧ್ಯಮಗಳಲ್ಲಿ ಪ್ರಾಮುಖ್ಯತೆ ಪಡೆಯದಂತೆ ವಿಷಯಾಂತರಗೊಳಿಸುವ ನಾಟಕಗಳು. ಅಬ್ಬಬ್ಬಾ... ಇವೆಲ್ಲ ಇನ್ನೆಷ್ಟು ದಿನಗಳು ನಡೆಯುತ್ತವೆಯೋ ಕಾಲವೇ ಉತ್ತರಿಸಬೇಕು.



ಕಳೆದ ಚುನಾವಣೆಯಲ್ಲಿ ಬಿಜೆಪಿಗರ ಹಾಗು ಗಣನಾಯಕ ಮೋದಿಯ ಬಾಯಲ್ಲಿದ್ದದ್ದು ಒಂದೇ ಮಂತ್ರ. ಅದು ಕಾಂಗ್ರೆಸ್ ಮುಕ್ತ ಭಾರತ ಎಂಬ ಮಂತ್ರ. ಈ ಮಂತ್ರ ಅವರ ಕಾಂಗ್ರೆಸ್ ಭಯವನ್ನು ಪರೋಕ್ಷವಾಗಿಯಾದರೂ ಬಿಂಬಿಸುತ್ತದೆ. ಕಾಂಗ್ರೆಸ್ ಪಕ್ಷ ತೀರಾ ಬಡಕಲು ಸ್ಥಿತಿ ತಲುಪಿದ್ದರೂ ಮೋದಿಯನ್ನು ಕಾಂಗ್ರೆಸ್ ಭಯ ಇನ್ನೂ ಬಿಟ್ಟಂತೆ ಕಾಣುತ್ತಿಲ್ಲ. ಚುನಾವಣಾ ಸಮಯದ ಭಾಷಣಗಳಾಗಿರಬಹುದು, ಆಮೇಲೆ ವಿದೇಶಗಳಲ್ಲಿ ಮಾಡಿದ ಭಾಷಣಗಳಿರಬಹುದು, ಎಲ್ಲೆಲ್ಲೂ ಕಾಂಗ್ರೆಸ್ಸಿನ ಟೀಕೆಯನ್ನು ಮೋದಿ ಯಾವತ್ತೂ ಕೈಬಿಟ್ಟೇ ಇಲ್ಲ. ಮಾತುಮಾತಿಗೂ 70 ವರ್ಷ ಆಳಿದವರು ಹಿಂದಿನ ಸರಕಾರ ಎಂದೇ ಬಿಂಬಿಸಿ ಮಾತನಾಡುವ ದುರ್ಬುದ್ಧಿ ಇನ್ನೂ ಮುಂದುವರೆದಿದೆ. ಹಿಂದಿನ ಸರಕಾರಗಳು ಎಷ್ಟೇ ನುಂಗಣ್ಣಗಳಾದರೂ ಅವರ ಕೊಡುಗೆಗಳೂ ಸಾಕಷ್ಟಿವೆ ಎಂಬುದನ್ನು ಮೋದಿ ಅರ್ಥಮಾಡಿಕೊಳ್ಳಬೇಕು.

ಕಳೆದ ಲೋಕಸಭಾ ಚುನಾವಣಾ ಆರಂಭದಲ್ಲಿ ಕಾಂಗ್ರೆಸಿನಿಂದ ಕಡೆಗಣಿಸಲ್ಪಟ್ಟ ವಲ್ಲಭಬಾಯಿ ಪಟೇಲರಿಗೆ ಆದ ಅನ್ಯಾಯವನ್ನು ಜನರೆದುರು ಎತ್ತಿ ತೋರಿಸಿ ಕಾಂಗ್ರೆಸ್ ವಿರುದ್ಧ ಜನರನ್ನು ಪ್ರಚೋದಿಸಲಾಯಿತು. ಬಳಿಕ ವರ್ಷದ ಹಿಂದೆ (2015) ಇದೇ ಸರಕಾರ ದೇಶದ ಜನರಿಗೆ ಇನ್ನೊಂದು ಕಾಂಗ್ರೆಸ್ ವಿರೋಧಿ ಬಾಂಬನ್ನು ತೋರಿಸಿ ಮತ್ತೆ ಹಾದಿ ತಪ್ಪಿಸಲು ಹವಣಿಸಿತ್ತು. ಅದು ನೆಹರೂ ಹಾಗು ಕಾಂಗ್ರೆಸ್ ಸರಕಾರದಿಂದ ಕಿರುಕುಳಕ್ಕೊಳಪಟ್ಟು ಮೃತರಾದರೆಂದು ಪ್ರಚಾರದಲ್ಲಿರುವ ನೇತಾಜಿ ಸುಭಾಶ್ ಚಂದ್ರ ಬೋಸರಿಗೆ ಸಂಬಂಧಿಸಿದ ಮಹತ್ವದ ಕಡತಗಳ ಬಿಡುಗಡೆಯ ಸುದ್ದಿ. ಆದರೆ ಆ ಕಡತ ನಿರೀಕ್ಷಿಸಿದಂತೆ ಯಾವ ಹೊಡೆತವನ್ನೂ ನೀಡದೇ ಮಳೆಯಲ್ಲಿ ನೆನೆದ ಪಟಾಕಿಯಂತೆ ಟುಸ್ಸಾಯಿತು.


ಮೊನ್ನೆಯ ನೋಟು ಬ್ಯಾನ್ ವಿಚಾರದಲ್ಲಿ ರಾಹುಲ್ ಗಾಂಧಿ ಕ್ಯೂನಲ್ಲಿ ನಿಂತದ್ದನ್ನೇ ನೆಪವನ್ನಾಗಿಸಿಕೊಂಡು ಆತನೇ ಕಪ್ಪು ಹಣ ಹೊಂದಿರುವ ಕಳ್ಳ; ಆತನನ್ನು ಕ್ಯೂವರೆಗೆ ಕರೆ ತಂದದ್ದೇ ದೊಡ್ಡ ಸಾಧನೆ ಎಂಬಂತೆ ಪ್ರಧಾನಿ ಬಾಲಿಶವಾಗಿ ಮಾತನಾಡಿದ್ದರು. ಅಷ್ಟೇ ಅಲ್ಲದೇ ತನ್ನ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ ವಿರೋಧ ಪಕ್ಷದ ಉನ್ನತ ಹುದ್ದೆಯಲ್ಲಿರುವ ನಲವತ್ತೈದರ ಪ್ರಾಯದ ಇದೇ ರಾಹುಲ್ ಗಾಂಧಿ ಮೊನ್ನೆ ಮೊನ್ನೆ ಕೇಳಿದ ಪ್ರಶ್ನೆಗೆ ನೇರವಾಗಿ ಉತ್ತರಿಸುವ ಬದಲು 'ಆತ ಇನ್ನೂ ಮಾತು ಕಲಿಯುತ್ತಿರುವ ಬಚ್ಚಾ; ಅವರು ಮಾತನಾಡುತ್ತಿದ್ದಾರೆನ್ನುವುದೇ ಒಳ್ಳೆಯ ಬೆಳವಣಿಗೆ" ಎನ್ನುವಂತಹ ವ್ಯಂಗ್ಯಭರಿತ ಲೇವಡಿಯ ಮಾತುಗಳನ್ನಾಡಿ ತನ್ನ ಹುದ್ದೆಯ ಘನತೆಯನ್ನು ಈ ಐವತ್ತಾರು ಇಂಚು ಕಳೆದುಕೊಂಡಿತು.

ಅಪ್ರಬುದ್ಧವಾಗಿ ಕೈಗೊಂಡ ನೋಟು ಬ್ಯಾನ್ ನಿರ್ಧಾರದಿಂದ ದೇಶದಲ್ಲಿ ಅನೇಕಾನೇಕ ಪ್ರತ್ಯಕ್ಷ ಹಾಗು ಪರೋಕ್ಷ ಸಮಸ್ಯೆಗಳು ಉದ್ಭವವಾಗಿವೆ. ಉದಾಹರಣೆಗೆ, ಅಪನಗದೀಕರಣದ ಪರಿಣಾಮವಾಗಿ ಡಾಲರೆದುರು ರುಪಾಯಿ ಬೆಲೆ ಪಾತಾಳ ಸೇರಿ 15 ದಿನಗಳ ಅಂತರದಲ್ಲಿ ಎರಡನೇ ಬಾರಿ ಪೆಟ್ರೋಲ್ ಬೆಲೆಯನ್ನು ಏರಿಸಲಾಗಿದೆ. ಆದರೂ ಕೋಟಿಗಟ್ಟಲೆ ಹಣ ವ್ಯಯಿಸಿ ಬ್ಯಾನರ್-ಪ್ರಚಾರಗಳಿಂದ ಹೆತ್ತವರಿಗೆ ಹೆಗ್ಗಣ ಮುದ್ದೆನ್ನುವಂತೆ ಸಮಸ್ಯೆಗಳನ್ನೆಲ್ಲ ಅಲ್ಲಗಳೆದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುವುದರಲ್ಲಿ ಜೇಟ್ಲಿ-ಮೋದಿಗಳೆಲ್ಲ ಮುಳುಗಿದ್ದಾರೆ. ನಿಜಕ್ಕೂ ಅವರ ಸಮರ್ಥನೆ, ಪ್ರಾಮಾಣಿಕವಾಗಿದ್ದಿದ್ದರೆ, ಸಂಸತ್ತಿಗೆ ಹಾಜರಾಗದೇ, ನಂತರ ಬಂದರೂ ಉತ್ತರಕೊಡಲು ಹೋಗದೇ, ಜೈಕಾರ ಕೂಗುವ ಚೇಲಾಗಳೆದುರು ಮಾಡುವ ಭಾಷಣಗಳಲ್ಲಷ್ಟೇ ಸಮರ್ಥನೆಗಿಳಿಯುವ ಅನಿವಾರ್ಯತೆ ಮೋದಿಗೆ ಎದುರಾಗುತ್ತಿರಲಿಲ್ಲ.

ಡಿ.31 ರಂದು ಮೋದಿ ಆಡಲಿರುವ ಮಾತುಗಳು ಬೊಂಬಾಟ್ ಆಗಿರುತ್ತವೆಂದು ಅವರ ಹಿಂಬಾಲಕರು ಬಿಂಬಿಸಿದ್ದರು. ಆದರೆ ಅವತ್ತು ಮೋದಿ ಮಾಡಿದ ಭಾಷಣ ಕಳಪೆ ಬಜೆಟ್ ಭಾಷಣದಂತೆ ನೀರಸವಾಗಿತ್ತು. ಟಿವಿಯಲ್ಲಿದನ್ನು ಲೈವ್ ಎಂದು ತೋರಿಸುತ್ತಿದ್ದರೂ ಪ್ರತೀ ಭಾಗಕ್ಕೂ ಕಟ್ ಕಟ್ ಆಗಿ ಎಡಿಟಿಂಗ್ ಸ್ಪಷ್ಟವಾಗಿ ಕಾಣಿಸುತ್ತಿದ್ದು ಅದು ರೆಕಾರ್ಡೆಡ್ ಭಾಷಣ ಎಂಬುದು ಸ್ಪಷ್ಟವಾಗಿತ್ತು. ಜೋಷ್ ಕಳೆದುಕೊಂಡು ಸೋತಂತಿರುವ ಮೋದಿಯ ಮಾತನ್ನು ಜನ ಸಂಪೂರ್ಣ ಕೇಳಹೋಗದೇ ಚಾನೆಲ್ ಬದಲಿಸಿಕೊಂಡಿದ್ದೇ ಹೆಚ್ಚು.

ಮೋದಿಯ ಬಾಲಿಶ ಸುಳ್ಳುಗಳಿಗೆ ಮಿತಿಯೇ ಇಲ್ಲ

ಹಿಂದಿನ ಒಂದೂವರೆ ತಿಂಗಳಿನಿಂದ ಟಿವಿಯಲ್ಲಿ ರಿಲಯನ್ಸ್‌ನವರ ಜಿಯೋ ಡಿಜಿಟಲ್ ಲೈಫ್ ಎಂಬ ಆನ್‌ಲೈನ್ ಪೇಮೆಂಟಿನ ಜಾಹೀರಾತು ಜೋರಾಗಿ ಪ್ರಸಾರವಾಗುತ್ತಿದೆ. ಈ ಜಾಹಿರಾತಿನಲ್ಲಿ ಪ್ರಧಾನಿ ಮೋದಿಯಂತೆ ಕಾಣುವ ಹಾಗೂ ಮೋದಿಯಂತೆಯೇ ಬಿಳಿ ಗಡ್ಡ ಬಿಟ್ಟು ಅವರಂತೆಯೇ ಬಟ್ಟೆ ತೊಟ್ಟ ಒಬ್ಬ ಮುದುಕ ಕೈಯಲ್ಲಿ ಒಂದು ಮೊಬೈಲ್ ಹಿಡಿದುಕೊಂಡು ಮನೆಯ ಟೆರೇಸಿನಲ್ಲಿ ಹುಚ್ಚುಚ್ಚಾಗಿ ಕುಣಿಯುವ ದೃಶ್ಯವಿದೆ. ನಮ್ಮ ದೇಶದ ಪ್ರಧಾನಿಯ ಪ್ರತಿರೂಪ ಬಳಸಿ ಹೀಗೆ ಹುಚ್ಚುಚ್ಚಾಗಿ ಕುಣಿಯುವಂತೆ ತೋರಿಸಿರುವುದು ಸ್ವತಃ ಮೋದಿಗೆ ಅವಮಾನ ಎನಿಸದಿದ್ದರೂ ನಮ್ಮ ದೇಶಕ್ಕೆ ನಿಜವಾಗಿ ಅವಮಾನ. ಇದು ಅಂಬಾನಿಗಳ ದೇಶಭಕ್ತಿಯ ಒಂದು ತುಣುಕು ಅಷ್ಟೇ.



ನೋಟು ಅಮಾನ್ಯದ ನಂತರ ಜನರ ನಗದುರಹಿತ ವ್ಯವಹಾರದ ಅನುಕೂಲಕ್ಕಾಗಿ ಮೊನ್ನೆ ಮೋದಿಯೇ ಅಧಿಕೃತವಾಗಿ ಸರಕಾರದ ಒಂದು ಹೊಸ ಪೇಮೆಂಟ್ ಆಪ್ ಬಿಡುಗಡೆ ಮಾಡುತ್ತಾ, ಈ ಆಪ್‌ಗೆ 'ಭೀಮ್' ಎಂದು ಹೆಸರಿಟ್ಟಿರುವುದು ಡಾ. ಅಂಬೇಡ್ಕರರ ಗೌರವಾರ್ಥ ಎಂದು ಭಾರಿ ಸುಳ್ಳು ಹೇಳಿದರು. ಆದರೆ ದೂರಸಂಚಾರ ಇಲಾಖೆಯೇ ಅಧಿಕೃತವಾಗಿ ಬಿಡುಗಡೆ ಮಾಡಿರುವ ಮಾಹಿತಿ ಯಂತೆ ಭೀಮ್ ಎನ್ನುವುದು 'ಭಾರತ್ ಇಂಟರ್‌ಫೇಸ್ ಫಾರ್ ಮನಿ' ಎನ್ನುವ ಇಂಗ್ಲಿಷ್ ಹೆಸರಿನ ಹ್ರಸ್ವರೂಪ ಅಷ್ಟೇ. ದಲಿತರನ್ನು ಹಾಗೂ ಪ್ರಗತಿಪರರನ್ನು ಮೂರ್ಖರನ್ನಾಗಿ ಮಾಡಲು ಸುಳ್ಳಿನ ಸರದಾರ ಮೋದಿ ಅಂಬೇಡ್ಕರರ ಹೆಸರನ್ನು ಎಳೆದುತಂದಿರುವುದು ಖೇದಕರ. ತನ್ನ ಭಕ್ತರಂತೆ ಎಲ್ಲಾ ಭಾರತೀಯರೂ ಮಹಾ ಮೂರ್ಖರು ಎಂದು ಮೋದಿ ಭಾವಿಸಿರುವಂತಿದೆ.

ಕೆಲವೊಂದು ಕಠಿಣ ಸಂದಿಗ್ಧ ಸಂದರ್ಭಗಳಲ್ಲಿ ಪ್ರಧಾನ ಮಂತ್ರಿಗಳು ಸುಳ್ಳು ಹೇಳಬೇಕಾಗುತ್ತದೆ ನಿಜ. ಹಿಂದಿನ 69 ವರ್ಷಗಳಲ್ಲಿ ನಮ್ಮ ದೇಶದಲ್ಲಿ ಆಗಿ ಹೋದ ಪ್ರಧಾನ ಮಂತ್ರಿಗಳೂ ಕೆಲವೊಂದು ಸಂದಿಗ್ಧ ಸಂದರ್ಭಗಳಲ್ಲಿ ಸುಳ್ಳು ಹೇಳಿದ್ದರು ನಿಜ. ಆದರೆ ಅವರು ತಮ್ಮ ಪ್ರಧಾನ ಮಂತ್ರಿ ಪದದ ಘನತೆ ಗೌರವಗಳನ್ನು ಮರೆತು ಒಬ್ಬ ಪ್ರಾಥಮಿಕ ಶಾಲಾ ಹುಡುಗನಂತೆ ಹಸಿ ಹಸಿ ಸುಳ್ಳು ಹೇಳಿ ಇಡೀ ದೇಶವನ್ನು ಯಾಮಾರಿಸಲು ಎಂದೂ ಪ್ರಯತ್ನಿಸಿರಲಿಲ್ಲ. ಆದರೆ ಮೋದಿಯ ಬಾಲಿಶ ಸುಳ್ಳುಗಳಿಗೆ ಮಿತಿಯೇ ಇಲ್ಲ. ಹಿಂದಿನ 69 ವರ್ಷಗಳಲ್ಲಿ ಎಲ್ಲಾ ಹಿಂದಿನ ಪ್ರಧಾನಿಗಳು ಹೇಳಿರಬಹುದಾದ ಸುಳ್ಳುಗಳನ್ನು ಒಟ್ಟಿಗೆ ಸೇರಿಸಿದರೂ ಕೇವಲ ಹಿಂದಿನ ಎರಡು ವರ್ಷಗಳಲ್ಲಿ ಮೋದಿ ಹೇಳಿರುವ ಸುಳ್ಳುಗಳಿಗೆ ಸಮನಾಗಲಾರದು. ಇಂತಹ ಸುಳ್ಳೇಂದ್ರನನ್ನು ನಾವು ಪ್ರಧಾನಿಯಾಗಿ ಹೊಂದಿರುವುದು ನಮ್ಮ ದೇಶದ ದುರಾದೃಷ್ಟ.

- ಮಲ್ಲಿಕಾರ್ಜುನ ಶೆಟ್ಟರ್, ಬೆಂಗಳೂರು

ಪ್ರತಿಭಟನೆಯೇ ಉಳಿದಿರುವ ಮಾರ್ಗ

ನೋಟು ಅಮಾನ್ಯಕರಣದ ಪ್ರಕ್ರಿಯೆಯಿಂದಾಗಿ ರೈತಾಪಿ ಜನರು, ಕಾರ್ಮಿಕರು, ಸಣ್ಣ ವ್ಯಾಪಾರಿಗಳು ಅನುಭವಿಸಿದ ತೊಂದರೆಗಳು, ಸಾಮಾನ್ಯರು, ಬ್ಯಾಂಕ್- ಸಿಬ್ಬಂದಿ ಸೇರಿದಂತೆ ದೇಶಾದ್ಯಂತ ನೂರಕ್ಕೂ ಹೆಚ್ಚು ಸಾವುಗಳನ್ನು ಕಂಡು ಕೂಡ, ದೇಶಕ್ಕೆ ಅಮಾನ್ಯಕರಣದಿಂದ ಒಳ್ಳೆಯದಾಗಿದೆ ಎನ್ನುವ ಬಿಜೆಪಿ ನೇತಾರರ ಸಮರ್ಥನೆಗಳು ಅಮಾನವೀಯ, ಹೀನ ರಾಜಕೀಯ ಅಭಿರುಚಿಯ ಪ್ರತೀಕವಾಗಿದೆ. ಅಮಾನ್ಯಕರಣ ದಿಂದ ಲಾಭಗಳಾಗಿವೆ ಎನ್ನುವ ಸಂವೇದನಾ ಹೀನತೆಯ ಪುಢಾರಿ ಮಾತುಗಳು, 2004 ರ ಬಿಜೆಪಿ ಪ್ರಚಾರ ಮಂತ್ರ: "ಭಾರತ ಬೆಳಗುತ್ತಿದೆ" ಎನ್ನುವದನ್ನು ಪ್ರತಿಧ್ವನಿಸುತ್ತಿದೆ. ಕಾಂಗ್ರೆಸ್ ಸರಕಾರಗಳ ಸಾಧನೆಗಳಾದ ಬ್ಯಾಂಕ್ ರಾಷ್ಟ್ರೀಕರಣ, ಆಧಾರ್ ಕಾರ್ಡ್ ಯೋಜನೆ, ಮುಕ್ತ ಆರ್ಥಿಕತೆ, ಎಟಿಎಂಗಳು, ಹೆಚ್ಚಿನ ವಿದೇಶಿ ವಿನಿಮಯದ ಸಂಗ್ರಹ ಇತ್ಯಾದಿ ಎಲ್ಲವುಗಳನ್ನೂ ಬಳಸಿಕೊಂಡೂ ಅಮಾನ್ಯಕರಣದ ಮೂಲ ಉದ್ದೇಶಿತ ಗುರಿಗಳನ್ನು ಸಾಧಿಸಲು ವಿಫಲವಾಗಿ, ಈಗ ಸಾಮಾನ್ಯರ ಗಮನವನ್ನು ನಗದುರಹಿತ ವ್ಯವಹಾರಗಳತ್ತ ಸೆಳೆಯಲು ಬಿಜೆಪಿ ನೇತಾರರು ಯತ್ನಿಸುತ್ತಿರುವದು ಭಂಡತನದ ಪರಾಕಾಷ್ಠೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ತಮ್ಮ ಶ್ರಮದ ಹಣವನ್ನು ಬಳಸುವ ತಮ್ಮ ಅಧಿಕಾರ ಸಂವಿಧಾನದತ್ತವಾಗಿದೆ ಎನ್ನುವುದನ್ನು ಮನಗಾಣಬೇಕಿದೆ. ಅಂತೆಯೇ ತಮ್ಮದೇ ಹಣ ಬ್ಯಾಂಕ್‌ನಲ್ಲಿ ಹೆಚ್ಚಿನ ಸಮಯ ಇರುವಂತಾಗಿರು ವದರಿಂದ ಆ ಹಣಕ್ಕೆ ಬಡ್ಡಿ, ಸಾಮಾನ್ಯರು ಅನುಭವಿಸಿದ ತೊಂದರೆಗಳಿಗೆ ಪರಿಹಾರ, ಸಣ್ಣ ವ್ಯಾಪಾರಿಗಳು ತಮ್ಮ ನಷ್ಟಕ್ಕಾಗಿ ಕರ ವಿನಾಯತಿಗಳಿಗಾಗಿ ಗಾಂಧೀಜಿಯವರ ತತ್ವಗಳಲ್ಲಿ ವಿಶ್ವಾಸವಿಟ್ಟು ಅಹಿಂಸಾತ್ಮಕವಾಗಿ ಪ್ರತಿಭಟಿಸು ವುದೇ ಉಳಿದಿರುವ ಸರಿಯಾದ ಕ್ರಮ.



- ಲಕ್ಷ್ಮಣ ನಾಯ್ಕ್, ಬೆಳಗಾವಿ



ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.


ದಿನಗಳ ಹಿಂದೆ ಚಾನೆಲ್‌ಗಳು ಗಂಟೆಗಟ್ಟಲೆ ಕೊರೆದಂತೆ ಈ ಬಹು ನಿರೀಕ್ಷಿತ ಭಯಂಕರ ಭಾಷಣದ ಬಗ್ಗೆ ಯಾವ ಮಹತ್ವದ ಟ್ರೋಲ್ ನ್ಯೂಸನ್ನೂ ಯಾವ ಚಾನೆಲ್ಲೂ ಕೊಡಹೋಗಲಿಲ್ಲ. ತಮಾಷೆಯೆಂದರೆ, ಬಿದ್ದರೂ ಮೀಸೆ ಮಣ್ಣಾಗದಂತ ನಿಲುವು ತೋರಲು ತನ್ನ ಸಮರ್ಥನಾ ಭಾಷಣದಲ್ಲಿ ಲೋಹಿಯಾ, ಲಾಲ್‌ಬಹದ್ದೂರ್ ಶಾಸ್ತ್ರಿ, ಜಯಪ್ರಕಾಶ ನಾರಾಯಣರಂತವರನ್ನೂ ಜೋಡಿಸಿಕೊಂಡದ್ದು (ಜತೆಗೆ ಸಂಬಂಧವೇ ಇಲ್ಲದಿದ್ದರೂ ಅಂಬೇಡ್ಕರರನ್ನೂ ಕೂಡ) ಸೋಜಿಗವಾಗಿತ್ತು.

ಅವತ್ತು **BHIM App** ಅನ್ನು ಬಿಡುಗಡೆ ಮಾಡಲಾಯಿತು. ಆದರೆ ಭೀಮ್ ಅಂದರೆ ಅಂಬೇಡ್ಕರ್ ಅಲ್ಲ; ಬದಲಾಗಿ **Bharat Interface for Money.** ಜನರನ್ನು ಯಾಮಾರಿಸುವ ಬುದ್ಧಿಯನ್ನು ಬಿಡದ, ಮೋದಿಗೆ ಆ ಭಾಷಣ ಬರೆದುಕೊಟ್ಟವನ ಬುದ್ಧಿವಂತಿಕೆಯು ಮೆಚ್ಚಬೇಕಾದದ್ದೇ. ಒಟ್ಟಾರೆ ಭಕ್ತ ಜನರ ಅತಿಯಾದ ವ್ಯಕ್ತಿ ಪೂಜೆ ಹಾಗು ಗಣನಾಯಕ ಹಾಗು ಆತನ ಹಿಂಬಾಲಕರ ವ್ಯವಸ್ಥಿತ ಯಾಮಾರಿಸುವಿಕೆಗಳ ಭರಾಟೆಯಲ್ಲಿ ಈ ದೇಶ ಯಾವ ಪ್ರಪಾತ ತಲುಪುತ್ತದೋ ಆ ದೇವರೇ ಬಲ್ಲ.

- ಶಂಕರ್. ಬ್ರಹ್ಮಾವರ

ಜಾತಿವ್ಯವಸ್ಥೆಯನ್ನೂ ವಿದೇಶಕ್ಕೆ ಕೊಂಡೊಯ್ಯಲು ಪಾಸ್‌ಪೋರ್ಟ್ ಬೇರೆ ಕೇಡು

ಇಂದಿನ ಸಾಮಾಜಿಕ ಅಗತ್ಯತೆಗಳಿಗೆ ಅನುಗುಣವಾಗಿ ವಿದೇಶಾಂಗ ವ್ಯವಹಾರ ಖಾತೆ ಹೊಸ ಪಾಸ್‌ಪೋರ್ಟ್ ಅರ್ಜಿ ಪ್ರಕ್ರಿಯೆಯ ನಿಯಮಾವಳಿಗಳನ್ನು ಇತ್ತೀಚೆಗೆ ಘೋಷಿಸಿದೆ. ಅನಾಥಮಕ್ಕಳು, ಒಬ್ಬಂಟಿ ತಾಯಂದಿರು ಹಾಗೂ ಸಾಧು-ಸನ್ಯಾಸಿಗಳು ಸೇರಿದಂತೆ ವಿವಿಧ ವರ್ಗದವರಿಗೆ ಹೊಸ ನಿಯಮಾವಳಿ ರೂಪಿಸಲಾಗಿದೆ.




ಸಾಧು ಹಾಗೂ ಸನ್ಯಾಸಿಗಳು ತಮ್ಮ ಪಾಸ್‌ಪೋರ್ಟ್ ಅರ್ಜಿ ಸಲ್ಲಿಸುವಾಗ ತಮ್ಮ ಮೂಲ ಪೋಷಕರ ಬದಲಿಗೆ ತಮ್ಮ ಆಧ್ಯಾತ್ಮಿಕ ಗುರುವಿನ ಹೆಸರು ನಮೂದಿಸಲು ಅವಕಾಶವಿದೆ ಎಂದು ಹೊಸ ನಿಯಮಾವಳಿಯಲ್ಲಿ ಹೇಳಲಾಗಿದೆ. ಈ ನಿಯಮಾವಳಿಯನ್ನು ಬಿಜೆಪಿ ಸರಕಾರ ತರಲು ಮುಖ್ಯ ಕಾರಣ ನೂರಾರು ಸಾಧುಸನ್ಯಾಸಿಗಳು ಆರೆಸ್ಸೆಸ್ ಸದಸ್ಯರಾಗಿರುವುದು. ಇವರಲ್ಲಿ ಹೆಚ್ಚಿನವರು ಹೆಸರಿಗೆ ಬ್ರಹ್ಮಚಾರಿಗಳು ಆದರೆ ವಾಸ್ತವವಾಗಿ ಚಡ್ಡಿ ಹರುಕರು. ಇವರಿಂದಾಗಿ ಅನೇಕ ಮಹಿಳಾ ಭಕ್ತರು ಒಬ್ಬಂಟಿ ತಾಯಂದಿರಾಗಿದ್ದಾರೆ ಅಥವಾ ಇವರೇ ತಮ್ಮ ಶಿಷ್ಯೆಯರಿಗೆ ಅನೈತಿಕ ಮಕ್ಕಳನ್ನು ಹುಟ್ಟಿಸಿ ನಂತರ ಈ ಮಗು ಮಠದಲ್ಲಿ ಯಾರೋ ರಾತ್ರಿ ಬಿಟ್ಟುಹೋದ ಅನಾಥ ಮಗು ಎಂದು ಹಣೆಪಟ್ಟಿ ಕೊಟ್ಟಿದ್ದಾರೆ.

ಕೇಸರಿ ಪಕ್ಷದಲ್ಲಿ ನೇರವಾಗಿ ಅನೇಕ ಸಾಧು-ಸಾಧ್ವಿ-ದೇವ ಮಾನವರು ಇದ್ದಾರೆ. ಇವರ ಕೌಟುಂಬಿಕ ಹಿನ್ನೆಲೆ ಕೆದಕಿದರೆ ಅದು ಕರಾಳವಾಗಿದೆ. ಹಾಗಾಗಿ ಅವರು ಪಾಸ್‌ಪೋರ್ಟ್‌ಗಾಗಿ ಅರ್ಜಿ ಸಲ್ಲಿಸಿದಾಗ ಪಾಸ್‌ಪೋರ್ಟ್ ಅರ್ಜಿ ಪರಿಶೀಲನೆ ಹಂತದಲ್ಲಿ ಕೇಸರಿ ಸಾಧು-ಸಾಧ್ವಿ-ದೇವ ಮಾನವರ ಕರಾಳ ಹಿನ್ನೆಲೆ ಅಧಿಕೃತವಾಗಿ ಕೆದುಕಲು ಯಾರಿಗೂ ಅವಕಾಶ ಇರಬಾರದು ಎಂಬ ಉದ್ದೇಶದಿಂದ ಈ ಹೊಸ ಪಾಸ್‌ಪೋರ್ಟ್ ಅರ್ಜಿ ನಿಯಮಾವಳಿಯನ್ನು ಕೇಸರಿ ಸರಕಾರ ತಂದಿರುವಂತಿದೆ.

ನಮ್ಮ ರಾಜ್ಯದ ಗೋಸ್ವಾಮಿ ಒಬ್ಬರೇ ಎಷ್ಟು ಒಬ್ಬಂಟಿ ತಾಯಂದಿರನ್ನು ಸೃಷ್ಟಿಸಿರಬಹುದು ಅಥವಾ ಎಷ್ಟು ಅನಾಥಮಕ್ಕಳನ್ನು ಹುಟ್ಟಿಸಿರಬಹುದು ಎಂದು ಊಹಿಸುವುದು ಕಷ್ಟವಾಗಲಾರದು!

ಮಹಾಭಾರತದ ವೇದವ್ಯಾಸ ಹಾಗೂ ಕುಂತಿ-ಮಾದ್ರಿ ಮಕ್ಕಳಾದ ಪಾಂಡವರು ತಮ್ಮ ಪಾಸ್‌ಪೋರ್ಟ್ ಅರ್ಜಿಯಲ್ಲಿ ತಮ್ಮ ನಿಜ ತಂದೆಯ ಹೆಸರುಗಳನ್ನು ಏನೆಂದು ಬರೆಯುತ್ತಿದ್ದರು? ಭಾರತದ ಎಲ್ಲಾ ವೈದಿಕ ಪುರಾಣಗಳಲ್ಲೂ ಇಂತಹ ಅನೇಕ ಒಂಟಿ ತಾಯಂದಿರು ಅಥವಾ ತಂದೆಯ ಹೆಸರು ಗೊತ್ತಿಲ್ಲದ ಮಕ್ಕಳಿದ್ದರು. ಅವರೆಲ್ಲಾ ಇಂದು ಜೀವಂತ ಇದ್ದಿದ್ದರೆ ಅವರಿಗೆಲ್ಲಾ ಪಾಸ್‌ಪೋರ್ಟ್ ಮಾಡಿಸುವುದು ಎಷ್ಟು ಕಷ್ಟ ಆಗುತ್ತಿತ್ತು ಎಂದು ನಮ್ಮ ಮನುವಾದಿ ವೈದಿಕಪ್ರಿಯ ಮೋದಿ-ಸುಷ್ಮಾ ಸ್ವರಾಜರಿಗೆ ಗೊತ್ತು, ಹಾಗಾಗಿ ಮೊನ್ನೆ ಅವರು ಪಾಸ್‌ಪೋರ್ಟ್ ನಿಯಮಾವಳಿಗಳನ್ನು ಬದಲಾಯಿಸಿರುವುದಂತೆ.

ಆದರೆ ಮುಖ್ಯವಾಗಿ ವೈದಿಕ ಪುರಾಣಗಳ ನಿಯಮ ಇಂತಹ ಸಾಧು-ಸನ್ಯಾಸಿ, ಮಠಾಧೀಶ-ದೇವಮಾನವರು ಸಮುದ್ರ ಲಂಘನ ಮಾಡುವಂತಿಲ್ಲ ಎಂಬ ನಿಯಮವಿದೆ.



ಸಾಧು ಸನ್ಯಾಸಿ ಮಠಾಧೀಶ ದೇವಮಾನವರಿಗೆ ಪಾಸ್‌ಪೋರ್ಟ್ ಕೊಡುವುದರಿಂದ ಪವಿತ್ರ ವೈದಿಕ ನಿಯಮ ಉಲ್ಲಂಘಿಸಲು ಸ್ವತಃ ವೈದಿಕ ಸರಕಾರವೇ ಅನುವು ಮಾಡಿಕೊಟ್ಟಂತಾಗಿ ಮೋದಿ ಗ್ಯಾಂಗಿಗೆ ಘೋರ ಪಾಪ ತಗಲುವುದಿಲ್ಲವೇ? ಅವರು ನಂತರ ಯಾವ ಮುಖವಿಟ್ಟುಕೊಂಡು ಯಮಧರ್ಮ ಮತ್ತು ಚಿತ್ರಗುಪ್ತನ ಎದುರಲ್ಲಿ ತಮ್ಮ ಈ ಹೀನಧರ್ಮ ವಿರೋಧಿ ಕೃತ್ಯವನ್ನು ಸಮರ್ಥಿಸಿಕೊಳ್ಳಲು ಸಾಧ್ಯ?

ಮುಗ್ಧ ಭಾರತೀಯ ಮಾನವರ ಎದುರು ತಮ್ಮ ಮಹಾಮೂರ್ಖ ನೋಟು ರದ್ದತಿಯನ್ನು ಸಮರ್ಥಿಸಿಕೊಂಡಷ್ಟು ಸುಲಭವಲ್ಲ ಯಮಧರ್ಮ-ಚಿತ್ರಗುಪ್ತರ ಎದುರು ವೈದಿಕ ಧರ್ಮದ ನಿಯಮ ಮುರಿದು ಸಾಧು-ಸನ್ಯಾಸಿ- ಮಠಾ ಧೀಶರಿಗೆ ಪಾಸ್‌ಪೋರ್ಟ್ ಕೊಟ್ಟಿದ್ದನ್ನು ಸಮರ್ಥಿಸಿ ಕೊಳ್ಳುವುದು. ಸಾಧು-ಸನ್ಯಾಸಿ-ಮಠಾಧೀಶರಿಗೆ ಪಾಸ್‌ಪೋರ್ಟ್ ಕೊಟ್ಟು ಮೋದಿ ಸರಕಾರ ಮಾಡುತ್ತಿರುವ ಪಾಪವನ್ನು ಯಮಧರ್ಮ ಕ್ಷಮಿಸುವುದು ಸಾಧ್ಯವೇ ಇಲ್ಲ ಬಿಡಿ.

ಮೇಲಾಗಿ ಈ ಸಾಧು, ಸನ್ಯಾಸಿ, ದೇವಮಾನವ, ಯೋಗಗುರು, ಮಠಾಧೀಶರು ಹೋಗುವುದು ಅಮೆರಿಕ ಅಥವಾ ಯಾವುದಾದರೂ ಶ್ರೀಮಂತ ಯುರೋಪಿಯನ್ ದೇಶಗಳಿಗೆ ಮಾತ್ರ. ದೇವರು ಹಾಗೂ ಯೋಗದ ಹೆಸರಲ್ಲಿ ಅಲ್ಲಿಯ ಬಿಳಿಯರನ್ನು ಮಂಗ ಮಾಡಿ ಸುಲಭದಲ್ಲಿ ಧನ ಗಳಿಸುವುದೇ ಇವರ ಮೂಲ ಗುರಿ. ಎಲ್ಲಾ ಹಿಂದೂ ಮಹಾತ್ಮರು ಪಾಪಿ ಕರಿಯರನ್ನು ತಮ್ಮ ಹತ್ತಿರ ಸುಳಿಯಲೂ ಬಿಡುವುದಿಲ್ಲ, ಹಾಗಾಗಿ ಎಲ್ಲಾ ಹಿಂದೂ ಮಹಾತ್ಮರ ಸುತ್ತ ಕೇವಲ ಬಿಳಿಯ ವಿದೇಶಿಯರೇ ಇರುವುದು.

ಹಿಂದಿನ ಎರಡು ವರ್ಷಗಳಿಂದ ಹಿಂದೂತ್ವವಾದಿ ಹೆಡಗೇವಾರ್ ಜನ್ಮ ದಿನವಾದ ಜೂನ್ 21ಕ್ಕೆ ಮೋದಿ ಆಚರಿಸುವ ವಿಶ್ವಯೋಗ ದಿನದಂದು ಇಡೀ ಜಗತ್ತಿನಲ್ಲಿ ಒಬ್ಬನೇ ಒಬ್ಬ ಕರಿಯ ಯೋಗ ಮಾಡುವುದನ್ನು ಟಿವಿಯಲ್ಲಾದರೂ ಯಾರಾದರೂ ನೋಡಿದ್ದಾರೆಯೇ? ಇಸ್ಕಾನ್‌ನಲ್ಲಿ ಒಬ್ಬನೇ ಒಬ್ಬ ಜುಟ್ಟು ಬಿಟ್ಟ ನಾಮ ಬಳಿದ ಕರಿಯ 'ಹರೇಕೃಷ್ಣ' ಭಕ್ತ ಕಾಣಸಿಗುವುದಿಲ್ಲ. ಈ ಮಾನಸಿಕತೆಯ ಆಳಕ್ಕಿಳಿದು ನೋಡಿದರೆ ಹಿಂದೂ ಧರ್ಮದ ಜಾತಿ ಅಸ್ಪೃಶ್ಯತೆಯನ್ನು ಅವರೆಲ್ಲ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಅನುಸರಿಸುತ್ತಿದ್ದಾರೆ. ಚರ್ಮದ ಬಣ್ಣದ ಆಧಾರದಲ್ಲಿ ಭಾರತೀಯರ ನೀಚ ವೈದಿಕ ಜಾತಿ ಬುದ್ಧಿಯನ್ನು ವಿದೇಶದಲ್ಲೂ ತೋರಿಸುವುದನ್ನು ಅವರೆಲ್ಲ ಮರೆಯುವುದಿಲ್ಲ. ಇಂತಹ ಜಾತಿವಾದಿ ಸಾಧು, ಸನ್ಯಾಸಿ, ದೇವಮಾನವ, ಯೋಗಗುರು, ಮಠಾಧೀಶರಿಗೆ ತಮ್ಮ ನೀಚ ಜಾತಿ ವ್ಯವಸ್ಥೆಯನ್ನೂ ವಿದೇಶಕ್ಕೆ ಕೊಂಡೊಯ್ಯಲು ಪಾಸ್‌ಪೋರ್ಟ್ ಬೇರೆ ಕೇಡು.

- ಜೆ.ರವಿಕಿರಣ, ಮೈಸೂರು

ನೂರರ ಸಂಭ್ರಮದಲ್ಲಿ ತೇಲುತ್ತಿದ್ದೇನೆ: ರಮೇಶ್ ಅರವಿಂದ್

ಈ ವಾರ ಬಿಡುಗಡೆ ಆಗುತ್ತಿರುವ 'ಪುಷ್ಪಕ ವಿಮಾನ' ರಮೇಶ್ ಅರವಿಂದ್ ಅವರ ನೂರನೇ ಸಿನಿಮಾ. ಇದು ತಮಿಳಿನ ರೀಮೇಕ್ ಚಿತ್ರವಾ ಎಂಬ ಅನುಮಾನ ಕೂಡ 'ಪುಷ್ಪಕ ವಿಮಾನ' ಹುಟ್ಟುಹಾಕಿದೆ. ಈ ಎಲ್ಲದರ ಕುರಿತು ರಮೇಶ್ ಮಾತಾಡಿದ್ದಾರೆ.



ರಮೇಶ್ ಅರವಿಂದ್ ನಾಲ್ಕೈದು ಭಾಷೆಗಳಲ್ಲಿ ನಟಿಸಿದ್ದಾರೆ. ನೂರೈವತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಾಯಕರಾಗಿ ಕಾಣಿಸಿಕೊಂಡಿದ್ದಾರೆ. ನಟ, ನಿರ್ದೇಶಕ, ನಿರ್ಮಾಪಕ, ಬರಹಗಾರರಾಗಿಯೂ ಸ್ಯಾಂಡಲ್‌ವುಡ್‌ನಲ್ಲಿ ಗುರುತಿಸಿಕೊಂಡಿದ್ದಾರೆ. ಈ ವಾರ ಇವರ 'ಪುಷ್ಪಕ ವಿಮಾನ' ಚಿತ್ರ ರಿಲೀಸ್ ಆಗುತ್ತಿದೆ. ಕನ್ನಡದಲ್ಲಿ ಇದು ಇವರ ನೂರನೇ ಸಿನಿಮಾ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಈ ಚಿತ್ರದ ವಿಶೇಷತೆಯ ಕುರಿತು ರಮೇಶ್ ಹಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ.

** ಸೆಂಚುರಿ ಅನ್ನುವುದು ಪ್ರತಿ ಕಲಾವಿದನಿಗೂ ಸಂಭ್ರಮ. ಈ ಕುರಿತು ಏನು ಹೇಳುತ್ತೀರಿ?*

ನಿಜ ಹೇಳುತ್ತೇನೆ. ಸಿನಿಮಾದ ಶೂಟಿಂಗ್ ಶುರುವಾಗಿ ಎರಡು ಹಂತಗಳು ಮುಗಿದಿದ್ದವು. ಆಗಲೂ ನನಗೆ ಇದು ನನ್ನ ನೂರನೇ ಸಿನಿಮಾ ಅಂತ ಗೊತ್ತಿರಲಿಲ್ಲ. ಯಾವುದೋ ವಿಚಾರವಾಗಿ ಪತ್ರಕರ್ತರೊಬ್ಬರು ನನಗೆ ಫೋನ್ ಮಾಡಿದ್ದರು. ಅವರೇ ಇದು ನನ್ನ ನೂರನೇ ಸಿನಿಮಾ ಅಂತ ನೆನಪಿಸಿದ್ದು. ಆಗ ನಾನು 'ಪುಷ್ಪಕ ವಿಮಾನ' ಟೀಮ್ ಕರೆದು ಚೆಕ್ ಮಾಡಲು ಹೇಳಿದ್ದೆ. ಆಗ ಗೊತ್ತಾಯಿತು. 'ಪುಷ್ಪಕ ವಿಮಾನ' ನನ್ನ ಕನ್ನಡದ ನೂರನೇ ಸಿನಿಮಾ ಎಂದು ಹೇಳಿಕೊಳ್ಳುವುದಕ್ಕೆ ಹೆಮ್ಮೆ ಪಡುತ್ತೇನೆ.

** ಬಹುತೇಕ ಪ್ರೇಮಿಯ ಪಾತ್ರಗಳನ್ನೇ ನೀವು ನಿರ್ವಹಿಸಿದವರು. ಈ ಬಾರಿ ಹೊಸ ರೀತಿಯ ಪಾತ್ರ ಎನ್ನುತ್ತೀರಿ. ಯಾವ ರೀತಿಯ ಕ್ಯಾರೆಕ್ಟರ್ 'ಪುಷ್ಪಕ ವಿಮಾನ'ದಲ್ಲಿದೆ?*

ಇಲ್ಲಿ ನಾನು ಬುದ್ಧಿಮಾಂದ್ಯ ತಂದೆಯಾಗಿ ಕಾಣಿಸಿಕೊಂಡಿದ್ದೇನೆ. ಅದು ಅನಂತರಾಮಯ್ಯನ ಪಾತ್ರ. ಆತ ಮಗಳಿಗಿಂತಲೂ ಮುಗ್ಧ. ಮಗಳನ್ನೇ ಇಡೀ ಪ್ರಪಂಚ ಅಂದುಕೊಂಡವನು. ಜಗತ್ತಿನಲ್ಲಿ ನಡೆಯುವ ಘಟನೆಯೊಂದು ಈ ತಂದೆ ಮತ್ತು ಮಗಳ ಜೀವನದಲ್ಲಿ ಆಟ ಆಡುತ್ತದೆ. ಅದೇ ಸಿನಿಮಾ. ಬುದ್ಧಿಮಾಂದ್ಯನ ಪಾತ್ರ ಮಾಡುವುದು ಸುಲಭವಾಗಿರಲಿಲ್ಲ. ಪಾತ್ರಕ್ಕಾಗಿ ಒಂದಷ್ಟು ಸಿದ್ಧತೆ ಮಾಡಿಕೊಂಡೆ. ಈ ರೀತಿಯ ಪಾತ್ರ ಮಾಡಿದವರ ಸಿನಿಮಾಗಳನ್ನು ನೋಡಿದೆ. ಅವರೆಲ್ಲರೂ ಏನು ಮಾಡಿದ್ದರೋ, ಅದನ್ನು ಮತ್ತೆ ನೆನಪಿಸುವ ಕೆಲಸ ಇಲ್ಲಿ ಆಗಿಲ್ಲ. ನಮ್ಮದೇ ಆದ ರೀತಿಯಲ್ಲಿ ಪಾತ್ರವನ್ನು ಪೋಷಿಸಿದ್ದೇನೆ.

** ಈ ಸಿನಿಮಾ ವಿಭಿನ್ನ ಅನ್ನುವುದನ್ನು ಹೇಗೆ ನಿರೂಪಿಸುತ್ತೀರಿ?*

ಸಾಮಾನ್ಯವಾಗಿ ನಾನು ಮಾಡಿರುವ ಮತ್ತು ಇತರ ಕಲಾವಿದರ ಚಿತ್ರಗಳು ಹೀರೋ ಮತ್ತು ಹೀರೋಯಿನ್ ಸುತ್ತ ಗಿರಕಿ ಹೊಡೆಯುತ್ತಿದ್ದವು. ಪ್ರೇಮಿಗಳ ಕತೆಯ ಹೊರತಾಗಿ ನಾವು ಇನ್ನೂ ಆಚೆ ಬಂದಿಲ್ಲ. ಆದರೆ, ಈ ಸಿನಿಮಾ ಕೊಂಚ ವಿಭಿನ್ನ ಕತೆಯನ್ನು ಆಯ್ಕೆ ಮಾಡಿಕೊಂಡಿದೆ. ಸಂಬಂಧಗಳನ್ನು ಸಂಭ್ರಮಿಸುವ ಅಂಶಗಳು ಈ ಚಿತ್ರದಲ್ಲಿವೆ. ಹೃದಯಮುಟ್ಟುವಂತಹ ಮತ್ತು ನವಿರಾದ ಭಾವನೆಯನ್ನು ತಟ್ಟುವ ವಿಷಯ ಸಿನಿಮಾದಲ್ಲಿದೆ. ಇದೆಲ್ಲವನ್ನೂ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ ನಿರ್ದೇಶಕರು.

** ಇದು ತಮಿಳಿನ ರೀಮೇಕ್ ಸಿನಿಮಾ ಅನ್ನುವ ಆರೋಪವಿದೆ?*

ನಾನೂ ಈ ವಿಷಯವನ್ನು ಕೇಳಿದ್ದೇನೆ. ಆದರೆ ಇದು ಯಾವುದೇ ಚಿತ್ರದ ರೀಮೇಕ್ ಅಲ್ಲ, ಕೆಲವು ಕೊರಿಯನ್ ಸಿನಿಮಾಗಳ ಸ್ಫೂರ್ತಿಯಿಂದ ಮಾಡಿದ ಸಿನಿಮಾವಂತೆ. ನಿರ್ದೇಶಕ ರವೀಂದ್ರನಾಥ್ ಜತೆ ನಾನೂ ಕೂಡ ಈ ವಿಚಾರವಾಗಿ ಮಾತಾಡಿದೆ. ಅವರು ಹಾಲಿವುಡ್ ಸಿನಿಮಾಗಳ ಸ್ಫೂರ್ತಿ ಇರುವುದನ್ನು ಹೇಳಿದರು. ಆದರೆ ಕದ್ದಿರುವ ಕತೆಯಂತೂ ಅಲ್ಲ, ನಮ್ಮ ನೆಲದ ಮನಸುಗಳು ಬೇಡುವ ಪ್ರತಿ ಅಂಶಗಳೂ ಸಿನಿಮಾದಲ್ಲಿವೆ.

** 'ಪುಷ್ಪಕ ವಿಮಾನ'ದ ವಿಶೇಷಗಳೇನು?*

ಸಿನಿಮಾದ ಕಂಟೆಂಟ್ ವಿಭಿನ್ನವಾಗಿದೆ. ಬುದ್ಧಿಮಾಂದ್ಯ ತಂದೆ ಹಾಗೂ ಆರು ವರ್ಷದ ಮಗಳ ನಡುವೆ ಇರುವ ಕತೆ ಇಲ್ಲಿದ್ದರೂ, ಹಲವು ಟ್ವಿಸ್ಟ್‌ಗಳನ್ನು ಕಾಣಬಹುದು. ಸಿನಿಮಾ ನೋಡಿದ ಪ್ರತಿ ತಂದೆಯೂ ಮಗಳನ್ನು ಮತ್ತಷ್ಟು ಪ್ರೀತಿಸುತ್ತಾನೆ. ಮಗಳು ತಂದೆಯನ್ನು ಆರಾಧಿಸುತ್ತಾಳೆ. ಅದರಲ್ಲೂ ಹೆಣ್ಣು ಮಕ್ಕಳನ್ನು ಹೆತ್ತಿರುವ ಪ್ರತಿ ತಂದೆಯೂ ಮಿಸ್ ಮಾಡದೇ ನೋಡುವಂತಹ ಚಿತ್ರವಿದು.


** ಸಿನಿಮಾದಲ್ಲಿ ಜೂಹಿ ಚಾವ್ಲಾ ಯಾಕೆ ಬಂದರು?*

ಮಹತ್ವದ ದೃಶ್ಯದಲ್ಲಿ ಹಾಡೊಂದು ಬರುತ್ತದೆ. ಈ ಹಾಡಿನಲ್ಲಿ ಜೂಹಿ ಅವರೇ ಕಾಣಿಸಿಕೊಳ್ಳಬೇಕು ಅನ್ನುವುದು ಸಿನಿಮಾ ತಂಡದ ಆಸೆ ಆಗಿತ್ತು. ಅಲ್ಲದೇ ಆ ಪಾತ್ರದ ಮೂಲಕ ಸಿನಿಮಾಗೂ ಒಂದು ಹೊಸ ಕಲರ್ ಸಿಗುತ್ತದೆ. ಸಿನಿಮಾ ತಂಡದ ಆಸೆಯಂತೆ ಜೂಹಿ ಹಾಡೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಆ ಹಾಡು ಕೂಡ ಈಗ ಫೇಮಸ್ ಆಗಿದೆ.

** ನಿಮ್ಮೊಂದಿಗೆ ನಿಮ್ಮ ಮಗಳಾಗಿ ನಟಿಸಿದ ಕಲಾವಿದರ ಬಗ್ಗೆ ಏನು ಹೇಳುತ್ತೀರಿ?*

ಯುವಿನಾ ಮಗಳ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಆಕೆ ನನಗೆ ಬಾಲ ನಟಿ ಅಂತ ಅನಿಸಲೇ ಇಲ್ಲ, ಸಿನಿಮಾದ ಎಲ್ಲಾ ಭಾಷೆಯೂ ಅವಳಿಗೆ ಗೊತ್ತು, ಕನ್ನಡದವಳು ಅಲ್ಲ, ಆದರೂ ಚೆನ್ನಾಗಿ ಕನ್ನಡ ಮಾತಾಡುತ್ತಾಳೆ. ಇದೇ ಪಾತ್ರವನ್ನು ರಚಿತಾ ರಾವ್ ಕೂಡ ಮಾಡಿದ್ದಾರೆ. ಮಗು ದೊಡ್ಡದಾದಾಗಿನ ಪಾತ್ರವದು. ಇಲ್ಲಿ ರಚಿತಾ ಲಾಯರ್ ಆಗಿ ಕಾಣಿಸಿಕೊಂಡಿದ್ದಾರೆ. ■

ಸಂಚಾರಿ ವಿಜಯ್



ನಮ್ಮ ನಾಟಕ ತಂಡದ ಉತ್ಸಾಹಿ ಹುಡುಗರೆಲ್ಲಾ ಸೇರಿ ಒಂದು ಕಿರುಚಿತ್ರ ಮಾಡುತ್ತಿದ್ದಾರೆ. ಇತ್ತೀಚೆಗೆ ತೆರೆಕಂಡ 'ತಿಥಿ', 'ಯು ಟರ್ನ್', 'ರಾಮರಾಮರೇ' ಚಿತ್ರಗಳೇ ಇವರಿಗೆ ಸ್ಫೂರ್ತಿ. 'ಅವ್ಯಕ್ತ' ಎಂಬ ಈ ಚಿತ್ರದ ನಾಯಕ ಸಂಚಾರಿ ವಿಜಯ್. ಈ ಹುಡುಗರಲ್ಲಿ ಹುಡುಗನಾಗಿ ಆತ ಸಹಜವಾಗಿ ಬೆರೆತು ಪ್ರೋತ್ಸಾಹಿಸಿದ್ದನ್ನು ನೋಡಿ ಆತನ ಬಗ್ಗೆ ಕುತೂಹಲವಾಯ್ತು. ಹಾಗೆ ನೋಡಿದರೆ, ಈ ಹಿಂದೆ ಶ್ರೇಷ್ಠ ನಟ ಪ್ರಶಸ್ತಿ ಪಡೆದವರಿಗೆ ಸಿಕ್ಕ ಗೌರವಗಳು ವಿಜಯನಿಗೆ ಸಿಗಲಿಲ್ಲ. ಚೋಮನ ಪಾತ್ರ ಮಾಡಿದ ವಾಸುದೇವರಾವ್‌ಗೆ ಸಿಕ್ಕ ಸನ್ಮಾನ, ಪ್ರೋತ್ಸಾಹಗಳು ವಿಜಯನಿಗೆ ಸಿಗಲಿಲ್ಲ. ವಾಸುದೇವರಾವ್ ಚೋಮನಾಗಿ ಬದಲಾಗಲು ಅವಕಾಶ ಕಲ್ಪಿಸಿದ್ದ ಬಿ.ವಿ. ಕಾರಂತರೂ ಆತನನ್ನು ಸಂಪೂರ್ಣ ಚೋಮನಾಗಿಯೇ ಚಿತ್ರಿಸಿ ವಾಸುದೇವರಾವ್ ಎಂಬ ವ್ಯಕ್ತಿಯನ್ನೇ ಕಾಣೆಯಾಗಿಸಿದ್ದರು. ಅವರಂತಹದೇ ಶ್ರಮವನ್ನು ವಿಜಯ್ 'ನಾನು ಅವನಲ್ಲ ಅವಳು' ಚಿತ್ರಕ್ಕೆ ಹಾಕಿದ್ದಾರೆ. ಈ ಇಬ್ಬರು ಕಲಾವಿದರಿಗೆ ಹೋಲಿಸಿದರೆ 'ತಬರನ ಕತೆ'ಯಲ್ಲಿ ನಟಿಸಿದ್ದ ಚಾರುಹಾಸನ್ ಬಹಳ ಸುಲಭವಾಗಿ ಶ್ರೇಷ್ಠನಟ ಪ್ರಶಸ್ತಿ ಪಡೆದುಕೊಂಡು ಹೋದರು. ಕಾಸರವಳ್ಳಿ ಹೇಳಿದಂತೆ ಕೈಬಾಯಿ ಆಡಿಸಿ ಗರ ಹೊಡೆದಂತೆ ನೋಡುತ್ತ ಅಷ್ಟಕ್ಕೆ ಪ್ರಶಸ್ತಿ ಹೊಡೆದುಕೊಂಡು ಹೋದರು. ಅಂತಹ ನಟರು ಕನ್ನಡದಲ್ಲೇ ಇದ್ದರೂ ನೋಡುವ ಕಣ್ಣು ಬೇಕಷ್ಟೆ. ಸಂಚಾರಿ ವಿಜಯ್ 'ನಾನು ಅವನಲ್ಲ ಅವಳು' ಪಾತ್ರ ವಹಿಸಿಕೊಂಡ ಮೇಲೆ ಅದನ್ನು ನಿರ್ವಹಿಸುವುದು ಒಂದು ಸವಾಲೆ ಆಗಿತ್ತು, ಮಂಗಳಮುಖಿಯರೊಡನೆ ಬೆರೆತು, ಅವರ ಹಾವಭಾವಗಳನ್ನು ಗ್ರಹಿಸಿ ಅಭಿನಯಿಸುವುದು ಕಷ್ಟದ ಕೆಲಸವಾಗಿತ್ತು. ಆದರೆ ಪ್ರತಿಭಾವಂತನಾಗಿದ್ದ ವಿಜಯ್ ಆ ಪಾತ್ರವನ್ನು ಸಹಜವಾಗಿ ಅಭಿನಯಿಸಿ ತನ್ನ ಕೆಲಸ ಮುಗಿಸಿದ ತೃಪ್ತಿಯಿಂದ ಸುಮ್ಮನಿದ್ದರು. ಪ್ರಶಸ್ತಿ ಗಿಶಸ್ತಿ ಅವರ ತಲೆಯೊಳಗೆ ಎಂದೂ ಸುಳಿದಿರಲಿಲ್ಲ, ಆದರೆ ಮಮ್ಮುಟಿ, ಶಾಹಿದ್‌ಕಪೂರ್ ಇಂತಹ ಮಹಾನಟರನ್ನು ಹಿಂದಿಕ್ಕಿ ಶ್ರೇಷ್ಠನಟ ಪ್ರಶಸ್ತಿ ಪಡೆದಾಗ ಅದನ್ನು ನಂಬಲಾರದ ಸ್ಥಿತಿಯಲ್ಲಿದ್ದರು. ಆದರೂ ಇದರಿಂದೇನು ಆತನ ತಲೆ ತಿರುಗಿಲ್ಲ, ಎಂದಿನಂತೆ ಸಹಜವಾಗಿ ಸಣ್ಣಪುಟ್ಟ ಪಾತ್ರಗಳಾದರೂ ಒಪ್ಪಿಕೊಂಡು ನಟಿಸುತ್ತಿದ್ದಾನೆ.

ಈ ನಡುವೆ ಕಡೂರು ಪ್ರಾಂತ್ಯದವರು ವಿಜಯ್‌ಗೆ ಸನ್ಮಾನ ಮಾಡುತ್ತೇವೆಂದು ಹೇಳಿ ನಿರಾಸಕ್ತಿ ತೋರಿದ್ದಾರೆ. ಇದೇನು ಅಚ್ಚರಿದಾಯಕ ಸಂಗತಿಯಲ್ಲ, ಕಡೂರು ಪ್ರಾಂತ್ಯದಲ್ಲಿ ಸಾಹಿತಿ ಕಲಾವಿದರನ್ನು ನಡೆಸಿಕೊಳ್ಳುವುದೇ ಹಾಗೆ. ಈ ಹಿಂದೆ ರಹಮತ್ ತರೀಕೆರೆಯನ್ನು ತಾಲ್ಲೂಕು ಸಾಹಿತ್ಯ ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಿ ಆತ ಹೋಗಿ ಬಸ್‌ಸ್ಟಾಂಡಿನಲ್ಲಿ ಇಳಿದಾಗ ಕರೆದುಕೊಂಡು ಹೋಗಿ ಲಾಡ್ಜಿಗೆ ಬಿಡುವವರೂ ಇರಲಿಲ್ಲ, ನಂತರ ಊಟ ಮಾಡಿಸುವವರೂ ಇರಲಿಲ್ಲ, ಬೆಳಗ್ಗೆ ಎದ್ದಾಗ ತಿಂಡಿಯನ್ನೂ ಕೊಡಿಸದೆ ಮೆರವಣಿಗೆಗೆ ಎಳೆದುಕೊಂಡು ಹೋಗಿ ನಿಲ್ಲಿಸಿದ್ದರು. ಸೌಜನ್ಯಕ್ಕೆ ಸಹಿಸಿಕೊಂಡ ರಹಮತ್ ಉಳಿದು ಬದುಕಿದ್ದೇ ಹೆಚ್ಚು! ಇಂತಹ ಜಾಗದ ಜನ ವಿಜಯ್‌ನನ್ನು ಕರೆದು ಸನ್ಮಾನ ಮಾಡುವ ಆಸೆ ತೋರಿ ನಿರಾಶೆಯುಂಟುಮಾಡಿಸಿದ್ದು ವಿಜಯ್‌ಗೂ ಬೇಸರವಿಲ್ಲವಂತೆ. ಏಕೆಂದರೆ, ನಮ್ಮವರನ್ನು ನಾವು ಅರ್ಥಮಾಡಿಕೊಂಡಾಗ ಯಾವ ಬೇಸರವೂ ಆಗುವುದಿಲ್ಲ. ಆದರೂ ಮತ್ತ ಇಲ್ಲಿನ ಶಾಸಕನಾದ ಮೇಲೆ ಒಂದಿಷ್ಟು ಸುಧಾರಿಸಬೇಕಿತ್ತು ಎಂಬುದಷ್ಟೆ ನಮ್ಮ ಆಕ್ಷೇಪಣೆ.

■ ಬಿ. ಚಂದ್ರೇಗೌಡ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 18-01-2017 RNI No. KARKAN2005/1464

ಸಿಟ್ಟಿಗೆದ್ದ ಶಿವಣ್ಣ



ಶಿವರಾಜ್‌ಕುಮಾರ್ ಸಿಟ್ಟಿಗೆದ್ದಿದ್ದಾರೆ. ಸುಖಾಸುಮ್ಮನೆ ಕಲಾವಿದರ ಮೇಲೆ ಗೂಬೆ ಕೂರಿಸುವುದಕ್ಕೆ ಅವರು ಬೇಸರಿಸಿಕೊಂಡಿದ್ದಾರೆ. ಕನ್ನಡದ ಕಲಾವಿದರು ಕಿರುತೆರೆಯಲ್ಲಿ ಬ್ಯುಸಿಯಾಗಿದ್ದಾರೆ. ಹಾಗಾಗಿ ಸಿನಿಮಾ ರಂಗದ ಮೇಲೆ ಭಾರೀ ಹೊಡೆತ ಬೀಳುತ್ತಿದೆ ಅನ್ನುವುದು ಕೆಲವು ನಿರ್ಮಾಪಕರ ಆರೋಪ. ಇದಕ್ಕೆ ಶಿವಣ್ಣ ತಿರುಗೇಟು ನೀಡಿದ್ದಾರೆ. "ನನ್ನಿಂದ ಯಾವುದೇ ನಿರ್ಮಾಪಕನಿಗೆ ತೊಂದರೆ ಆದರೆ, ಸಿನಿಮಾರಂಗವನ್ನೇ ಬಿಡಲು ಸಿದ್ಧ" ಎಂದಿದ್ದಾರೆ. ಕಲಾವಿದರ ಪರ ಬ್ಯಾಟಿಂಗ್ ಮಾಡಿರುವ ಇವರು, "ಯಾವ ಕಲಾವಿದನೂ ನಿರ್ಮಾಪಕನಿಗೆ ತೊಂದರೆ ಕೊಡಲಾರ. ಸಿನಿಮಾದಲ್ಲಿ ನಟಿಸುವುದು ಮಾತ್ರವಲ್ಲ, ಪ್ರಚಾರದಲ್ಲೂ ನಾವು ತೊಡಗಿಕೊಳ್ಳುತ್ತೇವೆ. ಕೇಳಿದಾಗೆಲ್ಲ ಹೋಗಿ ನಟಿಸಿ ಬರುತ್ತೇವೆ. ಸುಖಾಸುಮ್ಮನೆ ಆರೋಪ ಮಾಡಬಾರದು" ಅನ್ನುವುದು ಶಿವಣ್ಣನ ಮಾತು.

ಕಿರುತೆರೆಯಲ್ಲಿ ಸಿನಿಮಾ ನಟರು ಭಾಗವಹಿಸುವ ವಿಚಾರವಾಗಿ ಮುಸುಕಿನ ಗುದ್ದಾಟ ಮೂರ್‍ನಾಲ್ಕು ವರ್ಷಗಳಿಂದ ನಡೆಯುತ್ತಲೇ ಇದೆ. ಈಗಲೂ ಅದಕ್ಕೆ ತಾರ್ಕಿಕ ಅಂತ್ಯ ನೀಡಲು ಸಾಧ್ಯವಾಗಿಲ್ಲ. ಈ ಬಾರಿ ಶಿವರಾಜ್‌ಕುಮಾರ್ ಎಲ್ಲರ ಜತೆ ಕೂತು ಮಾತಾಡಲಿದ್ದಾರಂತೆ. ಅದಕ್ಕೊಂದು ಅಂತ್ಯ ಸಿಗಬಹುದಾ ಕಾದು ನೋಡಬೇಕು.

ದುರಂತಕ್ಕೆ ಅಂತ್ಯ

'ಮಾಸ್ತಿಗುಡಿ' ಸಿನಿಮಾದ ದುರಂತದಲ್ಲಿ ಮಕ್ಕಳನ್ನು ಕಳೆದುಕೊಂಡವರ ನೋವು ಹಾಗೆಯೇ ಇದೆ. ಆದರೆ ಸಿನಿಮಾ ತಂಡ ಮಾತ್ರ ಮತ್ತೆ ಶೂಟಿಂಗ್‌ನಲ್ಲಿ ತೊಡಗಿದೆ. 'ಮಾಸ್ತಿಗುಡಿ'ಯ ಪ್ರಕರಣ ಅಂತ್ಯ ಆಗುವತನಕ ಯಾವುದೇ ಸಿನಿಮಾ ಸಂಬಂಧಿತ ಚಟುವಟಿಕೆಗಳಲ್ಲಿ ಭಾಗವಹಿಸಬಾರದೆಂದು ಸಿನಿಮಾ ತಂಡಕ್ಕೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ತಾಕೀತು ಮಾಡಿತ್ತು. ಆದರೆ ತಮ್ಮ ಪ್ರಭಾವ ಬಳಸಿಕೊಂಡು ವಾಣಿಜ್ಯ ಮಂಡಳಿಯನ್ನು ಸುಮ್ಮನಾಗಿಸುವಲ್ಲಿ ಸಿನಿಮಾ ತಂಡ ಯಶಸ್ವಿಯಾಗಿದೆ. ಸದ್ಯದಲ್ಲಿಯೇ ಬಾಕಿ ಉಳಿದಿರುವ ಸಿನಿಮಾದ ಶೂಟಿಂಗ್ ಕೂಡ ಕಂಪ್ಲೀಟ್ ಆಗಲಿದೆಯಂತೆ.

ತಮ್ಮ ಪಾಡಿಗೆ ತಾವು ಶೂಟಿಂಗ್‌ನಲ್ಲಿ ತೊಡಗಿರುವ ಸಿನಿಮಾ ತಂಡವು ದುರಂತದಲ್ಲಿ ಮಡಿದವರನ್ನು ಮರೆಯಿತಾ ಎಂಬ ಪ್ರಶ್ನೆಗೆ ವಿಜಯ್ ಹೇಳುವುದು ಹೀಗೆ: "ಸಿನಿಮಾ ಬಿಡುಗಡೆ ಮಾಡಿ ಅದರಲ್ಲಿ ಬಂದ ಲಾಭವನ್ನು ಆಯಾ ಕುಟುಂಬಗಳಿಗೂ ಹಂಚಲಾಗುತ್ತದೆ. ಯಾವುದೇ ಕಾರಣಕ್ಕೂ ಆ ಕುಟುಂಬಗಳ ಕೈಬಿಡುವ ಪ್ರಶ್ನೆಯೇ ಇಲ್ಲ."

ಅಂದಹಾಗೆ ದುನಿಯಾ ವಿಜಯ್ ಮತ್ತೊಂದು ಸಿನಿಮಾವನ್ನು ಒಪ್ಪಿಕೊಂಡಿದ್ದು, ಆ ಸಿನಿಮಾದ ಶೂಟಿಂಗ್ ಕೂಡ ಶುರುವಾಗಿದೆ. ಈ ಚಿತ್ರವನ್ನು ಆರ್.ಚಂದ್ರು ನಿರ್ದೇಶನ ಮಾಡುತ್ತಿದ್ದು, 'ಕನಕ' ಎಂದು ಹೆಸರಿಡಲಾಗಿದೆ. ಕನಕದಾಸರಿಗೂ ಈ ಸಿನಿಮಾಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ, ಅವರ ಹಾಡುಗಳ ಪ್ರಭಾವ ಸಿನಿಮಾದಲ್ಲಿ ಇರಲಿದೆಯಂತೆ. ಈ ಚಿತ್ರದಲ್ಲಿ ಡಾ.ರಾಜ್‌ಕುಮಾರ್ ಅಭಿಮಾನಿಯಾಗಿ ವಿಜಯ್ ನಟಿಸುತ್ತಿದ್ದಾರೆ.

ಸ್ಪೆಷಲ್ ಹಾಡಿನಲ್ಲಿ ಶುಭಾ

'ಮೊಗ್ಗಿನ ಮನಸು' ಮತ್ತು 'ಸ್ಲಂ ಬಾಲ' ಸಿನಿಮಾಗಳ ಮೂಲಕ ಭರವಸೆ ಮೂಡಿಸಿದ್ದ ನಟಿ ಶುಭಾ ಪೂಂಜಾ ಸದ್ಯ ಏನು ಮಾಡುತ್ತಿದ್ದಾರೆ ಅಂತ ಸ್ವತಃ ಅವರಿಗೇ ಗೊತ್ತಿಲ್ಲ, ಆದರೆ ಸಲ್ಲದ ಕಾರಣಕ್ಕಾಗಿ ಅವರು ಸುದ್ದಿ ಆಗುತ್ತಲೇ ಇದ್ದಾರೆ. ಮೊನ್ನೆಯಷ್ಟೇ ಚಿತ್ರಸಾಹಿತಿಯೊಬ್ಬರನ್ನು ಮದುವೆಯಾಗಿದ್ದಾರೆ ಅನ್ನುವ ಸುದ್ದಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತು. ಆ ಫೋಟೋ ಕೂಡ ವೈರಲ್ ಆಗಿತ್ತು, ಆನಂತರ ಅದು ಸಿನಿಮಾವೊಂದರ ಸ್ಟಿಲ್ ಎಂದು ಗೊತ್ತಾಯಿತು. ಈಗ ಮತ್ತೊಂದು ಹಾಟ್ ಫೋಟೋ ಹರಿದಾಡುತ್ತಿದೆ. ಆ ಕುರಿತು ಸ್ಪಷ್ಟನೆ ಕೊಡಲು ಸ್ವತಃ ಸಿನಿಮಾ ತಂಡದವರೇ ಮುಂದೆ ಬಂದಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಫೋಟೋ 'ಆರ್‌ಜಿವಿ' ಸಿನಿಮಾದ ಸ್ಪೆಷಲ್ ಸಾಂಗ್‌ನ ಫೋಟೋವಂತೆ. ಈ ಹಾಡಿಗಾಗಿ ಶುಭಾ ಕೊಂಚ ತೂಕ ಇಳಿಸಿಕೊಂಡು ಹಾಟ್ ಹಾಟ್ ಆಗಿ ಕಾಣಿಸಿಕೊಂಡಿದ್ದಾರಂತೆ. ಹಾಗಾಗಿ ಫೋಟೋದ ಬಗ್ಗೆ ಬೇರೆ ಅರ್ಥವನ್ನು ಕಲ್ಪಿಸಬೇಕಿಲ್ಲ ಅನ್ನುತ್ತಿದೆ ಚಿತ್ರತಂಡ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ, ಈ ಸಿನಿಮಾದ ನಾಯಕಿಯಾಗಿ ಶುಭಾ ನಟಿಸಬೇಕಿತ್ತಂತೆ. ಆದರೆ, ಅದು ಸಾಧ್ಯವಾಗಿಲ್ಲ, ಹಾಗಾಗಿ ಹಾಡೊಂದರಲ್ಲಿ ಮಾತ್ರ ಕಾಣಿಸಿಕೊಂಡಿದ್ದಾರೆ. ಅಲ್ಲದೇ ಆ ಸಾಂಗ್‌ಗೆ ಅವರೇ ಖುದ್ದಾಗಿ ಕಾಸ್ಟ್ಯೂಮ್ ಡಿಸೈನ್ ಮಾಡಿಕೊಂಡಿದ್ದಾರೆ. ಈ ಹಾಡು ವಿಭಿನ್ನವಾಗಿದೆಯಂತೆ. ಹುಡುಗಿಯರು ಮನಸ್ಸಿನಲ್ಲಿ ಹುಡುಗರನ್ನು ಏನೆಲ್ಲಾ ಬೈದುಕೊಳ್ಳುತ್ತಾರೆ ಎಂಬ ಸಾಹಿತ್ಯ ಇಲ್ಲಿದೆ. ಹಾಡಿಗಾಗಿ ಕುಣಿಯಲೆಂದೇ ಯೋಗ ಮತ್ತು ಡಯಟ್ ಮಾಡಿ ಬರೋಬ್ಬರಿ ಐದು ಕೆಜಿ ತೂಕ ಇಳಿಸಿಕೊಂಡಿದ್ದಾರಂತೆ. ಬೆಂಗಳೂರು ಸಮೀಪದ ಡಾಬಾದಲ್ಲಿ ಈ ಹಾಡು ಶೂಟ್ ಆಗಿದ್ದು, ನಾಯಕ ಅರು ಗೌಡ ಕೂಡ ಈ ಹಾಡಿನಲ್ಲಿದ್ದಾರೆ.



ಗಣೇಶ್‌ಗೆ ಗೋಲ್ಡನ್ ಯುಗ



ಒಂದು ಕಾಲದಲ್ಲಿ ಗೋಲ್ಡನ್ ಸ್ಟಾರ್ ಆಗಿದ್ದ ಗಣೇಶ್, ಗೋಲ್ಡ್ ರೇಟ್‌ನಂತೆಯೇ ಏರುಪೇರುಗಳನ್ನು ಕಾಣುತ್ತಲೇ ಬಂದರು. ಈಗ ಮತ್ತೆ ಗೋಲ್ಡ್ ರೇಟು ಗಗನಕ್ಕೆ ಏರಿದೆ. ಹಾಗಾಗಿ ಅವರು ಕೂಡ ಅನೇಕ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಸದ್ಯ ಯೋಗರಾಜ್ ಭಟ್ ನಿರ್ದೇಶನದ 'ಮುಗುಳುನಗೆ' ಸಿನಿಮಾ ಶೂಟಿಂಗ್‌ನಲ್ಲಿ ಬಿಜಿ ಇದ್ದಾರೆ ಗಣೇಶ್. ಆನಂತರ ಸುನಿ ನಿರ್ದೇಶನದ ಮತ್ತೊಂದು ಚಿತ್ರವನ್ನು ಒಪ್ಪಿಕೊಂಡಿದ್ದಾರೆ. ಇದು ಮುಗಿಯುತ್ತಿದ್ದಂತೆಯೇ 'ಲೂಸಿಯಾ' ಖ್ಯಾತಿಯ ನಿರ್ದೇಶಕ ಪವನ್‌ಕುಮಾರ್ ಸಿನಿಮಾದಲ್ಲಿ ನಟಿಸಬೇಕು. ಇವೆಲ್ಲವೂ ಮುಗಿದ ಮೇಲೆ ಯೋಗರಾಜ್ ಭಟ್‌ರ ಮತ್ತೊಂದು ಚಿತ್ರಕ್ಕೂ ಸಹಿ ಮಾಡಿದ್ದಾರೆ. ಆ ಚಿತ್ರಕ್ಕೆ 'ಗಾಳಿಪಟ 2' ಎಂಬ ಹೆಸರನ್ನೂ ಇಡಲಾಗಿದೆ. ಅಲ್ಲದೇ ಈಗಾಗಲೇ ಶೂಟಿಂಗ್ ಪೂರೈಸಿರುವ 'ಪಟಾಕಿ' ಚಿತ್ರ ರಿಲೀಸ್ ಆಗಬೇಕು. ಹಾಗಾಗಿ ವರ್ಷಪೂರ್ತಿ ಗಣೇಶ್ ಬ್ಯುಸಿಯಲ್ಲಿದ್ದಾರೆ.

ಈ ಕುರಿತು ಗಣೇಶ್ ಹೇಳುವುದು ಹೀಗೆ "ಯಾವತ್ತೂ ನಾನು ಸಿನಿಮಾ ಇಲ್ಲದೇ ಮನೆಯಲ್ಲಿ ಕುಳಿತಿಲ್ಲ, ಮೂರ್‍ನಾಲ್ಕು ಸಿನಿಮಾಗಳನ್ನು ಮಾಡುತ್ತಲೇ ಬಂದಿದ್ದೇನೆ. ಒಂದೊಂದು ಸಲ ಸಿನಿಮಾಗಳು ಬಾಕ್ಸ್ ಆಫೀಸ್‌ನಲ್ಲಿ ಕೈ ಕೊಟ್ಟಿರಬಹುದು. ಆದರೆ ನನ್ನ ಪಾಲಿನ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ್ದೇನೆ. ಅದೇ ನನ್ನನ್ನು ಕೈ ಹಿಡಿದಿದೆ. ಸದಾ ಪ್ರೇಕ್ಷಕರಿಗೆ ಮನರಂಜನೆಯನ್ನು ಕೊಡುತ್ತಲೇ ಇರುತ್ತೇನೆ."

ಜೇಮ್ಸ್ ಸದ್ಯಕ್ಕಿಲ್ಲ

'ರಾಜಕುಮಾರ' ಸಿನಿಮಾದ ಶೂಟಿಂಗ್ ನಂತರ ಪುನೀತ್ ರಾಜ್‌ಕುಮಾರ್ 'ಜೇಮ್ಸ್' ಸಿನಿಮಾದ ಚಿತ್ರೀಕರಣದಲ್ಲಿ ಪಾಲ್ಗೊಳ್ಳಲಿದ್ದಾರೆ ಅನ್ನುವ ಸುದ್ದಿ ಇತ್ತು. ಈಗದು ಸುಳ್ಳಾಗಿದೆ. ಇನ್ನೂ ಈ ಸಿನಿಮಾದ ಕತೆಯನ್ನೇ ಪುನೀತ್ ಒಪ್ಪಿಕೊಂಡಿಲ್ಲವಂತೆ. ನಿರ್ದೇಶಕ ಚೇತನ್ ಕೂಡ ಚಿತ್ರಕತೆಯನ್ನು ಸಂಪೂರ್ಣವಾಗಿ ಬರೆದಿಲ್ಲವಂತೆ. ಹಾಗಾಗಿ ಪುನೀತ್ ಅವರ ಮುಂದಿನ ಸಿನಿಮಾ 'ಕಪಿಚೇಷ್ಟೆ'. ಈ ಸಿನಿಮಾವನ್ನು ಹರ್ಷ ನಿರ್ದೇಶಿಸಲಿದ್ದು, ಇದು ತಮಿಳಿನ 'ಪೂಜೈ' ಚಿತ್ರದ ರೀಮೇಕ್ ಆಗಿದೆ.

ಮೊನ್ನೆಯಷ್ಟೇ ಈ ಸಿನಿಮಾವನ್ನು ಪುನೀತ್ ಒಪ್ಪಿಕೊಂಡಿದ್ದರು. ಅಲ್ಲದೇ ಈ ಮೊದಲು ಇನ್ನೂ ಮೂರು ಸಿನಿಮಾಗಳಿಗೂ ಇವರು ಸಹಿ ಮಾಡಿದ್ದರು. ಎಲ್ಲವನ್ನೂ ಬಿಟ್ಟು ಹರ್ಷಗೆ ಕಾಲ್‌ಶೀಟ್ ಕೊಟ್ಟಿದ್ದಕ್ಕೆ ಕಾರಣ 'ಪೂಜೈ'ಯ ಪ್ರಭಾವವಂತೆ. ಅಲ್ಲಿ ಸೂಪರ್‌ಹಿಟ್ ಆದ ಚಿತ್ರವಿದು. ಇದೇ ಟೈಮ್‌ನಲ್ಲಿ ಈ ಚಿತ್ರವನ್ನು ಮಾಡಿದರೆ ಜನರನ್ನು ಒಪ್ಪಿಸುವುದಕ್ಕೆ ಕಷ್ಟವಾಗಲಾದರು. ಹಾಗಾಗಿ ನಿರ್ಮಾಪಕರ ಒತ್ತಾಸೆಗೆ ಈ ಸಿನಿಮಾ ಮಾಡಲು ಮುಂದಾಗಿದ್ದಾರೆ ಎನ್ನಲಾಗುತ್ತಿದೆ. ಅಂದಹಾಗೆ ಈ ಸಿನಿಮಾವನ್ನು ಎನ್.ಕುಮಾರ್ ನಿರ್ಮಾಣ ಮಾಡಲಿದ್ದಾರೆ. ಬಹುತೇಕ ಹೊಸ ತಂಡವೇ ತಾರಾಗಣದಲ್ಲಿ ಇರಲಿದೆಯಂತೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com